ಮಾಡಬಹುದು ಎಂದು ಹೇಳಿದರು. ಹಾಗೆ ಇವತ್ತು over load ಆಗಿರಬಹುದು, ಬೇರೆ ಬೇರೆ ರೀತಿಯ ಅವ್ಯವಹಾರ ಆಗಿರಬಹುದು. ಈ ಇಲಾಖೆಯಲ್ಲಿ ಸಾಧಾರಣ ಮಟ್ಟಿಗೆ ನಾನು ಸುಧಾರಣೆಯನ್ನು ನಾನು ತಂದಿದ್ದೇನೆ. ಇರುವಷ್ಟು ದಿವಸ ಗಂಭೀರವಾದ ರೀತಿಯಲ್ಲಿ ಇವತ್ತು ಏನೇನು ರಮೇಶ್‌ಕುಮಾರ್‌ರವರು ಹೇಳಿದ್ದಾರೆ ಅದರ ಬಗ್ಗೆ ಬೇಜಾರು ಎಂದು ಮಾಡಿಕೊಳ್ಳುವುದಿಲ್ಲ. ಟೀಕೆಯನ್ನು ಮಾಡಿದಾಗ ಅದನ್ನು ಟೀಕೆ ಎಂದು ಸಹ ಅಂದುಕೊಳ್ಳುವುದಿಲ್ಲ. ಅದನ್ನು ಸ್ವಾಗತ ಮಾಡು ಶಕ್ತಿ ಮೀರಿ ಇದರ ಬಗ್ಗೆ ಕ್ರಮ ಜರುಗಿಸುತ್ತೇನೆ ಎಂದು ತಮ್ಮ ಮೂಲಕ ಹೇಳುತ್ತೇನೆ.

ಉಪಾಧ್ಯಕ್ಷರು : ಈಗ ಸದನವನ್ನು ಮಧ್ಯಾಹ್ನ 3–45ಕ್ಕೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2–31 ಕ್ಕೆ ಮುಕ್ತಾಯಗೊಂಡು ಮತ್ತೆ 3–45ಕ್ಕೆ ಸೇರಲು ತೀರ್ಮಾನಿಸಿತು)

(ವಿಧಾನ ಸಭೆಯ ಕಲಾಪವು ಸಂಜೆ 4.11ಕ್ಕೆ ಪ್ರಾರಂಭವಾಯಿತು.
ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷಪೀಠವನ್ನು ಅಲಂಕರಿಸಿದರು)

5) ವಿತ್ತೀಯ ಕಾರ್ಯಕಲಾಪ 2007–08ನೇ ಸಾಲಿನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ.

ಅಧ್ಯಕ್ಷರು : ಎಸ್.ಎಸ್.ಪಾಟೀಲ್‌ರವರೆ ನಿಮ್ಮ ಭಾಷಣ ಇನ್ನೂ ಮುಗಿದಿಲ್ಲವೇ?

ಶ್ರೀ ಎಸ್.ಎಸ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, ನೀವು ಇದ್ದೀರಿ, ಬೇರೆ ಎಲ್ಲ ಚರ್ಚೆ ಆಯಿತು.

ಅಧ್ಯಕ್ಷರು : ಬೇಗ ಮುಗಿಸಿಬಿಡಿ.

ಶ್ರೀ ಎಸ್.ಎಸ್. ಪಾಟೀಲ್(ಮುಂಡರಗಿ) : ಸನ್ಮಾನ್ಯ ಅಧ್ಯಕ್ಷರೆ, ಮೊದಲನೆಯದಾಗಿ ತಾವು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸುತ್ತಾ, ಈ ದಿವಸ ನಾವು ಈ ಸದನ ಪ್ರಾರಂಭವಾದಂತಹ ಸಂದರ್ಭದಲ್ಲಿ ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕಾಗಿತ್ತು ಎಂದು ಅನಿಸುತ್ತದೆ. ಆದರೆ ಅದು ಗೊತ್ತಾಗಲಿಲ್ಲ. ನಮ್ಮ ರಾಷ್ಟ್ರದ ಅತ್ಯುನ್ನತ ಪದವಿಯಾದಂತಹ ರಾಷ್ಟ್ರಮಾತೆಯಾಗಿ ಆಯ್ಕೆಯಾಗಿರುವಂತಹ ಪ್ರತಿಭಾ ಪಾಟೀಲ್‌ರವರಿಗೆ ನಾನು ಈ ಮೂಲಕ ಕೃತಜ್ಞತೆಗಳನ್ನು ಹಾಗೂ ಶುಭಾಶಯಗಳನ್ನು ಕೂಡ ಹೇಳಬಯಸುತ್ತೇನೆ. ಅದೇ ರೀತಿ ನಮ್ಮ ಹಿಂದಿನ ರಾಷ್ಟ್ರಪತಿಯಾದ ಡಾ:ಅಬ್ದುಲ್‌ಕಲಾಂರವರು ಕೂಡ ಕಳೆದ ಐದು ವರ್ಷಗಳಿಂದ ರಾಷ್ಟ್ರದ ಹಿತಚಿಂತನೆ ಮಾಡಿ ಅದರಲ್ಲೂ ನಮ್ಮ ವಿಧಾನಸಭೆಗೆ ಬಂದು ನಮ್ಮ ರಾಜ್ಯದ ಬಗ್ಗೆ ಉತ್ತಮವಾದ ಕಲ್ಪನೆಯನ್ನು ಕೊಟ್ಟು., ರಾಜ್ಯ ಹೇಗೆ ನಡೆಯಬೇಕು ಎಂದು ಕಳಕಳಿಯ ಮಾತು ಹೇಳಿದ್ದಾರೆ. ಅವರಿಗೂ ಕೂಡ ಅಭಿನಂದಿಸುತ್ತೇನೆ.

ತದನಂತರ ನಮ್ಮ ಮಾನ್ಯ ಮುಖ್ಯಮಂತ್ರಿಗಳಗೆ, ಮಾನ್ಯ ಉಪ ಮುಖ್ಯಮಂತ್ರಿಗಳಿಗೆ, ಮಾನ್ಯ ಗೃಹಸಚಿವರಿಗೆ, ಪ್ರಾಮುಖ್ಯವಾಗಿ ಸರ್ಕಾರ ಹಾಗೂ ನಮ್ಮ ಸದನಸದ ಎಲ್ಲಾ ಸದಸ್ಯರಿಗೆ ಅನುದೇವ ಹೊರಗಣನವ ಎಂಬ ಒಂದು ಕೆಟ್ಟ ಕೃತಿಯನ್ನು ಮುಟ್ಟುಗೋಲು ಹಾಕಿಕೊಂಡಿದ್ದಕ್ಕಾಗಿ ಬಸವ ಅಭಿಮಾನಿಗಳ, ಅಂಬೇಡ್ಕರ್ ಅಭಿಮಾನಿಗಳ ಹಾಗೂ ಅಭಿಮಾನಿಗಳ ಪರವಾಗಿ ನಾನು ಈ ಮೂಲಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಇಂದು ನಮ್ಮ ಅರಣ್ಯ ಮಂತ್ರಿಗಳಾದ ಚೆನ್ನಿಗಪ್ಪನವರು ಇದ್ದಾರೆ. ತಾವು ಇರಲಿಲ್ಲ, ನಾನು ಮೊನ್ನೆ ಹೇಳೀದೆ. ತಮಗೆ ಬಹಳ ಮಹತ್ವದ ಖಾತೆಯನ್ನು ಕೊಟ್ಟಿದೆ. ನಮ್ಮ ರಾಜ್ಯದ ಎಲ್ಲಾ ಯೋಜನೆಗಳು ಯಶಸ್ವಿಯಾಗಬೇಕಾದರೆ, ಈ ರಾಜ್ಯದ ಸುಖ, ಸಮೃದ್ಧಿಯಿಂದ, ನೆಮ್ಮದಿಯಿಂದ ಮುಂದುವರಿಯಬೇಕಾದರೆ, ಎಲ್ಲಾ ಜನರು ಸುಖ, ಸಂಪತ್ತು ನೆಮ್ಮದಿಯಿಂದ ಇರಬೇಕಾದರೆ ಬಹಳ ಪ್ರಮುಖವಾದ ಇಲಾಖೆ ಅರಣ್ಯ ಮತ್ತು ಪರಿಸರ ಇಲಾಖೆ. ತಾವು ಆ ದಿವಸ ಇರಲಿಲ್ಲ, ನಾನು ಸನ್ಮಾನ್ಯ ಯಡಿಯೂರಪ್ಪನವರಿಗೆ ಸುಮಾರು ಒಂದು ಸಾವಿರ ಕೋಟಿ ರೂಪಾಯಿಯಾದರೂ ಆ ಇಲಾಖೆಗೆ ಕೊಡಿ, ಆ ಇಲಾಖೆಗೆ ಬಹಳ ಕಡಿಮೆ ಹಣ ಅಂದರೆ 137 ಕೋಟಿ ರೂಪಾಯಿ ಇಟ್ಟಿದ್ದೀರಿ, ಅದರಿಂದ ಏನು ಮಾಡುವುದಕ್ಕಾಗುತ್ತದೆ ಎಂದು ಹೇಳಿದ್ದೆನು. ತಮಗೆ ನಾನು ಒಂದು ಮಾತು ಹೇಳುತ್ತೇನೆ. 2006–07ನೇ ಸಾಲಿನ ವಾರ್ಷಿಕ ವರದಿಯನ್ನು ಕೊಟ್ಟಿದ್ದೀರಿ. ಅದರಲ್ಲಿ ನಗರ ಪ್ರದೇಶವನ್ನು ಹಸಿರೀಕರಣಗೊಳಿಸುವುದಕ್ಕೆ 293.64 ಲಕ್ಷ ರೂಪಾಯಿಯನ್ನು ಕೊಟ್ಟಿದ್ದಾರೆ.ಆದರೆ ಇವರು 89 ಲಕ್ಷ ರೂಪಾಯಿಯನ್ನು ಖರ್ಚು ಮಾಡಿದ್ದಾರೆ. ದುಡ್ಡು ಇದ್ದರೂ ಕೂಡ ಇವರು ಖರ್ಚು ಮಾಡುವುದಿಲ್ಲವಲ್ಲ, ಯಾವಾಗ ರಾಜ್ಯವನ್ನು ಸುಭೀಕ್ಷೆಯಲ್ಲಿ ತರುತ್ತೀರಿ ಹಾಗೂ ಅರಣ್ಯವನ್ನು ಬೆಳೆಸುತ್ತೀರಿ? ಸಾರ್ವಜನಿಕ ವಿತರಣೆಗಾಗಿ ಸಸಿ ಬೆಳೆಸುವ ಕಾರ್ಯಕ್ರಮ ಇದೆ. ಇದಕ್ಕೆ 500 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ, ಅದರಲ್ಲಿ ಇವರು 140 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ನಿಸರ್ಗ ಪ್ರವಾಸೋದ್ಯಮ ಯೋಜನೆ, ಎಂತೆಂಥಹ ಒಳ್ಳೆಯ ಯೋಜನೆಗಳು ಇವೆ. 200 ಲಕ್ಷ ರೂಪಾಯಿ ಇಟ್ಟರೆ 19 ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಸಾಮಾಜಿಕ ಅರಣ್ಯಗಳಲ್ಲಿ ಯೋಜನೆ, ಇದಕ್ಕೆ ಇಟ್ಟಿರುವ ಹಣವನ್ನು ನಿಮ್ಮವರು ಖರ್ಚು ಮಾಡುವುದಿಲ್ಲವೆಂದರೆ ಏನು ಮಾಡುತ್ತಾರೆ? ಇದನ್ನು ಕೇವಲ ಮಂತ್ರಿಗಳು ಮಾಡುವುದಕ್ಕಾಗುವುದಿಲ್ಲ. ಆದರೂ ಕೂಡ ನೀವು ನೋಡಬೇಕಾಗುತ್ತದೆ. ಮಂತ್ರಿಗಳಾಗಿ ನಾವು ಏಕೆ ಇರಬೇಕು? ನಾವೂ ಕೂಡ ನೋಡಬೇಕಾಗುತ್ತದೆ. 2006–07ನೇ ಸಾಲಿನಲ್ಲಿ ನಿಗದಿ ಪಡಿಸಿದ ಅನುದಾನ 1,776 ಲಕ್ಷ ರೂಪಾಯಿ. ಅದರಲ್ಲಿ ಇವರು 1,268 ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಇಲ್ಲಿ ನೋಡಿದರೆ ಪ್ರತಿಯೊಂದು ಬಾಬಿನಲ್ಲಿ ಕೇಂದ್ರ ಸರ್ಕಾರದ ಯೋಜನೆಗಳಲ್ಲಿ ಕೂಡ ತಾವು ಎಲ್ಲವನ್ನೂ ಬಳಕೆ

ಮಾಡಿಲ್ಲ. ಕೇಂದ್ರ ಸರ್ಕಾರದಿಂದ ಬರತಕ್ಕಂಥ ಯೋಜನೆಗಳು ಅರಣ್ಯಾ ಅಭಿವೃದ್ಧಿ ನಿಗಮ ಇದೆಲ್ಲ ಬೇರೆ ಬೇರೆ ಇದೆ. ಅದನ್ನೆಲ್ಲಾ ಹೇಳುವುದಕ್ಕೆ ಹೋದರೆ ಬಹಳ ಸಮಯವಾಗುತ್ತದೆ ಎನ್ನುವ ದೃಷ್ಟಿಯಿಂದ ಇಲ್ಲಿ ಕೆಲವೇ ಮಾತುಗಳನ್ನು ಹೇಳುತ್ತೇನೆ. 2006–07ರಲ್ಲಿ ಪರಿಹಾರಾತ್ಮಕ ನೆಡು ತೋಪುಗಳು, ಇವೆಲ್ಲಾ ಬೇರೆ ಬೇರೆ ಜಿಲ್ಲೆಗಳಿಗೆ ನೀಡಿರುವ ಹಣದ ಅಂಕಿಅಂಶಗಳನ್ನು ಕೊಟ್ಟಿದ್ದಾರೆ. 3,080 ಲಕ್ಷ ರೂಪಾಯಿ ಇದಕ್ಕೆ ಹಣ ಇದೆ. ಇವರು ಇದರಲ್ಲಿ 341 ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಬೆಂಗಳೂರಿಗೆ 63 ಲಕ್ಷ ರೂಪಾಯಿ ಇದ್ದರೆ 32 ಲಕ್ಷ ರೂಪಾಯಿ ಖರ್ಚು ಮಾಡಿದ್ದೀರಿ. ಬೆಳಗಾಂಗೆ 54 ಲಕ್ಷ ರೂಪಾಯಿ ಇದ್ದರೆ 6 ಲಕ್ಷ ರೂಪಾಯಿ ಖರ್ಚು ಮಾಡಿದ್ದೀರಿ. ಬಳ್ಳಾರಿಗೆ 265 ಲಕ್ಷ ರೂಪಾಯಿ ಇದ್ದರೆ 29 ಲಕ್ಷ ರೂಪಾಯಿ ಖರ್ಚು ಮಾಡಿದ್ದೀರಿ. ಚಾಮರಾಜನಗರ zero, ಅಲ್ಲಿ ಇಲ್ಲವೇ ಇಲ್ಲ. ಚಿಕ್ಕಮಗಳೂರು 50 ಲಕ್ಷ ರೂಪಾಯಿ ಇದ್ದರೆ 3.50 ಲಕ್ಷ ರೂಪಾಯಿ. ಧಾರವಾಡ 70 ಲಕ್ಷ ರೂಪಾಯಿ ಇದ್ದರೆ 2.80 ಲಕ್ಷ ರೂಪಾಯಿ, ಗುಲ್ಬರ್ಗಕ್ಕೆ 27 ಲಕ್ಷ ರೂಪಾಯಿ ಇದ್ದರೆ 2.49 ಲಕ್ಷ ರೂಪಾಯಿ, ಹಾಸನ 209 ಲಕ್ಷ ರೂಪಾಯಿ ಇದ್ದರೆ 9 ಲಕ್ಷ ರೂಪಾಯಿ, ಕೆನರಾ 558 ಲಕ್ಷ ರೂಪಾಯಿ ಇದ್ದರೆ 23 ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಹೀಗೆ ಎಲ್ಲಾ ಸೇರಿ 3,080 ಲಕ್ಷ ರೂಪಾಯಿ ಇವರಿಗೆ ಅನುದಾನ ಒದಗಿಸಿದರೆ ಅದರಲ್ಲಿ 341 ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಬೇರೆ ಏನು ಮಾಡಿದಿರಿ? ಯಾವಾಗ ಅರಣ್ಯ ಅಭಿವೃದ್ಧಿ ಮಾಡುವುದು? ಮೊನ್ನೆ ಮಾನ್ಯ ಯಡಿಯೂರಪ್ಪನವರಿಗೆ ವಿನಂತಿ ಮಾಡಿಕೊಂಡೆವು. ಇದಕ್ಕೆ ಹಣ ಬಹಳ ಕಡಿಮೆಯಾಗುತ್ತದೆ. ಅರಣ್ಯಾ ಇಲ್ಲದೇ ಇದ್ದರೆ ಹಾಳಾಗಿ ಹೋಗುತ್ತೇವೆ, ಅರಣ್ಯಾ ಬೆಳೆಸದೇ ಹೋದರೆ ನಮಗೆ ಬಹಳ ಕಷ್ಟವಾಗುತ್ತದೆ ಎಂದು ಹೇಳಿದರೆ, ಇದರಲ್ಲಿ ಕೊಟ್ಟಂತಹ ರೊಕ್ಕವನ್ನು ನೀವು ಖರ್ಚು ಮಾಡಿಲ್ಲ. ಇವರಿಗೆ ಏನು ಹೇಳಬೇಕು ಎಂದು ನನಗೆ ತಿಳೀಯುತ್ತಿಲ್ಲ, ಕೇಂದ್ರ ಪುರಸ್ಕೃತ ಯೋಜನೆ, ಸಮಗ್ರ ಅರಣ್ಯಾ ರಕ್ಷಣೆ ಯೊಜನೆ. ಇದು ಕೇಂದ್ರದಿಂದ ಬಂದಂತಹ ಹಣ 187 ಲಕ್ಷ ರೂಪಾಯಿ ಇದ್ದರೆ ಅದರಲ್ಲಿ 18 ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಹುಲಿ ಯೋಜನೆಗೆ 747 ಲಕ್ಷ ರೂಪಾಯಿಯಿದ್ದರೆ 169 ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ರಾಷ್ಟ್ರೀಯ ಉದ್ಯಾನವನ ಅರಣ್ಯಾಭಿವೃದ್ಧಿ ಯೋಜನೆಗಳು, 760 ಲಕ್ಷ ರೂಪಾಯಿ ಇದ್ದರೆ 148 ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಪ್ರದೇಶ ಅಭಿವೃದ್ಧಿ ಹಾಗೂ ಉರುವಲು ಮತ್ತು ಮೇವು ಯೋಜನೆ, 42 ಲಕ್ಷ ರೂಪಾಯಿ ಇದ್ದರೆ ಅದರಲ್ಲಿ 10 ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಆನೆ ಯೋಜನೆಗೆ 140 ಲಕ್ಷ ರೂಪಾಯಿ ಇದ್ದರೆ ಅದರಲ್ಲಿ 16 ಲಕ್ಷ ರೂಪಾಯಿ ಖರ್ಚು ಮಾಡಿದ್ದೀರಿ. ಆನೆ ಹುಲಿ ಇದೆಲ್ಲಾ ಯೋಜನೆ ನೋಡಿದರೆ ನಿಜವಾಗಿ ನೋವೆನ್ನಿಸುತ್ತದೆ. ಇವರ ಇಲಾಖೆಯಲ್ಲಿ

ಸಾಕಷ್ಟು ಖರ್ಚು ಮಾಡಿಲ್ಲ, ಕೆಲಸವಾಗಿಲ್ಲ, ದುಡ್ಡು ಉಳಿದಿದೆ. ಮುಂದೆ ಏನು ಮಾಡುತ್ತಾರೋ ಏನೋ ಗೊತ್ತಿಲ್ಲ. ಈ ವರ್ಷ 2007–08ನೇ ಸಾಲಿನಲ್ಲಿ ಏನೇನು ಇಟ್ಟಿದ್ದೀರಿ ಎನ್ನುವುದರ ಬಗ್ಗೆ ನಮಗೆ ಕೊಡಲೇ ಇಲ್ಲ. 2006–07ನೇ ಸಾಲಿನ ನಿರ್ವಹಣಾ ಮುಂಗಡ ಪತ್ರಗಳನ್ನು ಕೊಟ್ಟಿದ್ದೀರಿ. ಅದೂ ಕೂಡ ಇಲ್ಲಿ ಗಲಾಟೆ ಮಾಡಿದ ಮೇಲೆ ಬಂತು. ನಾವು ಇಲ್ಲಿ ಪರಿಸರದ ಬಗ್ಗೆ ಮಾತನಾಡಬೇಕು ಎಂದರೆ ಅರಣ್ಯ ಸಂಪತ್ತಿನ ಬಗ್ಗೆ ಮತ್ತು ಪ್ರಾಣಿಗಳ ವಿಚಾರಕ್ಕೆ ದುಡ್ಡು ಕೊಟ್ಟಿದ್ದಾರೆ. ಇದೆಲ್ಲಾ ಕೇಂದ್ರ ಯೋಜನೆಗಳು, ನೂರರಷ್ಟು ಸಹಾಯಧನ ಬರಬೇಕು. ಕೇಂದ್ರದ ಒಂದು ಆನೆ ಯೋಜನೆ ಎಂದು ಇದೆ, ಅದಕ್ಕೆ 200 ಲಕ್ಷ ರೂಪಾಯಿ ಕೊಟ್ಟಿದ್ದಾರೆ, ಅದರಲ್ಲಿ ಇವರು 16.11 ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಹುಲಿ ಯೋಜನೆಗೆ 950 ಲಕ್ಷ ರೂಪಾಯಿ ಇದ್ದು, ಅದರಲ್ಲಿ 185 ಲಕ್ಷ ರೂಪಾಯಿ ಖರ್ಚು ಮಾಡಿದಾರೆ. ಹಾಗಾದರೆ ಇದು ಯಾವಾಗ ಅಭಿವೃದ್ಧಿಯಾಗುವುದು? ಪಾಪ, ಅಡವಿಯಲ್ಲಿ ಪ್ರಾಣಿಗಳು ನೀರಿಲ್ಲದೆ ಸಾಯುತ್ತಿವೆ. ಅಡವಿಯಲ್ಲಿ ಪ್ರಾಣಿಗಳು ಕುಡಿಯಲು ನೀರಿಲ್ಲದೇ ಸಾಯುತ್ತಿವೆ. ನಮ್ಮ ತುಂಗಭದ್ರ ನದಿಯನ್ನು ಒಣಗಿಸಬೇಡಿ ಎಂದು ನಾನು ಹೇಳುತ್ತಿರುತ್ತೇನೆ. ಯಾವ ನದಿಗಳನ್ನೂ ಒಣಗಿಸಬಾರದು. ಯಾವ ನದಿಗಳೂ ಬತ್ತಿ ಹೋಗಬಾರದು. ನಾವು ಇವತ್ತು ನಾಲ್ಕು ಬೆಳೆ ಬಿತ್ತುವುದನ್ನು ಬಿಟ್ಟರೂ ಚಿಂತೆಯಿಲ್ಲ, ಹೊಳೆಗಳು ಸಂಪೂರ್ಣವಾಗಿ 12 ತಿಂಗಳು ಹರಿಯುವಂತೆ ನಾವು ನೋಡಿಕೊಳ್ಳಬೇಕು. ಇಲ್ಲದಿದ್ದರೆ ಅರಣ್ಯ ಸಂಪತ್ತು ನಾಶವಾಗಿ ಹೋಗುತ್ತದೆ, ವನ್ಯ ಸಂಪತ್ತು ನಾಶವಾಗಿ ಹೋಗುತ್ತದೆ, ನವಿಲುಗಳನ್ನು ಕೊಂದಿರುವ ಬಗ್ಗೆ ಇವತ್ತು ಬೆಳಗ್ಗೆ ಪೇಪರ್‌ನಲ್ಲಿ ಬಂತಲ್ಲ. ಎಷ್ಟೊಂದು ನವಿಲುಗಳು ಸತ್ತಿವೆ. ಅದನ್ನು ಮಾಡಿರುವ ದುಷ್ಟ ಯಾರು ಎನ್ನುವುದನ್ನು ನೋಡಿ, ಅವನನ್ನು ಹಿಡಿದು ಒಳಗೆ ಹಾಕಿ. ನವಿಲುಗಳು ಹೊಲಗಳಿಗೆ ಹೋಗಿ ಬೆಳೆಗಳನ್ನು ತಿನ್ನುತ್ತವೆ ಎಂದು ಕಾಳಿಂಗ ವಿಷ ಹಾಕಿದ್ದಾನೆ. ಅದನ್ನು ತಿಂದ ನವಿಲುಗಳಷ್ಟೂ ಸತ್ತುಹೋಗಿವೆ. ಅದನ್ನು ಯಾರಾದರೂ ತಿಂದರೆ ಅವರೂ ಸಾಯುತ್ತಾರೆ. ಇವತ್ತು ನವಿಲುಗಳನ್ನು ಹೊಡೆದು ತಿನ್ನುತ್ತಾರೆ. ನವಿಲು ಎಂದರೆ ಸಾಮಾನ್ಯವಲ್ಲ, ಅದು ನಮ್ಮ ರಾಷ್ಟ್ರಪಕ್ಷಿ. ಅದು ನಿಮಗೂ ಗೊತ್ತಿದೆ. ರಾಷ್ಟ್ರದ ಮಾನ್ಯತೆ ಪಡೆದಿರುವ ಆ ರಾಷ್ಟ್ರಪಕ್ಷಿಯನ್ನು ಯಾರೂ ಮುಟ್ಟುವ ಹಾಗಿಲ್ಲ. ಅದನ್ನು ಏನೂ ಮಾಡುವ ಹಾಗಿಲ್ಲ. ಅಷ್ಟಿದ್ದರೂ ಕೂಡ ಇವತ್ತು ಆ ನವಿಲುಗಳಿಗೆ ರಕ್ಷಣೆ ಇಲ್ಲ. ನಮ್ಮ ಕೆ.ಹೆಚ್.ಪಾಟೀಲರು ಇದ್ದಾಗ ಬಿಂಕದ ಕಟ್ಟೆಯಲ್ಲಿ ಒಂದು zoo ಮಾಡಿದ್ದಾರೆ. ಉತ್ತರ ಕರ್ನಾಟಕದಲ್ಲಿರುವ ಒಂದು ದೊಡ್ಡ zoo ಎಂದರೆ ಅದು. ಇಲ್ಲಿ ಮೈಸೂರಿನಲ್ಲಿ ಹೇಗೆ zoo ಇದೆಯೋ, ಆ ರೀತಿಯಲ್ಲಿ ಅಲ್ಲಿ ಒಂದು zoo ಮಾಡಿದ್ದಾರೆ. ನಾನೂ ಮೂರು ತಿಂಗಳು ಅರಣ್ಯ ಇಲಾಖೆಯ ಮಂತ್ರಿಯಾಗಿದ್ದೆ. ಜೆ.ಹೆಚ್.ಪಟೇಲರು ಮುಖ್ಯಮಂತ್ರಿಯಾದ್ದಾಗ ಕೊನೆಯಲ್ಲಿ

ಮೂರು ತಿಂಗಳೂ ನನಗೆ ಅರಣ್ಯ ಇಲಾಖೆಯನ್ನು ಕೊಟ್ಟಿದ್ದರು. ಆಗ ಮೇನಕಾ ಗಾಂಧಿಯವರು ಅಂದರೆ zoo Authority of India ದವರು ಅಲ್ಲಿ ಸರಿಯಾಗಿ ಏನೂ ವ್ಯವಸ್ಥೆಯಿಲ್ಲ, ಅದಕ್ಕಾಗಿ ಅದನ್ನು ಮುಚ್ಚಬೇಕು ಎಂದು ನಿರ್ಣಯ ಮಾಡಿದ್ದರು. ಆಗ ನಾವು 50 ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ಮಾಡಿ 25 ಲಕ್ಷ ರೂಪಾಯಿಗಳನ್ನು ತಕ್ಷಣ ಬಿಡುಗಡೆ ಮಾಡಿದೆವು. ಅದಾದ ಮೇಲೆ ಅಲ್ಲಿಗೆ ಹಣವನ್ನು ಬಿಡುಗಡೆ ಮಾಡಿಲ್ಲ. ಹುಲಿ ಬಿಡುವುದಕ್ಕೆ ವ್ಯವಸ್ಥೆ ಮಾಡಬೇಕಾಗಿತ್ತು. ಅದನ್ನೂ ಮಾಡಲಿಲ್ಲ. ಹುಲಿ ಬಿಡುವುದು ಇದ್ದರೆ, ಮೊನ್ನೆ ಅಲ್ಲಿ ಚಿರತೆ ಸಾಯುತ್ತಿರಲ್ಲಿಲ್ಲ. ಅದನ್ನು ತೆಗೆದುಕೊಂಡು ಹೋಗಿ ಯಾವುದೋ ಒಂದು ಹಳೆಯ ಬೋನಿಗೆ ಹಾಕಿದರು. ಅದನ್ನು ಹೇಗಿಟ್ಟಿದ್ದರು ಎಂದರೆ, ಒಂದು ಚಿರತೆ ಯಾರದೋ ಮನೆಯ ಬಚ್ಚಲುಮನೆಯಲ್ಲಿ ಹೊಕ್ಕಿಕೊಂಡಿತ್ತು. ಬಚ್ಚಲು ಮನೆಗೆ ಹೆಣ್ಣುಮಗಳು ಹೋಗಿ, ಚಿರತೆಯನ್ನು ನೋಡಿ ಅಂಜಿ ಹೊರಗೆ ಬಂದು ಚಿರತೆ, ಚಿರತೆ ಎಂದು ಕೂಗಿದಾಗ ಅಲ್ಲಿ ಇಡೀ ಊರೆಲ್ಲಾ ಕೂಡಿ, ಏನೇನೋ ಮಾಡಿ ಹಿಡಿದು ತಂದು ಬಿಂಕದ ಕಟ್ಟೆ ಝೂದಲ್ಲಿ ಬಿಟ್ಟರು. ಅದು ಅಲ್ಲಿಂದ ತಪ್ಪಿಸಿಕೊಂಡು ಹೋಗಿಬಿಟ್ಟಿತ್ತು. ಅದು ಹೇಗೆ ಹೋಯಿತು, ಎಲ್ಲಿಗೆ ಹೋಯಿತು ಎಂದು ಯಾರಿಗೂ ಗೊತ್ತಿಲ್ಲ. ಮತ್ತೆ ಅದು ಎಲ್ಲೋ ಸಿಕ್ಕು ಕಡೆಗೆ ಗುಂಡು ಹೊಡೆದು ಅದನ್ನು ಕೊಂದುಬಿಟ್ಟರು. ಕಪ್ಪತಗುಡ್ಡದಲ್ಲಿ ಹೊಣಿಗ್ಯಾಗಳಿದ್ದವು. ಅದನ್ನು ಇಲ್ಲಿ ಬೇರೆ ಏನೋ ಕರೆಯುತ್ತಾರಂತೆ. ನಾನು ಬಹಳಷ್ಟು zooಗಳಿಗೆ ಅಡ್ಡಾಡಿದ್ದೇನೆ. ಒರಿಸ್ಸಾ zoo ನಲ್ಲಿ ಮಾತ್ರ ಆ ಪ್ರಾಣಿ ಇತ್ತು. ಅವು ನಮ್ಮಲ್ಲಿ ವಿಪರೀತವಾಗಿದ್ದವು. ಸಾಕಷ್ಟು ಹೊಣಿಗ್ಯಾಗಳಿದ್ದವು. ಇವತ್ತು ಹುಡುಕಿದರೂ ಒಂದು ಸಿಗುವುದಿಲ್ಲ. ಆ ಕಾಡು ಪ್ರಾಣಿ ಯಾವುದಾದರೂ ಒಂದು ದನವನ್ನು ಹಿಡಿಯಿತೆಂದರೆ, ಅದು ಮತ್ತೆ ಮರುದಿವಸ ರಾತ್ರಿ ಬಂದು ಅದನ್ನು ತಿನ್ನುತ್ತದೆ. ಅಷ್ಟರಲ್ಲಿ ಹೋಗಿ ಅದಕ್ಕೆ ಪಾಲಿಡಾಲ್ ಅನ್ನು ಹಾಕಿ ಬಿಡುವುದು. ಅದನ್ನು ತಿಂದು ಅದು ಅಲ್ಲೇ ಸತ್ತುಹೋಗಿಬಿಡುತ್ತದೆ. ಮನುಷ್ಯನ ಕೆಟ್ಟತನದಿಂದಾಗಿ ಪ್ರಾಣಿಗಳನ್ನು ಕಳೆದವು, ಪಕ್ಷಿಗಳನ್ನು ಕಳೆದವು, ಎಲ್ಲವನ್ನೂ ಹಾಳು ಮಾಡಿದ್ದೇವೆ. ಅವುಗಳನ್ನು ಬೆಳೆಸಬೇಕಾಗಿದೆ. ನಾನು ಪ್ಯಾರಿಸ್‌ಗೆ ಹೋಗಿದ್ದೆ. ಅಲ್ಲಿ ಒಬ್ಬ ರೈತನ ಮನೆಗೆ ಹೋಗಿ ಅವನನ್ನು ಕೇಳಿದೆವು. ಅಲ್ಲಿ ಈ ರೀತಿಯ ಎಣ್ಣೆಗಳನ್ನು ಹೊಡೆಯಬಾರದು ಎಂದು ಸರ್ಕಾರದವರು ರೈತರಿಗೆ ಸಬ್ಸಿಡಿ ಕೊಡುತ್ತಾರೆ. ಪಕ್ಕಿಗಳು, ಪ್ರಾಣಿಗಳು ಹಾಳಾಗಿ ಹೋಗುತ್ತವೆ ಎನ್ನುವ ದೃಷ್ಟಿಯಿಂದ ಅವುಗಳನ್ನು ಉಳಿಸಬೇಕೆಂದು, ಬೆಳೆಗಳಿಗೆ ನೀವು ಎಣ್ಣೆ ಹೊಡೆಯಬೇಡಿ ಎಂದು ಹೇಳಿ ಸರ್ಕಾರದವರು ಸಬ್ಸಿಡಿಯನ್ನು ಕೊಡುತ್ತಾರೆ. ಕೆಲವು ಏರಿಯಾಗಳನ್ನು ಗುರುತಿಸಿಬಿಟ್ಟಿದ್ದಾರೆ. ಅಲ್ಲಿ ಯಾರೂ ಎಣ್ಣೆಯನ್ನು ಬಳಸುವ ಹಾಗಿಲ್ಲ. ಈ ಒಂದು ಹಿನ್ನೆಲೆಯಲ್ಲಿ ಇವತ್ತಿನ ದಿವಸ ನಾವೂ ಅದನ್ನು ಪರಿಶೀಲಿಸಬೇಕಾಗಿದೆ. ಅವು ರೈತರ ಮಿತ್ರರು. ಅದೇ ರೀತಿ ತೊಗಲಬಾವಲಿ. ಅಧ್ಯಕ್ಷರೇ, ತಮ್ಮ

ಕಡೆಯೂ ಅವು ಇದ್ದವು ಎಂದು ಕಾಣುತ್ತದೆ. ಇವತ್ತು ಹುಡುಕಿದರೆ ಅವು ಒಂದು ಸಿಗುವುದಿಲ್ಲ. ಆ ತೊಗಲಬಾವಲಿಯು ರಾತ್ರಿಯೆಲ್ಲ ಅಡ್ಡಾಡಿ ಸಾವಿರಾರುಗಟ್ಟಳೆ, ಲಕ್ಷಾನುಗಟ್ಟಳೆ ಕೀಟಗಳನ್ನು ತಿನ್ನುತ್ತಿತ್ತಂತೆ. ಅದರ ಕೆಲಸವೇನೆಂದರೆ, ನಮ್ಮ ರೈತನ ಬೆಳೆಗಳಿಗೆ ಬೀಳುವ ರೋಗಗಳನ್ನು ತರತಕ್ಕಂಥ ಕೀಟಗಳನ್ನು ಅದು ತಿಂದು ನಾಶ ಮಾಡುತ್ತಿತ್ತು. ಅದೇ ರೀತಿಯಲ್ಲಿ ಹಾವು. ಒಂದು ಹಾವು ರಾತ್ರಿಯೆಲ್ಲಾ ಅಡ್ಡಾಡಿ ಸಾವಿರಾರುಗಟ್ಟಲೆ ಕೀಟಗಳನ್ನು ತಿನ್ನುತ್ತದೆ. ಎಣ್ಣೆ ಹೊಡೆದು ಹಾವುಗಳನ್ನೆಲ್ಲಾ ಕಳೆದೆವು. ಇವತ್ತು ಅರಣ್ಯಗಳಲ್ಲಿ ವನ್ಯ ಸಂಪತ್ತು ಉಳಿದೆ ಇಲ್ಲ. ಈ ಸಂದರ್ಭದಲ್ಲಿ ನಾವು ಮೈಸೂರು ಮಹಾರಾಜರನ್ನು ನೆನೆಸಬೇಕು. ಅವರು ಎಷ್ಟೊಂದು ಚೆನ್ನಾಗಿ ಗಿಡಮರಗಳನ್ನು ಬೆಳೆಸಿದ್ದಾರೆ. ಅದೇ ಮಾದರಿಯಲ್ಲಿ ಬೆಂಗಳೂರನ್ನೂ ಮಾಡಿದ್ದರಿಂದ ಇವತ್ತು ಬೆಂಗಳೂರು ಉಳಿದಿದೆ. ಬೆಂಗಳೂರಿನಲ್ಲಿ ಈ ರೀತಿ ಗಿಡ ಮರಗಳನ್ನು ಬೆಳೆಸದಿದ್ದರೆ ನಾವು ಉಸಿರುಗಟ್ಟಿ ಸಾಯುತ್ತಿದ್ದೆವು. ಅಂಥ ಒಂದು ಸ್ಥಿತಿ ನಿರ್ಮಾಣವಾಗಿದೆ. ಇನ್ನು ಪರಿಸರದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ನಮ್ಮ ಸಾರಿಗೆ ಇಲಾಖೆಯವರು ಒಂದು ಮಾಹಿತಿಯನ್ನು ಕೊಟ್ಟಿದ್ದಾರೆ. ಅದರಲ್ಲಿರುವ ಅಂಕಿಅಂಶಗಳನ್ನು ನೋಡಿ ನನಗೆ ಗಾಬರಿ ಅನ್ನಿಸಿತು. 31–03–2006ಕ್ಕೆ ರಾಜ್ಯದಲ್ಲಿ ವಾಹನಗಳ ಸಂಖ್ಯೆ 45,12,910 ಇತ್ತು. ಬೇರೆ ಬೇರೆ ವಾಹನಗಳು ಅಂದರೆ, ಮೋಟಾರ್ ಸೈಕಲ್, ಕಾರು ಎಲ್ಲವೂ ಸೇರಿ ಅಷ್ಟಿತ್ತು. ರಾಜ್ಯದಲ್ಲಿ 62,20,370 ಇದ್ದಂಥ ವಾಹನಗಳ ಸಂಖ್ಯೆ 31–03–2007ಕ್ಕೆ 69,39,710 ಆಗಿದೆ. ಇದರಲ್ಲಿ ಅರ್ಧದಷ್ಟು ವಾಹನಗಳು ಬೆಂಗಳೂರಿನಲ್ಲಿವೆ ಎಂದು ಅವರು ಹೇಳಿದ್ದಾರೆ. ಏರಿಕೆ ಎಷ್ಟಿದೆ ಎನ್ನುವುದನ್ನೂ ಅವರು ಹೇಳಿದ್ದಾರೆ. ಬೆಂಗಳೂರು ಗ್ರಾಮಾಂತರದಲ್ಲಿ ಪ್ರತಿವರ್ಷ 45% ಹೆಚ್ಚಾಗುತ್ತವಂತೆ. ಬೆಂಗಳೂರು ನಗರದಲ್ಲಿ 11.14% ಹೆಚ್ಚಾಗುತ್ತದೆ. ಅತೀ ಹೆಚ್ಚು ಆಗುವುದು ಎಂದರೆ ಗುಲ್ಬರ್ಗದಲ್ಲಿ. ಅಲ್ಲಿ 46.20ರಷ್ಟು ವಾಹನಗಳು ಹೆಚ್ಚಾಗುತ್ತವೆ. ಒಟ್ಟಿನಲ್ಲಿ ಪ್ರತಿವರ್ಷ ಆವರೇಜ್ ತೆಗೆದುಕೊಂಡರೆ 11% ವಾಹನಗಳು ಜಾಸ್ತಿಯಾಗುತ್ತವೆ. ಇದು ಬೆಂಗಳೂರಿನಲ್ಲಿ ಬಹಳ ಕೆಟ್ಟದಾಗಿ ಪರಿಸರ ಹಾಳಾಗಲು ಕಾರಣವಾಗಿದೆ. ಒಮ್ಮೆ ನಾವು ನೆದರ್‌ಲ್ಯಾಂಡ್‌ನ ರಾಜಧಾನಿಯಾದ ಆರ್ಮ್ಸ್‌ಟರ್‌ಡ್ಯಾಂಗೆ ಹೋಗಿದ್ದೆವು. ಅಲ್ಲಿ ನಾವು ನೋಡಿದೆವು. ಇಡೀ ಜಗತ್ತಿನಲ್ಲೇ ಹೆಚ್ಚು ಬೈಸಿಕಲ್ಲುಗಳು ಇರುವುದು ಅಲ್ಲಿಯೇ. ಪ್ರತಿಯೊಬ್ಬರ ಮನೆಯಲ್ಲೂ 3–4 ಬೈಸಿಕಲ್ಲುಗಳಿವೆ. ಅವರು ಕೆಲವು ಏರಿಯಾಗಳನ್ನೇ ಗುರುತು ಮಾಡಿದ್ದಾರೆ. ಅಲ್ಲಿ ಬೇರೆ ಯಾವ ವಾಹನಗಳೂ ಊರ ಒಳಗೇ ಬರುವ ಹಾಗಿಲ್ಲ. ಬಂದರೆ ಅವುಗಳಿಗೆ ದಂಡ ಹಾಕುತ್ತಾರೆ. ವಾಹನಗಳಿಗೆ ಬೇರೆ ಜಾಗವನ್ನೇ ಮಾಡಿದ್ದಾರೆ. ಅವುಗಳೆಲ್ಲ ಊರ ಹೊರಗೆ ಇರುತ್ತವೆ. ಹೊಗೆ ಕಾಣಿಸದ ಹಾಗೆ, ಪರಿಸರ ಹಾಳೂ ಮಾಡದ ಹಾಗೆ ಅಲ್ಲಿ ಎಲ್ಲರೂ ಸೈಕಲ್ಲಿನ ಮೇಲೆಯೇ ಹೋಗುತ್ತಾರೆ. ಅಲ್ಲಿ ಮಂತ್ರಿಗಳೂ ಸಹ ಸೈಕಲ್ಲಿನ

ಮೇಲೆಯೇ ಹೋಗುತ್ತಾರಂತೆ. ನಾವು ನೋಡಿದ್ದೇವೆ. ಶಾಲೆಗೆ ಹೋಗುವ ಹುಡುಗರು ಸೈಕಲ್ಲಿನ ಮೇಲೆ ಹೋಗುತ್ತಿದ್ದರು. ನಿಮ್ಮನ್ನು ಸೈಕಲ್ಲಿನಲ್ಲಿ ಹೋಗಿ ಎನ್ನುವುದಿಲ್ಲ. ಅದು ಕರ್ನಾಟಕದಲ್ಲಿ ಸಾಧ್ಯವೆ ಇಲ್ಲ. ಒಟ್ಟಿನ ಮೇಲೆ ಪರಿಸರ ಹಾಳಾಗದಂತೆ ನೋಡಿಕೊಳ್ಳುತ್ತಿದ್ದಾರೆ. ಹಳೆಯ ವಾಹನಗಳನ್ನು ಓಡಿಸುವದರಿಂದ ಹೆಚ್ಚು ಪರಿಸರ ಹಾಳಾಗುತ್ತದೆ. ಆ ಕಾರಣದಿಂದ ಅದನ್ನೂ ಕೂಡ ನಾವು ಕಂಟ್ರೋಲ್ ಮಾಡಬೇಕಾಗುತ್ತದೆ. ಒಂದು ವಿಷಯವನ್ನು ಹೇಳುತ್ತೇನೆ. ನನಗೆ ಹಿಂದೆ ಯಾವಾಗಲೂ ಹಾವು ಕಡಿದಿರಲಿಲ್ಲ. ಮೊನ್ನೆ ಧಾರವಾಡ ಯೂನಿವರ್ಸಿಟಿಯ ಗೆಸ್ಟ್ ಹೌಸ್‌ನಲ್ಲಿದ್ದೆ. ಒಂದು ಸಣ್ಣ ಹಾವು ಹೇಗೋ ಒಳಗೆ ಬಂದುಬಿಟ್ಟಿದೆ. ಅದನ್ನು ನಾವು ಹಾವು ಎಂದು ತಿಳಿದುಕೊಂಡಿರಲಿಲ್ಲ. ಅದರ ಮೇಲೆ ಬಟ್ಟೆ ಹಾಕಲು ಹೋದೆ. ಆಗ ಅದು ನನ್ನನ್ನು ಕಡಿದುಬಿಟ್ಟಿತು. ಆಮೇಲೆ ಅಲ್ಲಿಂದ ನೌಕರ ಬಂದ. ಹೊಡೆಯಬೇಡ, ಹೊಡೆಯಬೇಡ ಎಂದು ಹೇಳುವಷ್ಟರಲ್ಲಿಯೇ ಅದನ್ನು ಬಿಡಿದೇ ಬಿಟ್ಟ. ನಾನು ಅದನ್ನು ಹಿಡಿದು zoo ಗೆ ಕಳುಹಿಸಬೇಕು ಎಂದು ಇದ್ದೆ. ಎಲ್ಲೂ ಹಾವು ಇಲ್ಲ. ಚೇಳು ಇಲ್ಲವೇ ಇಲ್ಲ. ನನಗೆ ಚೇಳು ಕಡಿದರೆ ವಿಷ ಏರುವುದಿಲ್ಲ.

ಶ್ರೀ ಕೆ.ಶ್ರೀನಿವಾಸಗೌಡ : ಹಾವುಗಳ ವಿಷಯ ಇವರಿಗೆ ಇನ್ನೂ ಸರಿಯಾಗಿ ಗೊತ್ತಿಲ್ಲ. ಹಾವುಗಳು ಮೊದಲು ನಮ್ಮ ಹಳ್ಳಿಯಲ್ಲಿಯೂ ಸಾಕಷ್ಟು ಸೇರಿಕೊಂಡಿದ್ದವು. ಎಸ್.ಸಿ., ಎಸ್.ಟಿ. ಜನಾಂಗದವರು ಅವುಗಳು ಬದುಕಿದ್ದ ಹಾಗೇ ಕುಯ್ದು ಅವುಗಳ ಚರ್ಮವನ್ನು ತೆಗೆದುಕೊಂಡು ಹೋಗಿ ಮಾರುತ್ತಿದ್ದರು. ಕೆ.ಹೆಚ್. ರಂಗನಾಥ್‌ರವರು ಫಾರೆಸ್ಟ್ ಮಿನಿಸ್ಟರ್ ಆಗಿದ್ದಾಗ ಅದರ ಮೇಲೆ ಒಂದು ಕಠಿಣವಾದಂಥ ಕ್ರಮವನ್ನು ಜರುಗಿಸಿದ್ದರು. ಯಾರಾದರೂ ಹಾವುಗಳ ಚರ್ಮಗಳನ್ನು ಮಾರಿದರೆ ಅವರನ್ನು ಜೈಲು ಶಿಕ್ಷೆಗೆ ಗುರಿಪಡಿಸುವಂಥ ಸ್ಥಿತಿಗೆ ಬಂತು. ಆವತ್ತಿನಿಂದ ಹಾವುಗಳು ಜಾಸ್ತಿ ಆಗಿವೆ, ಇದು ಅವರಿಗೆ ಗೊತ್ತಿಲ್ಲ. ನಾನು ನಿನ್ನೆಯ ದಿವಸ ನನ್ನ ತೋಟಕ್ಕೆ ಹೋಗಿದ್ದೆ. ಅಲ್ಲಿ ಎರಡು ಹಾವುಗಳನ್ನು ನೋಡಿದೆ. ಇವರು ಹಾವುಗಳನ್ನು ಉಳಿಸಿ ಎಂದು ಹೇಳುತ್ತಾರೆ, ಆ ಹಾವುಗಳು ನಮ್ಮನ್ನು ಕಚ್ಚಿದರೆ ನಮ್ಮ ಗತಿ ಏನು ಎನ್ನುವುದನ್ನು ಸಹ ಅವರು ಹೇಳಬೇಕು. ಎರಡನೆಯದಾಗಿ, ನಮ್ಮ ನಾಗರಹೊಳೆಗೆ ಒಂದು ಸಲ ನಾನು ಮತ್ತು ನಮ್ಮ ಶಿವಶಂಕರರೆಡ್ಡಿಯವರು ಹೋಗಿದ್ದೆವು. ಅಲ್ಲೊಂದು mirror ಹಾಕಿದ್ದಾರೆ. 'Most cruel animal in this world' ಎಂದು ಅಲ್ಲಿ ಬರೆದಿತ್ತು. ಇದೇನಪ್ಪಾ, ಹುಲಿ, ಚಿರತೆ ಇಲ್ಲಿ ಎಲ್ಲಿದೆ ಎಂದು ಸುತ್ತಮುತ್ತ ಎಲ್ಲಾ ಕಡೆ ನಾನು ನೋಡುತ್ತಿದ್ದೆ. ಆನಂತರ mirror ನಲ್ಲಿ ನೋಡಿಕೊಂಡರೆ ನಾನೇ ಆ most cruel animal ಎಂದು ಅಂದುಕೊಂಡು ಬಂದೆ. ಇವತ್ತು ಎಲ್ಲಾ ಕಾಡು ಪ್ರಾಣಿಗಳಿಗೂ the cruel animal is a man.

ಶ್ರೀ ಎಸ್.ಎಸ್.ಪಾಟೀಲ್ : ನಮ್ಮ ಹೊಲದಲ್ಲಿ ಬರೀ ನಾಗರಹಾವು ಇವೆ. ನಾವು ಅವುಗಳನ್ನು ಹೊಡೆಯುವುದಕ್ಕೆ ಬಿಡುವುದಿಲ್ಲ. ಹಾವುಗಳು ಸುಮ್ಮನೆ ಕಡಿಯುವುದಿಲ್ಲ. ನಾವೇನಾದರೂ ಅವುಗಳಿಗೆ ತುಳಿದರೆ, ಅಥವಾ ಬೇರೆ ಏನಾದರೂ ನೋವು ಮಾಡಿದರೆ ಅವು ಕಚ್ಚುತ್ತವೆ. ಇಲ್ಲದಿದ್ದರೆ ಆ ಹಾವು ನಮ್ಮನ್ನು ನೋಡಿ ನಂತರ ಪಕ್ಕದಲ್ಲಿ ಸರಿದು ಹೋಗುತ್ತದೆ. ಕೆಲವು ಮನೆಗಳಿಗೆ ಬಂದಂಥ ಹಾವನ್ನು ಎಷ್ಟೋ ಸಲ ಹಿಡಿದುಕೊಂಡು ಹೋಗುತ್ತಾರೆ. ಬೆಳಗಾಂ ಜಿಲ್ಲೆಯಲ್ಲಿ ಒಂದು ಊರು ಇದೆ. ಅಲ್ಲಿ ಅವರು ಪ್ರತಿ ನಾಗರ ಅಮಾವಾಸ್ಯೆ ದಿವಸ ಜೀವಂತ ಹಾವುಗಳನ್ನು ಹಿಡಿದುಕೊಂಡು ಬಂದು ಎಲ್ಲದಕ್ಕೂ ಹಾಲು ಕುಡಿಸಿ ಪುನಃ ವಾಪಸ್ಸು ಬಿಡುತ್ತಾರೆ. ಇದೊಂದು ಆಶ್ಚರ್ಯದ ಸಂಗತಿ. ಇದು ಪೇಪರ್‌ನಲ್ಲಿ ಬಂದಿತ್ತು. ಬಹಳಷ್ಟು ಹಾವುಗಳು ಕಚ್ಚಿದರೆ ವಿಷವಿರುವುದಿಲ್ಲ, ಆದರೆ, ಹಾವು ಕಡಿದಿದೆ ಎಂದು ಮನಸ್ಸಿಗೆ ಹಚ್ಚಿಕೊಂಡು ಸಾಯುತ್ತಾರಂತೆ. ಇನ್ನು ಮಾನ್ಯ ಅರಣ್ಯ ಸಚಿವರು ಪರಿಸರದ ಬಗ್ಗೆ ಬಹಳ ಕಾಲಜಿ ವಹಿಸಿಸಬೇಕಾಗುತ್ತದೆ. ಬೆಂಗಳೂರಿನಲ್ಲೆಲ್ಲ ಹೊಗೆ ಉಗುಳತಕ್ಕಂಥ rickshaw, motor cycle, car, diesel ವಾಹನಗಳನ್ನೆಲ್ಲಾ ತೆಗೆದು ಸಿ.ಎನ್.ಜಿ. ಮಾಡಬೇಕು. ಈಗಾಗಲೇ ಪ್ರಾರಂಭವಾಗಿದೆ. ಸಾಧ್ಯವಾದ ಮಟ್ಟಿಗೆ ಕಾಯಿದೆಯನ್ನು ಮಾಡುವಂಥ ಕಾಲ ದೂರವಿಲ್ಲ. ಬೆಂಗಳೂರಿನಲ್ಲಿ ಯಾರೂ ಸಹ ಚೆನ್ನಾಗಿ ಆರೋಗ್ಯವಾಗಿ ಬದುಕಲಾರದಂಥ ಸ್ಥಿತಿಯಾಗಿದೆ. ನಾನು ಊರಿಗೆ ಹೋಗಿ ಬಂದರೆ ಕನಿಷ್ಟ 10 cancer cases ಅನ್ನು ತರುತ್ತೇನೆ. ಇದು ನನ್ನ ಗಮನಕ್ಕೆ ಬಂದಿದೆ. ಆ 10ರಲ್ಲಿ 8 ಮಹಿಳೆಯರೇ ಇದ್ದಾರೆ. ಮನೆಯಲ್ಲಿಯೇ ಇದ್ದು ಪೂಜೆ, ಅಡಿಗೆ ಊಟೋಪಚಾರ ಮಾಡಿಕೊಂಡಿದ್ದವರಿಗೆ ಆ ಕಾಯಿಲೆ ಏಕೆ ಬರಬೇಕು? ಅಧ್ಯಕ್ಷರೇ. ತಾವು ಹೇಳಿ ನೋಡೋಣ. ಏಕೆಂದರೆ, ಈ ಪರಿಸರವನ್ನೆಲ್ಲಾ ಹಾಳು ಮಾಡಿ, ಅದಲ್ಲದೇ ಈ ಪಂಡಿತರೆಂದುಕೊಂಡವರು ಬೀಡಿ ಸಿಗರೇಟ್ ಸೇದಿ ಅವರ ಮುಖಕ್ಕೆ ಬಿಡುತ್ತಾರೆ. ಇದು ಕೂಡ ಇವತ್ತು ಆಗತಕ್ಕಂಥದ್ದು. ಅದಕ್ಕೋಸ್ಕರ ಇವತ್ತು ನಾವೆಲ್ಲರೂ ಪರಿಸರದ ಬಗ್ಗೆ ಹೆಚ್ಚು ಕಾಳಜಿವಹಿಸಬೇಕೆಂದು ಹೇಳಿ, ವಾಯು ಮಾಲಿನ್ಯ ಕಾರಣ ಇಡಿ ಜಗತ್ತಿನಾದ್ಯಂತ ದೊಡ್ಡ ಚಟುವಟಿಕೆ, ಇಲ್ಲೊಂದು ಭಯಾನಕ ಹುಟ್ಟಿಸತಕ್ಕಂಥದ್ದು, 2002ರಲ್ಲಿ ಜಗತ್ತಿನ ವಿಮಾನಗಳ ಸಂಖ್ಯೆ 12400 ಇತ್ತಂತೆ.ಆ ವಿಮಾನಗಳ ಸಂಖ್ಯೆ ಈಗ 25,000 ಆಗಿದೆಯಂತೆ. ಹೀಗೆ ಹಾರಾಡುವುದನ್ನು ಹೆಚ್ಚು ಮಾಡಿಕೊಂಡು ಹೋದರೆ ಇಡೀ ಓಸೋನ್ ಪದರವನ್ನು ಹಾಳು ಮಾಡಿ ಬಹುಶಃ ನಾವೆಲ್ಲ ಕುದ್ದು ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಇನ್ನು ಸಾರಿಗೆ ವಿಚಾರ ಹೇಳುವುದಾದರೆ, ಮಾನ್ಯ ಸಾರಿಗೆ ಮಂತ್ರಿಗಳೂ ಈಗ ಸದನದಲ್ಲಿಲ್ಲ. ಈಗ tractor ಹೆಚ್ಚಾಗಿವೆ. ಎಲ್ಲಾ ಊರುಗಳಲ್ಲಿಯೂ tractorಗಳನ್ನು ಕೆಲವು ಕಾರು ಇವುಗಳನ್ನೆಲ್ಲ ತಂದು ಅದನ್ನು ಓಡಿಸುವುದಕ್ಕೆ ಡ್ರೈವರೇ ಇಲ್ಲ. *Driving*

licence ಇರುವುದಿಲ್ಲ. Accident ಆಯಿತೆಂದರೆ ಮತ್ತೆ ಯಾರನ್ನಾದರೂ ಹುಡುಕಿಕೊಂಡು ಬರಬೇಕು. ಈ ಕಾರಣದಿಂದ ಸರಿಯಾದ license ಕೊಡುತ್ತಿಲ್ಲ. Licence ಕೊಡುವುದಕ್ಕೆ rate fix ಆಗಿದೆ. ವಾಹನ ಓಡಿಸುವುದಕ್ಕೆ ಬರುತ್ತದೆಯೋ ಇಲ್ಲವೋ ಎಂಬುದನ್ನು ನೋಡುವುದೇ ಇಲ್ಲ. KSRTC ಯವರು ಮಾತ್ರ licence ಕೊಡುವ ಪದ್ಧತಿಯನ್ನು ಬಹಳ ಚೆನ್ನಾಗಿ ಮಾಡಿದ್ದಾರೆ. ಆ ಕಾರಣದಿಂದ ಸರಿಯಾಗಿ ವಾಹನ ಚಾಲನೆ ಮಾಡುವವರಿಗೆ ಮಾತ್ರ licence ಕೊಡುವ ವ್ಯವಸ್ಥೆಯಾಗಬೇಕು. ಇನ್ನು ಕೆಲವರು checking ಎಂದು ಹೋಗುತ್ತಾರೆ. ನಾನು ಹೋಗುವ ದಾರಿಯಲ್ಲಿ truckಗಳನ್ನು ಸಾಲಾಗಿ ನಿಲ್ಲಿಸಿಬಿಟ್ಟಿರುತ್ತಾರೆ. ನಾನು ಒಂದು ಕಡೆ 'ಏನೇನು checking ಮಾಡುತ್ತಾರೆಂದು ಕೇಳಿದೆ. ಅದಕ್ಕೆ rate ಇದೆಯಂತೆ ಇಂತಿಷ್ಟು ಇಂತಿಷ್ಟು ಎಂದು ತೆಗೆದುಕೊಂಡು ಕಳುಹಿಸಿಬಿಡುತ್ತಾರಂತೆ truck ಹೋಗಿಬಿಡುತ್ತವೆ. ಈ ಗಣಿಯಿಂದ ಎಷ್ಟು ಉತ್ಪನ್ನ ಬರುತ್ತದೆ, ಆ ಮೇಲೆ ಖರ್ಚು ಎಷ್ಟಾಗುತ್ತದೆಂದು ಅಂಕಿಯನ್ನು ನಿಮ್ಮ ಉತ್ತರದಲ್ಲಿ ಕೊಟಿದ್ದೀರಿ. ಗಣಿಯಿಂದ ಎಷ್ಟು ಆದಾಯ ಬರುತ್ತಿದೆ ಮತ್ತು ರಸ್ತೆ ಸಲುವಾಗಿ ಎಷ್ಟು ಖರ್ಚಾಗುತ್ತದೆ ಎನ್ನುವ ಅಂಕಿಯನ್ನು ಕೂಡ ಇಲ್ಲಿ ಕೊಟ್ಟಿದ್ದೀರಿ. Over load ಆಗಿ ಹೋಗತಕ್ಕಂಥ ಗಾಡಿಗಳನ್ನು ನೀವು ಬಿಡದಿರುವುದರಿಂದ, ಹಳ್ಳಿ ರಸ್ತೆಗಳನ್ನು ಎಲ್ಲೆಲ್ಲಿ ನಾವು ನಬಾರ್ಡ್ ಹಣದಿಂದ ಚೆನ್ನಾಗಿ ಮಾಡಿಸಿದ್ದೇವೆಯೋ ಅಲ್ಲಿ ಆ ವಾಹನಗಳು ಸುತ್ತಿಕೊಂಡು ಹೋಗುತ್ತವೆ, ಆ ರಸ್ತೆಗಳೂ ಸಹ ಹಾಳಾಗುತ್ತವೆ. ಆ ಕಾರಣದಿಂದ ಅದರ ಕಡೆಗೂ ಕೂಡ ತಾವು ಗಮನಕೊಟ್ಟು, ಅದೇಕೋ ಗಣಿ ವಿಚಾರ ಬಂದ ಕೂಡಲೆ ಅರಣ್ಯ ಸಚಿವರು ಏಕೋ ತಣ್ಣಗಾಗಿ ಬಿಟ್ಟರು. ಸತ್ಯವಾಗಿದ್ದಾಗ ಯಾರಿಗೂ ಅಂಜಬಾರದು. ಯಾರಿಗೂ ಹೆದರುವ ಕಾರಣವಿಲ್ಲ. ಗಣಿಗಾರಿಕೆಯನ್ನು ಕಟ್ಟುನಿಟ್ಟಾಗಿ ನಿಲ್ಲಿಸಿರಿ. ಅದನ್ನು ನಿಲ್ಲಿಸದೇ ಹೋದರೆ ಈ ರಾಜ್ಯ ಉಳಿಯುವುದಿಲ್ಲ. ಈ ದೇಶ ಉಳಿಯುವುದಿಲ್ಲ. ನಮ್ಮ ರಾಜ್ಯವಂತೂ ಹಾಳಾಗಿ ಹೋಗುತ್ತದೆ. ನಾವು ದಿನಾಲು ನೋಡುತ್ತಿರುತ್ತೇವೆ. ಯಾರೂ licence ತೆಗೆದುಕೊಂಡಿಲ್ಲ. ಯಾವುದೋ ಒಂದು ಎಕರೆ ಜಾಗವನ್ನು ತೆಗೆದುಕೊಂಡು ಅಲ್ಲಿ 50 ಎಕರೆ ಜಾಗದಲ್ಲಿ licence ತೆಗೆದುಕೊಳ್ಳದೇ ಗಣಿಗಾರಿಕೆ ಮಾಡುವುದು. ಇದು ರಾಜ್ಯದಲ್ಲಿ ನಡೆದಿದೆ. ಇವೆಲ್ಲವನ್ನು ಕಟ್ಟುನಿಟ್ಟಾಗಿ ಮಾನ್ಯ ಅರಣ್ಯ ಸಚಿವರು ನಿಲ್ಲಿಸಬೇಕು. ನಾನು ನಿನ್ನೆ ಹೇಳಿದ ಹಾಗೆ ಇವತ್ತೂ ಕೂಡ ಶ್ರೀಮತಿ ಮೇನಕಾ ಗಾಂಧಿಯವರನ್ನು ನೆನೆಸಿಕೊಳ್ಳುತ್ತೇವೆ. ಇವತ್ತೂ ಕೂಡ ನಮ್ಮ ರಾಜ್ಯದಲ್ಲಿ ದಿವಂಗತ ಬಸವಲಿಂಗಪ್ಪನವರನ್ನು ನೆನೆಸಿಕೊಳ್ಳುತ್ತೇವೆ. ನೀವೇನೋ ಮುಂದೆ ಆ ತರಹ ಆಗುವುದಿಲ್ಲವೆಂದು ಹೇಳಿಬಿಟ್ಟಿರಿ. ಕೊನೆಯ ಪಕ್ಷ ಪರಿಸರ ಖಾತೆ ಎಂದರೇನು ಎನ್ನುವುದನ್ನು ಎಲ್ಲರಿಗೂ ತೋರಿಸಿಕೊಡಿ. ಹಿಂದೆ ದಿವಂಗತ

ಬಸವಲಿಂಪ್ಪನವರಿಗೆ ಕೇವಲ ಪರಿಸರ ಖಾತೆ ಕೊಟ್ಟಿದ್ದರೂ, ಅರಣ್ಯ ಖಾತೆ ಕೊಟ್ಟಿರಲಿಲ್ಲ. ಪರಿಸರ ಖಾತೆ ತೆಗೆದುಕೊಂಡು ಪರಿಸರವನ್ನು ಯಾವ ರೀತಿ maintain ಮಾಡಬೇಕೆಂದು ಇಡೀ ರಾಜ್ಯವನ್ನು ನಡುಗಿಸಿಬಿಟ್ಟರು. ಹಿಂದೆ 'ಗಂಗಾ ಸ್ನಾನ ತುಂಗಾ ಪಾನ' ಎಂದು ಇತ್ತು. ತುಂಗಾ ನೀರನ್ನು ಕುಡಿದರೆ ಎಲ್ಲಾ ಖಾಯಿಲೆಗಳು ಹೋಗುತ್ತಿದ್ದವು ಎಂದು ಹೇಳುತ್ತಿದ್ದರಲ್ಲವೇ ಪ್ರಕಾಶ್ ಸಾಹೇಬರೆ' ನೀವು ನಾವು ಸಣ್ಣವರಿದ್ದಾಗ ತುಂಗಭದ್ರಾ ನದಿ ನೀರು ಕುಡಿದರೆ ರೋಗ ಹೋಗುತ್ತಿದ್ದವು. ಈಗ ನಮ್ಮ ತುಂಗಭದ್ರಾ ನೀರು ಕುಡಿದರೆ ಏನಾಗುತ್ತದೆ? ಖಾಯಿಲೆ ಬರುತ್ತದೆ. ಇನ್ನು ಗಂಗಾ ಸ್ನಾನದ ಬಗ್ಗೆ ಹೇಳುವುದಾದರೆ, ಕಾಶಿಗೆ ಆಗಾಗ ಬರುವುದಿಲ್ಲ, ನಡಿ ಹೋಗೋಣವೆಂದು ಕಾಶೀ ಸ್ವಾಮಿಗಳು ಬರುವುದಕ್ಕೆ ಹೇಳಿದ್ದರು. ಅಲ್ಲಿಗೆ ಹೀಗಿದ್ದೆವು. ಅಲ್ಲಿ ವಿಶ್ವನಾಥ ಸ್ವಾಮಿಯ ಜಾತ್ರೆಗೆ ಕರೆದುಕೊಂಡು ಹೋಗಿದ್ದರು. 'ಇದೇನ್ರಿ ಗಂಗಾ ನದಿ ಎಂದು ಹೇಳಿ ಅದರಲ್ಲಿ ಜಳಕವನ್ನೇ ಮಾಡಲಿಲ್ಲ' ಎಂದರು. ಊರಿನ ಎಲ್ಲಾ ಹೊಲಸು ಅನ್ನು ಆ ನದಿಗೆ ಬಿಟ್ಟು ನದಿಗಳನ್ನು ಹಾಳು ಮಾಡಿದೆವು, ಹಳ್ಳಗಳನ್ನು ಹಾಳು ಮಾಡಿದೆವು, ಕುಡಿಯುವ ನೀರು ಸರಿಯಿಲ್ಲ, ಹೀಗಾಗಿ ಇವತ್ತಿನ ದಿವಸ ಪರಿಸರದ ಬಗ್ಗೆ ಹೆಚ್ಚು ಒತ್ತು ಕೊಡಬೇಕಾಗುತ್ತದೆ. ಮಾನ್ಯ ಯಡಿಯುರಪ್ಪನವರೆ, ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಮುಂದಿನ ಸಲ ಬಜೆಟ್‌ನಲ್ಲಿ ಬೇರೆ ಎಲ್ಲದಕ್ಕೂ ಹಣ ಕಟ್ ಮಾಡಿ, ಅರಣ್ಯ ಮತ್ತು ಪರಿಸರಕ್ಕೆ ಹೆಚ್ಚು ಹಣ ಇಡಬೇಕು, ಈ ರೀತಿ ಮಾಡದಿದ್ದರೆ ನಿಮ್ಮ ಎಲ್ಲಾ ಯೋಜನೆಗಳು fail ಆಗುತ್ತವೆ. ಹೊಳೆ, ಹಳ್ಳ ಇಲ್ಲದಿದ್ದ ಮೇಲೆ ಕುಡಿಯುವ ನೀರನ್ನು ಎಲ್ಲಿಂದ ತಂದುಕೊಡುತ್ತೀರಿ? ಊರೆಲ್ಲ ಒಣಗಿದ ಮೇಲೆ ಎಲ್ಲಿಂದ ತರುತ್ತಿರಿ? ಇನ್ನು ಮಾನ್ಯ ಕಂದಾಯ ಸಚಿವರು ಗಮನಕ್ಕೆ ತರುವುದೇನೆಂದರೆ, ಇಲ್ಲಿ ನೀವು ಎಷ್ಟೇ ಪ್ರಾಮಾಣಿಕವಾಗಿದ್ದರೆ, ನಿಮ್ಮ ಸೆಕ್ರೆಟರಿ ಪ್ರಾಮಾಣಿಕವಾಗಿದ್ದರೆ ಮಾತ್ರ ಆಗುವುದಿಲ್ಲ. ನನ್ನದೇ ಒಂದು ಉದಾಹರಣೆಯನ್ನು ಹೇಳುತ್ತೇನೆ. ಹಿರಿಯೂರು ತಾಲ್ಲೂಕು ಐಮಂಗಲ ಹೋಬಳಿ ಮರಡಿಹಳ್ಳಿ ಗ್ರಾಮದ ಸರ್ವೇ ನಂಬರ್... ಇದನ್ನು ತಾವು ಬರೆದುಕೊಳ್ಳಬೇಕು. ನನ್ನ ಮಗನೇ ಅಲ್ಲಿ ಒಂದು ಜಮೀನು ತೆಗೆದುಕೊಂಡಿದ್ದಾನೆ. ಇಲ್ಲಿ ನಮ್ಮಂಥವರ ಗತಿಯೇ ಈ ತರಹ ಆದರೆ ಉಳಿದವರ ಸ್ಥಿತಿ ಹೇಗಾಗಬಹುದು? ಎನ್ನುವುದೇ ನನ್ನ ಪ್ರಶ್ನೆಯಾಗಿದೆ. ಅಲ್ಲೊಂದು ಜಮೀನನ್ನು ಬಡವರು ಏನಿದ್ದಾರೆ ಅವರಿಗೆ ಮುಕ್ಕಟೆಯಾಗಿ ಮಾಡುವ ಸಲುವಾಗಿ ಅಲ್ಲೊಂದು Cancer Hospital ಮಾಡಬೇಕೆಂದು ನಿರ್ಧರಿಸಿದ. ಬಹುಶಃ ಉದಾಸಿಯವರು ಇದ್ದರು. ನಮ್ಮಿಬ್ಬರನ್ನು ನೋಡುವುದಕ್ಕೆ ಎಂದು ಬಂದ. Circle ನವನು ಎರಡು ಸಾವಿರ ರೂಪಾಯಿಗಳನ್ನು ಕೇಳುತ್ತಾನೆಂದು ಹೇಳಿದ. ಆನಂತರ 'ಏಕಪ್ಪಾ, ದುಡ್ಡು ಕೇಳುತ್ತೀರಂತೆ, ಏಕೆ?' ಎಂದು ತಹಶೀಲ್ದಾರರಿಗೆ phone ಮಾಡಲಾಯಿತು. ಮಾಡುತ್ತೇನೆಂದು ಹೇಳಿದ.

ಆದರೆ, ಇವತ್ತಿನವರೆಗೂ ಮಾಡಿಲ್ಲ. ಅವನು, 'ಯಾವ ಮಗ MLA, ಯಾವ Minister ನೋಡ್ಡೋಣ' ಎಂದು ಹೇಳುತ್ತಾನಂತೆ. ಇದು ಐಮಂಗಲ circle ನದು. ಬರೆದುಕೊಳ್ಳಿ.. ಆ file ಅನ್ನು ಯಾವಾಗ ತರಿಸಿಕೊಳ್ಳುತ್ತೀರಿ? ಆ file ಮೇಲೆ ಚರ್ಚೆಯಾಗಬೇಕು. ಇಂಥವು ಕೆಲಸವಾಗದೇ ಬಹಳಷ್ಟು ಹಾಗೆಯೇ ಉಳಿದುಕೊಂಡಿವೆ. 18–08–2006ರಲ್ಲಿ ನೊಂದಾವಣಿ ಮಾಡಿರುವಂಥದ್ದು ಇಲ್ಲಿಯವರೆಗೆ ಆಗಿಲ್ಲ. ಅಂದರೆ, ನಮ್ಮಂಥವರದೇ ಈ ತರಹ ಆದರೆ ಈ ರಾಜ್ಯದಲ್ಲಿ ಸಾಮಾನ್ಯ ರೈತನ ಗತಿ ಏನು? ಯಾರೂ ಸುಮ್ಮನೆ ಕೆಲಸ ಮಾಡುವುದಿಲ್ಲ. ರೊಕ್ಕವಿಲ್ಲದೇ ಯಾವ ದಂಧೆಯೂ ನಡೆಯುವುದಿಲ್ಲ. ಎಲ್ಲಿ ಹೋದರೂ ಭ್ರಷ್ಟಾಚಾರ ವ್ಯಾಪಕವಾಗಿದೆ, ವ್ಯಾಪಕವಾಗಿ ನಡೆಯುತ್ತಿದೆ. ನೀವು ಮಾಡುತ್ತೀದ್ದೀರಿ, ಹಿಂದೆ ಇದು ಇದ್ದಿಲ್ಲವೆಂದು ಹೇಳುತ್ತಿಲ್ಲ. ಆದರೆ, ಅದನ್ನು ಕಟ್ ಮಾಡಬೇಕಲ್ಲವೇ? ಮಾನ್ಯ ಯಡಿಯೂರಪ್ಪನವರು 'ಭ್ರಷ್ಟಾಚಾರ ನಿರ್ಮೂಲನೆ ಮಾಡುತ್ತೇವೆಂದು ಹಿಂದಿನ ಬಜೆಟ್‌ನಲ್ಲಿ ಹೇಳಿದ್ದರು.' ಆದರೆ, ಈ ಸಲ ಇದನ್ನು ಹೇಳಲೇ ಇಲ್ಲ. ಏತಕ್ಕೆ, ಹೋಗಲಿ ಬಿಡು ಎಂದು ಏನಾದರೂ ಸುಮ್ಮನಾದರೂ ಹೇಗೆ ಎಂಬುದು ನನಗೆ ತಿಳಿಯಲಿಲ್ಲ. ಅದನ್ನು ನಿಲ್ಲಿಸದೇ ಇದ್ದರೆ ಈ ಭ್ರಷ್ಟಾಚಾರ ಹೋಗದೇ ಇದ್ದರೆ ಎಂದೆಂದೂ ನಮ್ಮ ರಾಜ್ಯ ಉದ್ಧಾರವಾಗುವುದಿಲ್ಲ. ಎಲ್ಲಾ ಇಲಾಖೆಗಳಲ್ಲೂ ಕೂಡ ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ. ಅದನ್ನು ಹೇಗೆ ನಿಲ್ಲಿಸಬೇಕೆಂದು ಎಲ್ಲರೂ ಕೂಡಿ ವಿಚಾರ ಮಾಡಬೇಕು. ಇದು ಬರೀ ನಿಮ್ಮ ಕಾಲಕ್ಕೆ ಆಗಿದೆ ಎಂದು ನಾನು ಹೇಳುವುದಿಲ್ಲ. ಆದರೆ ನಿಲ್ಲಲಿಲ್ಲ. ಮತ್ತೆ ಇದು ಹೆಚ್ಚಾಗಿದೆ. ರೇಟ್ ಹೆಚ್ಚಾಗುವಂತೆ ಇದು ಹೆಚ್ಚಾಗಿ ಹೋಗಿದೆ. ಐಮಂಗಲ ಸರ್ವೆ ನಂಬರ್ 45/3, 5 ಎಕರೆ, 30 ಗುಂಟೆ, 18–08–2006 ರಲ್ಲಿ ನೊಂದಾವಣೆಯಾಯಿತು. ಎಂಟ್ರಿ ಆಗಿಲ್ಲ ಸರ್ಟಿಫೈ ಆಗಿಲ್ಲ. ಈಗ ಏನಾದರೂ ಇಲ್ಲಿಂದ ಹೋದ ಮೇಲೆ ಮಾಡುತ್ತಾರೋ ಹೇಗೋ ಆ ಕಡತವನ್ನು ತರಿಸಿ ನಾನು ಬರುತ್ತೇನೆ. ನಿಮ್ಮ ಸೆಕ್ರೆಟರಿಯವರನ್ನು ಕರೆಸಿ, ನಿಮ್ಮ ತಹಶೀಲ್ದಾರ್‌ರವರನ್ನು ಕರೆಸಿ, ನಮ್ಮ ಪರಿಸ್ಥಿತಿ ಇದ್ದರೆ ಸಾಮಾನ್ಯ ಜನರ ಪರಿಸ್ಥಿತಿ ಯಾವ ರೀತಿ ಇದೆ ಎಂದು ನಾವು ಇಲ್ಲಿ ಅರ್ಥ ಮಾಡಿಕೊಳ್ಳಬೇಕು. ನಾವು ರೆಡಿಯಾದರೆ ನಾಳೆ ಇನ್ನೊಂದು ಮಾಡಿಕೊಡಬಹುದು. ಇದು ಇವತ್ತು ರಾಜ್ಯದಲ್ಲಿ ನಡೆಯುವಂಥ ಭ್ರಷ್ಟಾಚಾರದ ವ್ಯವಸ್ಥೆ ಎಂದು ಹೇಳುತ್ತಾ ನಾನು ತಮಗೆ ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ. ಆ ಗ್ರಾಮ ಸಹಾಯಕರು, ಯಡಿಯೂರಪ್ಪನವರೇ, ಪ್ರಕಾಶ್‌ರವರೇ ನೀವು ಇದ್ದಾಗಲೂ ಹೇಳಿದಿರಿ, ಅದರಲ್ಲಿ ಎಲ್ಲಾ ಬಡವರು, ಎಸ್.ಸಿ.ಎಸ್.ಟಿ ಜನಾಂಗದವರು ಇದ್ದಾರೆ, ಕೆಲವರು ಜನರಲ್‌ರವರು ಇದ್ದಾರೆ, ಅದೇನು ಬಹಳ ಖರ್ಚು ಬರುವುದಿಲ್ಲ. ಇನ್ನೊಂದು 58 ಕೋಟಿ ಬರುತ್ತದೆಂದು ಹೇಳಿದಿರಿ, ಈಗ 26 ಕೋಟಿ ಕೊಡುತ್ತೀರಿ, ನೀವು ಇದ್ದಾಗ ಹೆಚ್ಚು ಮಾಡಿದಿರಿ. ದಯವಿಟ್ಟು ನೀವು ಅವರನ್ನು ಖಾಯಂ ಮಾಡಿ.

ಪರ್ಮನೆಂಟಾಗಿ ಅವರು ಇರಬೇಕಾಗುತ್ತದೆ, ಇದು ಬಹಳ ಒಳ್ಳೆಯದು ಏಕೆಂದರೆ, ಗ್ರಾಮ ಸಹಾಯಕ ನಿಮಗೆ ಬೇಕೆ ಬೇಕಾಗುತ್ತದೆ. ಹಿಂದೆ ನೀವು ಗೌಡರಾಗಿದ್ದವರು ಎಷ್ಟು ಜನ ನಿಮ್ಮ ಕೈಯಲ್ಲಿ ವಾಲೀಕರು ಇದ್ದರು, ಹಳ್ಳಿಯಲ್ಲಾ ತಿರುಗಿ ಬೆಳಗಿನತನಕ ಅಡ್ಡಾಡುತ್ತಿದ್ದಿಲ್ಲವೇ ಅದೇ ವ್ಯವಸ್ಥೆಯಿದ್ದರೆ ನಿಮ್ಮ ಈ ನಕ್ಸಲೈಟ್ಸ್ ಯಾವುದೂ ಇರುತ್ತಿರಲಿಲ್ಲ. ಅನುವಂಶಿಕರನ್ನು ಬೇಕಾದರೆ ತೆಗೆಯಲಿ, ಹಳ್ಳೀಯಲ್ಲಿ ಪೋಲಿಸ್ ಪಾಟೀಲ್‌ರು ಇದ್ದರು ಅವರು ಆ ಹಳ್ಳಿಯನ್ನು ತನ್ನ ಕಂಟ್ರೋಲ್‌ನಲ್ಲಿಟ್ಟುಕೊಳ್ಳುತ್ತಿದ್ದರು. ಈಗೇನು ನಕ್ಸಲೈಟ್ಸ್ ಇದಾರೆ ಇದಕ್ಕೆ ನೀವು ಏನು ಮಾಡಿದರೂ ಹೋಗುವುದಿಲ್ಲ. ಈ ನಕ್ಸಲೈಟ್ಸ್ ಆ ಕಾರಣದಿಂದ ತಾವು ಎಲ್ಲರೂ ಹಿರಿಯರೂ ಇದ್ದೀರಿ, ದಯವಿಟ್ಟು ಅವರನ್ನು ಏನಾದರೂ ಮಾಡಿ ಖಾಯಂ ಮಾಡಬೇಕೆಂದು ಹೇಳುತ್ತೇನೆ. ಇನ್ನು ಉದಾಸಿಯವರು, ಕುಡಿಯುವ ನೀರಿನ ಮಂತ್ರಿಗಳು ಇಬ್ಬರೂ ಸೇರಿಕೊಂಡಿದ್ದೀರಿ, ಉದಾಸಿಯವರೆ, ನಿಮ್ಮ ಗ್ರಾಮೀಣಾಭಿವೃದ್ಧಿ ಇಲಾಖೆಗೆ ನೆಗಡಿಯಾಗಿದೆ. 100% ಒಪ್ಪುವ ಮಾತು. ನೆಗಡಿಯಾಗಿದೆ. ನೆಗಡಿಯಾಗಿದೆ ಎಂದು ಮೂಗು ಕೊಯ್ಯುವುದಕ್ಕೆ ಆಗುವುದಿಲ್ಲ. ಆದರೆ ಆ ನೆಗಡಿಗೆ ಔಷಧಿ ಹುಡುಕಲೇ ಬೇಕು. ನಾನು ನಿನ್ನೆ ಎರಡು ಗ್ರಾಮ ಪಂಚಾಯಿತಿಗಳ ರಿವ್ಯೂ ಮೀಟಿಂಗ್ ಇಟ್ಟುಕೊಂಡಿದ್ದೆ. ಈ ಜನತಾ ಮನೆಗಳ ಆವಾಂತರ ಏನೇನು ಆಗಿದೆ ಎಂಬುದರ ಬಗ್ಗೆ ನಿನ್ನೆ ನೋಡಿ ನನಗೆ ಬಹಳ ಗಾಬರಿಯಾಯಿತು. ಏಕೆಂದರೆ, ಆ ಊರಿನ ಜನರು ನನ್ನನ್ನು ಹೊರಗಡೆ ಹೋಗಲಿಕ್ಕೆ ಬಿಡಲಿಲ್ಲ. ಜನತಾ ಮನೆಗಳು ಎಂದು ನೀವೇನು ಹಂಚಿದ್ದೀರಿ ಯಾರಿಗಾದರೂ ಒಬ್ಬ ಬಡವರಿಗೆ ಆ ಮನೆಯನ್ನು ಕೊಟ್ಟಿದ್ದಾರೆಯೇ? ನೀವು ಬಂದು ಚೆಕ್ ಮಾಡಿ ಎಂದು ಜನ ಹೇಳಿದರು. ಅದಕ್ಕೆ ನಾನು ನಮ್ಮ ಕೈಯಲ್ಲಿ ಏನಿದೆ ಎಲ್ಲಾ ನಿಮ್ಮ ಗ್ರಾಮ ಪಂಚಾಯಿತಿ ಸದಸ್ಯರು ಮಾಡಿದ್ದಾರೆ, ಅವರನ್ನು ಕೇಳಬೇಕು, ಎಂದಾಗ ಜನ, ನಿಮ್ಮನ್ನು ಏಕೆ ಆರಿಸಿ ತಂದೆವು? ಎಂದು ನನ್ನನ್ನು ಕೇಳಿದರು, ಇಂಥ ಪರಿಸ್ಥಿತಿ ಅಲ್ಲಿ ಇದೆ. ಈ ಕಡೆ ಅಧಿಕಾರ ವಿಕೇಂದ್ರೀಕರಣವನ್ನು ಮಾಡಬೇಕು. ಈ ಎಲ್ಲಾ ವ್ಯವಹಾರವನ್ನು ನಿಲ್ಲಿಸಬೇಕು. ನೆಗಡಿಯಾಗಿದೆ ಎಂದರೆ ನಾನು ಮೂಗು ಕೊಯ್ಯಿರಿ ಎಂದು ನಾನು ಹೇಳುವುದಿಲ್ಲ. ಹೌದಲ್ಲರಿ. ಕೆ.ಆರ್.ಪಾಟೀಲರೇ? ಅವರಿಗೂ ಗೊತ್ತಿದೆ, ಬಹುತೇಕವಾಗಿ ಇದು ಎಲ್ಲರಿಗೂ ಗೊತ್ತಿದೆ. ಎಮ್‌ಎಲ್‌ಎಗಳು ಬಯ್ಯಸಿಕೊಳ್ಳುವುದು ನಿಜ. ಆದರೆ ಅದು ಆಗಿದೆ ಎಂದು ಅಧಿಕಾರ ವಿಕೇಂದ್ರೀಕರಣವನ್ನು ಕಿತ್ತುಕೊಳ್ಳುವುದಕ್ಕೆ ಆಗುವುದಿಲ್ಲ. ಆದರೆ ಅದನ್ನು ಹೇಗೆ ನಿಲ್ಲಿಸಬೇಕು? ಏನು ಮಾಡಿ ನಿಲ್ಲಿಸಬೇಕು ಎಂಬುದನ್ನು ಕೂಡ ವಿಚಾರ ಮಾಡಿ ಖಂಡಿತವಾಗಿ ತಾವು ಅದನ್ನು ನಿಲ್ಲಿಸಬೇಕು. ಈ PMGSY ನಲ್ಲಿ ರೋಡು ಕೊಟ್ಟಿಸಿದ್ದೀರಿ, 15 ಲಕ್ಷ, 20 ಲಕ್ಷ ಒಂದೊಂದು ಕಿಲೋಮೀಟರ್‌ಗೆ ತೆಗೆದುಕೊಳ್ಳುತ್ತಾರೆ. ನಬಾರ್ಡ್‌ಗೆ 10–15 ಲಕ್ಷ ತೆಗೆದುಕೊಳ್ಳುತ್ತಾರೆ. ಆ ಕೆಲಸಗಳು

ಏನು ಆಗಿವೆ? ಯಾವ ರೀತಿ ಆಗಿವೆ ಎಂಬುದನ್ನು ನೋಡಿದರೆ, ಖಂಡಿತವಾಗಿ ನೋವಾಗುತ್ತದೆ. ನಿಮ್ಮ ಮನೆಗೆ ಬಂದು ಕಲ್ಲನ್ನು ಇಟ್ಟಿದ್ದೆ. ಮಾನ್ಯ ಪ್ರಕಾಶ್‌ರವರೆ, ಇವರ ಇಂಜೀನಿಯರ್‌ರವರನ್ನು ಕರೆದುಕೊಂಡು ಹೋಗಿ ಅವರ ಸಮಕ್ಷಮಕ್ಕೆ ಎಬ್ಬಿಸಿ ಅಂಥಂಥ ಕಲ್ಲು ಹಾಕಿ, ರೋಲರ್ ಹೊಡೆದು, ಅಲ್ಲಲ್ಲಿ ನೀರು ಹಾಕಿ ಮಾಡುತ್ತಿದ್ದರು. ರೇವಣ್ಣನವರೆ ನೀವು ಬನ್ನಿ, ಧಡಕ್ಕನೆ ಹೇಳಿದರೆ ನೀವು ನಂಬುವುದಿಲ್ಲ. ಇವತ್ತು ಹಳೆಯ ಪದ್ಧತಿ ಏನು ಇತ್ತು, ನಿಮ್ಮ ಇಂಜೀನಿಯರ್ಸ್ ಏನು ತಪ್ಪು ಕೊಟ್ಟಿದ್ದಾರೆಂದರೆ,

ಶ್ರೀ ಡಿ.ಆರ್.ಪಾಟೀಲ್ : ಮಾನ್ಯ ಉದಾಸಿಯವರೆ, ರೋಡ್ ಮಾಡುವುದರೊಳಗೆ PWD ಆಗಲಿ, RDPR department ಆಗಲಿ, material collection ಏನು ಆಗುತ್ತದೆ ಅವೆಲ್ಲವನ್ನು video ಮಾಡುವ ಹಾಗೆ ಮಾಡಿ. ಇದಕ್ಕೇನು ತೊಂದರೆಯಿದೆ? ಅವುಗಳ measurement ಏನು ಎಂದು ಎಲ್ಲೂ ಗೊತ್ತಾಗುವುದಿಲ್ಲ ಅವರವರು ಒಂದಾಗಿ ಬಿಟ್ಟರೆ ಆಯಿತು. Video graph ಎಂದರೆ, material spread ಆಗುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ನೀವು ಇನ್ನೂ ಕೇಳಿಲ್ಲ. ನಾನು ನಮ್ಮ ರೇವಣ್ಣನವರಿಗೆ ಒಂದು ಪ್ರಶ್ನೆಯನ್ನೇ ಹಾಕಿದ್ದೆ. ಉತ್ತರ ಕೊಟ್ಟಿದ್ದಾರೆ, ಏನಾದರೆ, ಇಂಚು ಅಳೆಯುತ್ತಾರಂತೆ, ಯಾವ ದಪ್ಪ ಅಳೆಯುತ್ತಾರೆ? ಹಿಂದೆ ರೇವಣ್ಣನವರೇ, ನೀವಿಬ್ಬರೂ ಮಂತ್ರಿಗಳಿದ್ದೀರಿ. ಕಡಿ ಹೊಡೆದು ಕಟ್ಟೆ ಹಾಕುತ್ತಿದ್ದರು. ಹಾಕುತ್ತಿದ್ದರೋ ಇಲ್ಲವೋ ಇದು ನಿಮಗೂ ಗೊತ್ತಿದೆ. ಆ ಮಣ್ಣಿನ ಕಟ್ಟೆ ಹಾಕುತ್ತಿದ್ದರು. ನಂತರ, AE ನೋಡುತ್ತಿದ್ದ. ನಂತರ AEE ಬಂದು ನೋಡಿತ್ತಿದ್ದ. ನಂತರ EE ನೋಡುತ್ತಿದ್ದ. Surprise ಆಗಿ SE ಮತ್ತು CE ರವರು ಕೂಡ ಬಂದು ನೋಡುತ್ತಿದ್ದರು. ಇವತ್ತು ಅವರು ಬೇಕಾಗಿಲ್ಲವಂತೆ. ಅವರೇನು ನಂತರ ಬಂದು ನೋಡುತ್ತಾರಂತೆ. ನಂತರ ಅದು ಬೇರೆ ಯಾವುದೋ ಇಲಾಖೆ ಎಂದು ಉತ್ತರ ಕೊಟ್ಟಿದ್ದೀರಿ. ಅದು ಯಾವುದು ಎಂದರೆ, Quality control. "ಕುರಿ ಕಾಯುತ್ತಿಯಾ ಎಂದರೆ ಸಂಬಳ ಇಲ್ಲದೇ ಕಾಯುತ್ತೇನೆ ಎಂದರಂತೆ". ಅವರು ಕಡೆಗೆ ಬರುತ್ತಾರೆ, ರೇಟ್ ಫಿಕ್ಸ್ ಮಾಡಿರುತ್ತಾರೆ.

ಅಧ್ಯಕ್ಷರು : ಎಸ್.ಎಸ್. ಪಾಟೀಲ್‌ರೆ, ನೀವು ಏನೇ ಹೇಳಿದರೂ, ಅದು ಹೆಚ್ಚು ಆಗುತ್ತಿದೆ, spread ಆಗುತ್ತಿದೆ ಎಂದರೂ ತಪ್ಪಾಗುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಸಾರ್ ನನಗೆ ಮಾತನಾಡಲಿಕ್ಕೆ ಬಿಡಿ ಸಾರ್. ನಾನು ಯಾರಿಗೂ ಅಡ್ಡಪಡಿಸಿಲ್ಲ.

ಅಧ್ಯಕ್ಷರು : ನಾನು ಹೇಳುವುದೇನೆಂದರೆ, ಯಾರಿಗಾದರೂ ಶಿಕ್ಷೆಯಾಗಿದೆಯೇ? ಯಾವ ಸರ್ಕಾರಗಳಾಗಲಿ ಮಾಡಿದಿಯೇ ಯಾವನಾದರೂ Chief

Engineer, Superintending Engineer, ಮನೆಗೆ ಹೋಗಿದ್ದಾನೆಯೇ? ಸುಮ್ಮನೆ ಏಕೆ ಮಾತನಾಡುತ್ತೀರಿ? ಹೇಳಿದ್ದೇ ಹೇಳಿದ್ದೇ ಏಕೆ ಹೇಳುತ್ತೀರಿ? ಯಾರಿಗೂ ಅಂಥ ಇಚ್ಛಾಶಕ್ತಿಯಿಲ್ಲ, ಧೈರ್ಯವಿಲ್ಲ, honesty ಇಲ್ಲ, ಏನೂ ಇಲ್ಲ, ಸುಮ್ಮನೆ ಭಾಷಣ ಹೇಳುತ್ತಿರುವುದು. ಇದು ನಮ್ಮ ಮುಂದಿನ ಜನಾಂಗಕ್ಕೆ ಕೊಡತಕ್ಕಂಥದ್ದಲ್ಲ. ನಾವು ಸುಮ್ಮನೆ ಪ್ರಾಮಾಣಿಕ ಅದ ಇದು ಎಂದು ಭಾಷಣ ಮಾಡಿದರೆ ಪ್ರಯೋಜನವಿಲ್ಲ. ಯಾವ ಸರ್ಕಾರಗಳು ಮಾಡಿವೆ? ಏಕೆ ಮಾಡಲಿಲ್ಲ? ಎಷ್ಟು ಜನ ಇಂಜಿನೀಯರ್‌ಗಳು ಮನೆಗೆ ಹೋಗಿದ್ದಾರೆ? ಎಷ್ಟರಮಟ್ಟಿಗೆ ಗುಣಮಟ್ಟದ ಕೆಲಸ ನಡೆಯುತ್ತಿದೆ? ಸುಮ್ಮನೆ ಹೇಳುವುದಲ್ಲ. ತಾವು ಮಾತನಾಡಿ.

ಶ್ರೀ ಎಸ್.ಎಸ್.ಪಾಟೀಲ್ : ಈಗ ನೋಡೋಣ ನಮ್ಮ ಉದಾಸಿಯವರ ಕೈಯಲ್ಲಿ ಒಬ್ಬ ಇಂಜಿನಿಯರ್‌ರವರನ್ನು ಕೊಟ್ಟಿದ್ದೇನೆ. ಅವರನ್ನು ಏನು ಮಾಡುತ್ತಾರೆ ನೋಡೋಣ. ಇಲ್ಲಿಂದ ಚೀಫ್ ಇಂಜಿನಿಯರ್‌ರವರನ್ನು ಕಳುಹಿಸಿದ್ದಾರೆ. ಅವರ ಚೀಫ್ ಇಂಜಿನಿಯರ್ ರವರ ಸಮಕ್ಷಮದಲ್ಲಿಯೇ ನಾನು ಆ ಕಲ್ಲು ತಂದು ಇಟ್ಟೆ. ಏನಾಗುತ್ತದೆ? ಏನು ಮಾಡುತ್ತಾರೆ ನೋಡೋಣ. ಏನಾದರೂ ಮಾಡಿ. ಹಿಂದಿನ ಪದ್ಧತಿಯನ್ನು ತೆಗೆದುಕೊಂಡು ಬನ್ನಿ. ಎಲ್ಲಾ ಹೋಗಿ, ನೀವೇ ಮಂತ್ರಿಗಳೇ ನೋಡುತ್ತೀರಿ, ನೀವೇ ಮಾಡುತ್ತೀರಿ, ನನಗೂ ಹೋಗಿ ನೋಡುವುದಕ್ಕಾಗುವುದಿಲ್ಲ. ನನಗೂ ಯಾರೋ ಅಲಿಗೇಷನ್ ಮಾಡಿದ್ದಾರೆಂದು ಗಾಡಿ ತೆಗೆದುಕೊಂಡು ಹೋಗಿದ್ದೆ, ನಾನೊಬ್ಬನೇ ಹೋದರೆ ನಂಬಲಿಕ್ಕಿಲ್ಲವೆಂದು ನಿಮ್ಮ ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರನ್ನು ಮತ್ತು ನಿಮ್ಮ ಅಸಿಸ್ಟೆಂಟ್ ಇಂಜಿನಿಯರ್‌ರವರನ್ನು ಕರೆದುಕೊಂಡು ಹೋದೆ. ಕಲ್ಲು ಯಾವ ತರಹದ್ದು ಹಾಕಿದಿರಿ ಅದನ್ನು ತೆಗಿಯಿರಿ ಎಂದು ಹೇಳಿದೆ. ಮಣ್ಣನ್ನು ಸುಮ್ಮನೆ ಹೀಗೆ ಉದುರಿಸಿದ ಹಾಗೆ ಹಾಕಿರುತ್ತಾರೆ. ಅದಕ್ಕೆ ನಾನು ಹೇಳುವುದು ಏನೆಂದರೆ, ನೀವು ಇಬ್ಬರು ಇದ್ದೀರಿ. ಮಾನ್ಯ ರೇವಣ್ಣನವರೆ, ಇಂಡಸ್ಟ್ರಿ ಸಾಹೇಬ್ರೇ ಸ್ವಲ್ಪ ತಾಳಿ ನಿಮ್ಮ ಇಲಾಖೆಗೂ ಬರುತ್ತೇನೆ. ನಮ್ಮ ರಾಯರೆಡ್ಡಿಯವರು ಮಾತನಾಡಬೇಕು ಅದಕ್ಕೆ ಅವರು ತಿರುಗ-ಮುರುಗ ಹೇಳುತ್ತಾರೆ. ನಾನು ನಿಮಗೆ ಹೇಳುವುದೇನೆಂದರೆ, ಹಿಂದಿನ ಪದ್ಧತಿಯನ್ನು ತರಿಸಿರಿ. ಅಧಿಕಾರಿಗಳ ಮಾತು ಕೇಳಬೇಡಿ. ಇಂಚು ನೋಡಿ ದಪ್ಪ ನೋಡುವ ಹಾಗೆ ಮಾಡಬೇಡಿ.

ಅಧ್ಯಕ್ಷರು : ಏನಾದರೊಂದು ವಚನ ಹೇಳಿ ಸ್ವಾಮಿ.

ಶ್ರೀ ಎಸ್.ಎಸ್.ಪಾಟೀಲ್ : ಇಷ್ಟರವರೆಗೆ ಹೇಳಿದ್ದೀನಲ್ಲ ಸ್ವಾಮಿ, ನಾನು ಹೇಳುವಾಗ ನೀವು ಮೂವರು ಮಂದಿ ಮಾತನಾಡುವಾಗ ಮಾತನಾಡಿಕೊಂಡು ಕುಳಿತಿರುತ್ತೀರಿ. ನಮ್ಮ ಕಡೆ ಲಕ್ಷ್ಯವೇ ಕೊಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ವಿರುದ್ಧ ಹಕ್ಕುಚ್ಯುತಿ ತರಬೇಕಾಗುತ್ತದೆ. ನಾವು ಮೂವರು ಎಲ್ಲಿ ಮಾತನಾಡುತ್ತಿದ್ದೇವೆ? ನಾವು ಸುಮ್ಮನೆ ಗಂಭೀರವಾಗಿ ಕುಳಿತಿದ್ದೇವೆ. ನಮ್ಮ ಮೇಲೆ ನಿಮಗೆ ಕಣ್ಣು ಬಿದ್ದಿದೆ.

ಶ್ರೀ ಎಸ್.ಎಸ್.ಪಾಟೀಲ್ : ಹಾಗೇನಿಲ್ಲ ನಿಮ್ಮ ಮೇಲೆ ನಮಗೆ ಜೀವ ಇದೆ.

ಅಧ್ಯಕ್ಷರು : ಸರ್ಕಾರಿ ಅಧಿಕಾರಿಗಳು ನೌಕರರ ಮೇಲೆ ಬಸವಣ್ಣನವರು ಏನಾದರೂ ವಚನ ಹೇಳಿದ್ದರೆ ಅದನ್ನು ಹೇಳಿಬಿಡಿ.

ಶ್ರೀ ಎಸ್.ಎಸ್. ಪಾಟೀಲ್ : ಆ ರೀತಿ ಹೇಳುವುದಾದರೆ,

"ಲೋಕದ ಡೊಂಕು ನೀವ್ಯಾಕೆ ತಿದ್ದುವುರಿ
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ,
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ"

ಲೋಕಸಭೆಯಲ್ಲಿ ಪ್ರಶ್ನೆ ಹಾಕಲಿಕ್ಕೆ ಅವರು ದುಡ್ಡು ತಿಂದರಂತೆ. ಪತ್ರಿಕೆಗಳಲ್ಲಿ ಇದರ ಬಗ್ಗೆ ಬಂತು. ನಮ್ಮನ್ನು ಸೇರಿಸಿಕೊಂಡಂತೆ ಮೊದಲು ನಾವುಗಳು ಸುಧಾರಿಸಿಕೊಳ್ಳಬೇಕು. ನಾನು ಇಲ್ಲವೆಂದು ಹೇಳಲಿಲ್ಲ.

ಅಧ್ಯಕ್ಷರು : ಹಾಗಾದರೆ ಎಲ್ಲಾ ಮುಗಿದು ಹೋಗಿದೆಯಲ್ಲ ಬಿಡಿ.

ಶ್ರೀ ಎಸ್.ಎಸ್. ಪಾಟೀಲ್ : ಇವತ್ತು ಪರಿಸ್ಥಿತಿ ಹದಗೆಟ್ಟಿದೆ. ನಮ್ಮನ್ನು ಸೇರಿದಂತೆ ಈ ಐವತ್ತು ವರ್ಷಗಳಲ್ಲಿ ಜನರನ್ನು ಎಲ್ಲಾ ಸೇರಿಸಿ ಅವರನ್ನು ಭ್ರಷ್ಟರನ್ನಾಗಿ ಮಾಡಿದ್ದೇವೆ. ಎಲೆಕ್ಷನ್ ನಲ್ಲಿ ಕೋಟಿಗಟ್ಟಲೆ ಕಳೆಯುವುದಕ್ಕೆ ಹೊರಟಿದ್ದೇವೆ, ಇಲ್ಲಿ ಅದನ್ನು ಹೇಳುವ ಹಾಗೆ ಇಲ್ಲ. ಏಕೆಂದರೆ, ಎಲ್ಲರೂ ಹತ್ತು ಲಕ್ಷ ಕೊಟ್ಟು ಬಂದಿರುತ್ತೇವೆ. ಇದು ಇವತ್ತಿನ ಪರಿಸ್ಥಿತಿ. ಅದಕ್ಕೆ ಮೂಲ ಈ ಭ್ರಷ್ಟಾಚಾರ ಕಳೆಯಬೇಕೆಂದು ಹೇಳಿ, ಕೊನೆಗೆ ಒಂದೆರಡು ವಚನಗಳನ್ನು ಹೇಳಿ ನಾನು ಮುಗಿಸುತ್ತೇನೆ. ಏಕೆಂದರೆ, ನಮ್ಮ ರಾಯರೆಡ್ಡಿಯವರು ಮಾತನಾಡಬೇಕಾಗಿದೆ. ಇಲ್ಲಿಗೇ ನಿಲ್ಲಿಸುತ್ತೇನೆ.

"ಕಾಂಚನೆಂಬ ನಾಯಿನೆಚ್ಚಿ ನಿಮ್ಮ ಮೆರದನಯ್ಯ
ಕಾಂಚನಕ್ಕೆ ವೇಳೆಯಿಲ್ಲದೆ ಲಿಂಗಕ್ಕೆ ವೇಳೆಯಲ್ಲಿಹದು
ಹಡಕೆಗೆ ಮೆಟ್ಟಿದ ಸೊಣಗನು ಅಮೃತ ರುಚಿ ಬಲ್ಲುದೆ ಅಯ್ಯ
ಕೂಡಲ ಸಂಗಮ ದೇವಾ":

ಒಬ್ಬ ಸತ್ಯಕ್ಕೆ ಎನ್ನುವ ಶರಣೆ ಹೇಳುತ್ತಾಳೆ, ಮಾನ್ಯ ಪ್ರಕಾಶ್‌ರವರೇ ನೀವ್ಯಾಕೆ ಮೈಕ್ ಕಿವಿಯಲ್ಲಿ ಇಟ್ಟುಕೊಳ್ಳುತ್ತೀರಿ ಬಿಡಿ ನನಗಿಂತಲೂ ನಿಮಗೆ ಎಲ್ಲಾ ಗೊತ್ತಿದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ನೀವು ಸುಳ್ಳು ಹೇಳುತ್ತೀರೊ ನಿಜ ಹೇಳುತ್ತೀರೊ ಎಂದು ಕೇಳುತ್ತಿದ್ದಾರೆ.

ಶ್ರೀ ಎಸ್.ಎಸ್.ಪಾಟೀಲ್ : ಅದನ್ನು ನೋಡಲಿ.

ಲಂಚವಚನಕ್ಕೆ ಕೈಯಾನೆ ಭೀಕ್ಷೆ

ಬಟ್ಟೆಯಲ್ಲಿ ಹೊನ್ನುವಸ್ತ್ರ ಬಿದ್ದಡೆ
ನೀ ಕೈ ಮುಟ್ಟಿ ಎತ್ತಿದೆನಾದರೆ
ನಿಮ್ಮಾಣೆ ನಿಮ್ಮ ಪ್ರಮಥರಾಣೆ
ಅದೇನು ಕಾರಣವೆಂದರೆ ನೀವಿಕ್ಕದಭೀಕ್ಷೆದಲ್ಲಿಪ್ಪೆನಾಗಿ
ಯಿಂತಲ್ಲದೆ ನಾನು ಅಳಿಮನವ ಮಾಡಿ
ಪರದ್ರವ್ಯಕ್ಕೆ ಆಶೆಮಾಡಿದೆನಾದರೆ
ನೀನಾಗಲೇ ಎನ್ನನರಕಗಲಿ ಅದ್ದಿ ನೀನೇದ್ದು ಹೋಗಾ
ಶಂಭು ಜಕ್ಕೇಶ್ವರ"

ಎಂದು ಒಬ್ಬ ಶರಣೆ ಹೇಳುತ್ತಾಳೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಬಸವಣ್ಣನವರು ಹೇಳಿದ್ದು ಇನ್ನೊಂದು ಮರೆತುಬಿಟ್ಟಿರಿ.

"ಛಲವಿರಲಿ ಶರಣಂಗೆ ಪರಧನವನೊಲ್ಲೆನೆಂಬ
ಛಲವಿರಲಿ ಶರಣಂಗೆ ಪರಸ್ತ್ರೀನೊಲ್ಲೆನೆಂಬ"ಎಂದು.

ಶ್ರೀ ಎಸ್.ಎಸ್.ಪಾಟೀಲ್ : "ಛಲಬೇಕು ಶರಣಂಗೆ...........

ಶ್ರೀ ವಾಟಾಳ್ ನಾಗರಾಜ್ : ಅದು ಆ ರೀತಿಯಲ್ಲ.

"ಛಲಬೇಕು ಶರಣಂಗೆ ಪರಧನವನೊಲ್ಲನೆಂಬ
ಛಲಬೇಕು ಶರಣಂಗೆ ಪರಸತಿಯನ್ನೊಲ್ಲೆಂಬ

ಇದಕ್ಕೆ ಎಷ್ಟು ಜನರು ಬದ್ಧರಾಗಿದ್ದೀರಿ? ಮಠಾಧಿಪತಿಗಳಿಂದ ಹಿಡಿದು, ಜಗ್ದುರುಗಳಿಂದ ಹಿಡಿದು, ಸಾಮಾನ್ಯ ಜನರವರೆಗೆ ಎಷ್ಟು ಜನ ಇದಕ್ಕೆ ಬದ್ಧರಾಗಿದ್ದೀರಿ? ಎಲ್ಲಾ ಬರೀ ಸುಮ್ಮನೆ ವಚನ ಬಗ್ಗೆ ಮಾತನಾಡುವುದು, ವಚನ ಹೇಳುವುದು. ಈಗ ತಾನೇ ಅಧ್ಯಕ್ಷರು ಹೇಳಿಲಿಲ್ಲವೇ ಇವೆಲ್ಲಾ ಸುಮ್ಮನೆ ಬಿಡಿ ಎಂದು ಹೇಳಲಿಲ್ಲವೇ? ಆದ್ದರಿಂದ ವಚನ ಎನ್ನುವುದು ಏನೋ ಒಂದು ರೀತಿಯಲ್ಲಿ ವಿಚಿತ್ರವಾದ ಪ್ರಸಂಗ. ಯಾರು ವಚನಕ್ಕೆ ಬದ್ದರಾಗಿಲ್ಲ, ಬಸವಣ್ಣನವರ ತತ್ವಕ್ಕೆ ಬದ್ದರಾಗಿಲ್ಲ ಬರೀ ಮಾತು, ಕತೆ, ವಿಚಾರ, ಇಷ್ಟೇ ಹೊರತು ಇದೆಲ್ಲ ಸತ್ಯಕ್ಕೆ ದೂರವಾದ ಮಾತು.

ಶ್ರೀ ಎಸ್.ಎಸ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, ಪುರಂದರ ದಾಸರು ಬಹಳ ಚೆನ್ನಾಗಿ ಹೇಳಿದ್ದಾರೆ. ಅದೇನೆಂದರೆ, "ದುಗ್ಗಾಣಿ ಬಲು ಕೆಟ್ಟದು" ಇವರಿಗೆಲ್ಲಾ ಇದನ್ನು ಕೇಳುವುದಕ್ಕೆ ಮನಸ್ಸು ಇಲ್ಲ. ಕೊನೆಗೆ ನಾಲ್ಕು ಮಾತುಗಳನ್ನಾದರೂ ಕೇಳಿ. ವಿಧಾನ ಸಭೆ ಮತ್ತು ಲೋಕಸಭೆಗಳೆಲ್ಲಾ ಇವತ್ತಿನ ದಿವಸ ಅನುಭವ ಮಂಟಪವಾಗಬೇಕಾಗಿತ್ತು. ಬಸವಣ್ಣನವರು ಕಟ್ಟಿದಂಥ ಅನುಭವ ಮಂಟಪವಾಗಿದ್ದರೆ ಭ್ರಷ್ಟಾಚಾರವೆಲ್ಲವೂ ಸ್ವಚ್ಛವಾಗಿ, ನಾವು ಮಾಡಿರುವ ಪಂಚವಾರ್ಷಿಕ ಯೋಜನೆಗಳಿಂದ ಇವತ್ತಿನ ದಿವಸ ಎಲ್ಲವೂ ಉದ್ಧಾರವಾಗುತ್ತಿತ್ತು. ಮಾನ್ಯ ಉದಾಸಿಯರೆ, ಒಂದು ಊರಿಗೆ 17 ರಿಂದ 20

ಲಕ್ಷ ರೂಪಾಯಿ ಬರುತ್ತದೆ. ಈ ಎಲ್ಲಾ ಹಣವನ್ನು ಪ್ರಾಮಾಣಿಕವಾಗಿ ನೆಲಕ್ಕೆ ಹಾಕಿದರೆ ಅಮೇರಿಕ ದೇಶವನ್ನು ನಾವು ಹಿಂದಕ್ಕೆ ಹಾಕುತ್ತೇವೆ. ಆ ರೀತಿಯಾದಂಥ ಒಂದು ಶ್ರೀಮಂತ ರಾಷ್ಟ್ರ ನಮ್ಮದು. ದುರ್ದೈವದಿಂದ ಈ ರಾಷ್ಟ್ರ ಭ್ರಷ್ಟಾಚಾರದಿಂದ ಇವತ್ತಿನ ದಿವಸ ಹಾಳಾಗಿ ಹೋಗಿದೆ. ಅನುಭವ ಮಂಟಪವಾಗಬೇಕಾಗಿರತಕ್ಕಂಥ ವಿಧಾನ ಸಭೆ ಮತ್ತು ಲೋಕಸಭೆಗಳು ಇವತ್ತಿನ ದಿವಸ ಏನಾಗಿವೆ ಎಂದು ಇಲ್ಲಿ ಹೇಳಿದರೆ ಸಿಟ್ಟಾಗಿ ಎಲ್ಲರೂ ನನ್ನನ್ನು ಹೊಡೆಯುವುದಕ್ಕೆ ಬರಬಹುದು. ಭ್ರಷ್ಟಾಚಾರದ ತಾಣವಾಗಿದೆ ಎಂದು ಇವತ್ತಿನ ದಿವಸ ಹಳ್ಳಿ ಜನ ಮಾತನಾಡುತ್ತಾರೆ. ಪಂಚಾಯತಿಯವರಿಗೆ ಹೇಳುವುದಕ್ಕೆ ಬರುತ್ತೀರಾ, ನೀವೇನು ಕಡಿಮೆ ಇದ್ದೀರೆಂದು ಮೊನ್ನೆ ದಿವಸ ನನಗೆ ಕೇಳಿದರು. ಇದು ನಮ್ಮ ಪರಿಸ್ಥಿತಿಯಾಗಿದೆ. ಒಬ್ಬರಿಗೊಬ್ಬರ ಮೇಳಾಟ ಇವತ್ತಿನ ದಿವಸ ನಡೆಯುತ್ತಿದೆ.

ಅಧ್ಯಕ್ಷರು : ನಮ್ಮಗಳನ್ನೆಲ್ಲಾ ನೋಡಿ ಅವರು ಅನುಸರಿಸುತ್ತಿದ್ದಾರೆಷ್ಟೆ.

ಶ್ರೀ ಎಸ್.ಎಸ್.ಪಾಟೀಲ್ : ಪುರಂದರದಾಸರ ಪದವನ್ನು ಹೇಳುವುದಕ್ಕೆ ಬಯಸುತ್ತೇನೆ.

ದುಗ್ಗಾಣಿ ಬಲು ಕೆಟ್ಟದಣ್ಣ,
ದುಗ್ಗಾಣಿ ಬಲು ಕೆಟ್ಟದು,
ದುಗ್ಗಾಣಿ ಎಂಬುದು ದುರ್ಜನರ ಸಂಗ
ದುಗ್ಗಾಣಿ ಬಲು ಕೆಟ್ಟದಣ್ಣ,
ದುಗ್ಗಾಣಿ ಬಲು ಕೆಟ್ಟದಣ್ಣ,

ಆಚಾರ ಹೇಳೊದು ದುಗ್ಗಾಣಿ, ಬಹು
ನೀಚರ ಮಾಡೋದು ದುಗ್ಗಾಣಿ
ನಾಚಿಕೆಯಿಲ್ಲದೆ ಮನೆ ಮನೆ ತಿರುಗಿಸಿ
ಛೀ ಛೀ ಎನಿಸೋದು ದುಗ್ಗಾಣಿ I ಅಣ್ಣ
ದುಗ್ಗಾಣಿ ಬಲು ಕೆಟ್ಟದಣ್ಣ

ನೆಂಟತನ ಹೇಳೋದು ದುಗ್ಗಾಣಿ, ಬಹು
ನೆಂಟರನೊಲಿಸೋದು ದುಗ್ಗಾಣಿ
ಒಂಟೆ ಹಾಂಗೆ ಮೋರೆ ಮೇಲಕ್ಕೆ ಸೆಳಕೊಂಡು
ಕುಂಟನೆನಿಸುವುದು ದುಗ್ಗಾಣಿ I ಅಣ್ಣ
ದುಗ್ಗಾಣಿ ಬಲು ಕೆಟ್ಟದಣ್ಣ

ಮಾನವಾಗಿರಿಸೋದು ದುಗ್ಗಾಣಿ, ಬಹು

ಮಾನ ಹಸಗೆಡಿಸೋದು ದುಗ್ಗಾಣಿ
ಮಾನನಿಧಿ ಶ್ರೀ ಪುರಂದರವಿಠಲನ
ಕಾಣಿಸದಿರುವುದು ದುಗ್ಗಾಣಿ । ಅಣ್ಣ
ದುಗ್ಗಾಣಿ ಬಲು ಕೆಟ್ಟದಣ್ಣ

ಶರಣೆ ಆಯ್ದಕ್ಕಿಲಕ್ಕಮ್ಮ ಹೇಳಿರತಕ್ಕಂತದನ್ನು ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇವೆಲ್ಲವನ್ನು ನಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ಹೆಣ್ಣುಮಕ್ಕಳಿಂದ ನಾವು ಏನಾದರೂ ಕಲಿಯಬೇಕಾಗಿರುತ್ತದೆ. ಬಹುಶಃ ಈ ಭ್ರಷ್ಟಾಚಾರ ಹೋಗಬೇಕಾದರೆ ನಮ್ಮೆಲ್ಲರ ಹೆಂಡತಿಯರು, ಈ ರಾಜ್ಯದಲ್ಲಿ ಮತ್ತು ರಾಷ್ಟ್ರದಲ್ಲಿರತಕ್ಕಂಥ ಹೆಣ್ಣುಮಕ್ಕಳು ಆಯ್ದಕ್ಕಿ ಲಕ್ಕಮ್ಮನಾದರೆ ಖಂಡಿತವಾಗಿ ನಮ್ಮಲ್ಲಿ ಭ್ರಷ್ಟಾಚಾರ ಹೀಗುತ್ತದೆ. ಇಲ್ಲದಿದ್ದರೆ ಅಲ್ಲಿಯವರೆಗೆ ಇದು ಹೋಗುವುದಿಲ್ಲ. ಇದೆಲ್ಲಾ ನನಗೆ ಖಾತ್ರಿಯಾಗಿದೆ.

ಆಸೆಯೆಂಬುದು ಅರಸಿಂಗಲ್ಲದೆ,
ಶಿವಭಕ್ತರಿಗುಂಟೆ ಅಯ್ಯಾ?
ರೋಷವೆಂಬುದು ಯಮದೂತರಿಗಲ್ಲದೆ,
ಅಜಾತರಿಗುಂಟೆ ಅಯ್ಯಾ?
ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ
ಮಾರಯ್ಯಪ್ರಿಯ ಅಮಲೇಶ್ವರಲಿಂಗಕ್ಕೆ ದೂರ ಮಾರಯ್ಯ.

ಆಯ್ದಕ್ಕಿ ಲಕ್ಕಮ್ಮ ಮತ್ತು ಮಾರಯ್ಯನ ಮನೆಗೆ ಶರಣರು ಬರುತ್ತಾರೆ. ಅವರ ಕೆಲಸ ಏನೆಂದರೆ, ಶರಣರ ಮನೆಯಲ್ಲಿ ಬಿದ್ದಂಥ ಅಕ್ಕಿಯನ್ನು ಆಯ್ದುಕೊಂಡು ಬಂದು ತಮಗೆ ಬೇಕಾದಷ್ಟು ಅಕ್ಕಿಯನ್ನು ಮಾತ್ರ ತರಬೇಕು. ಒಂದು ದಿವಸ ಏನಾಗುತ್ತದೆಂದರೆ, ಬಸವಣ್ಣನವರು ಇದನ್ನು ನೋಡಿ ಬೇಕೆಂದು ಒಂದು ದಿವಸ ಹೆಚ್ಚಿಗೆ ಅಕ್ಕಿಯನ್ನು ಹಾಕಿರುತ್ತಾರೆ. ಆಗ ಈ ಮಾರಯ್ಯ ಆಸೆಬಿದ್ದು ಪೂರ್ತಿ ಅಕ್ಕಿಯನ್ನು ಮನೆಗೆ ತಂದುಬಿಡುತ್ತಾನೆ. ಆಗ ಆತನ ಹೆಂಡತಿಯಾದ ಲಕ್ಕಮ್ಮ ಏನು ಹೇಳುತ್ತಾಳೆಂದರೆ,

ಕಾಯಕ ನಿಂದಿತ್ತು ಹೋಗಯ್ಯಾ ಎನ್ನಾಳ್ದನೆ.
ಭಾವಶುದ್ಧವಾಗಿ ಮಹಾಶರಣರ ತಪ್ಪಲ ಅಕ್ಕಿಯ ತಂದು
ನಿಶ್ಚೈಸಿ ಮಾಡಬೇಕು ಮಾರಯ್ಯಪ್ರಿಯ ಅಮಲೇಶ್ವರಲಿಂಗಕ್ಕೆ
ಬೇಗ ಹೋಗು ಚೆಲ್ಲಿಬಾ ಎಂದು ಆತನನ್ನು ಕಳುಹಿಸುತ್ತಾಳೆ.

ಆದರೆ, ಇವತ್ತು ಏನಾಗಿದೆ, ಎಂದರೆ, ಅಯ್ಯೊ ಅವನು ಮೊನ್ನೆ ದಿವಸ ಈ ರೀತಿಯಾಗಿದ್ದ, ಈಗ ಅವನು ಹೇಗಾಗಿದ್ದಾನೆಂದು ಮತ್ತು ಅವರ ಮನೆಯಲ್ಲಿ ಇಷ್ಟೆಲ್ಲಾ ಇದೆ ನೀನು ಏನು ಮಾಡಿಕೊಂಡೆ ಎಂದು ಹೆಂಡತಿ ಬೈಯುತ್ತಾರೆ.

ಆಯ್ದ ಅಕ್ಕಿ ಲಕ್ಕಮ್ಮ ಶರಣ ಶರಣಿಯರ ಪ್ರಕಾರ ನಾವು ನಡೆದುಕೊಂಡರೆ ಬಹುಶಃ...

ಶ್ರೀ ಬಸವರಾಜ್ ಎಸ್.ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ಇವರೇನು ಬೇಡಿಕೆಯ ಮೇಲೆ ಮಾತನಾಡುತ್ತಿದ್ದಾರೆಯೇ? ಇದು ಶರಣ ಸಾಹಿತ್ಯ ಸಮ್ಮೇಳನ ಆಯಿತು.

ಶ್ರೀ ಎಸ್.ಎಸ್.ಪಾಟೀಲ್ :ಡಿಮ್ಯಾಂಡ್ ಬಗ್ಗೆ ನಾನು ಮಾತನಾಡುತ್ತಿರುವುದು. ನಿಮ್ಮ ಡಿಮ್ಯಾಂಡ್ ಬಗ್ಗೆಯೇ ಹೇಳುತ್ತಿದ್ದೇನೆ. ಅನುಭವ ಮಂಟಪದ ಬಗ್ಗೆ ಚರ್ಚೆಯಿದು.

ಅಧ್ಯಕ್ಷರು : ಬಸವಣ್ಣನವರು ಆಗಿನ ಅನುಭವ ಮಂಟಪದಲ್ಲಿ ಆಡಳಿತದ ಬಗ್ಗೆಯ ಅಭಿಪ್ರಾಯವನ್ನು ಬರೆದು ಇಟ್ಟಿದ್ದಾರೆ. ಅದನ್ನು ಅವರು ಹೇಳುತ್ತಿದ್ದಾರೆ.

ಶ್ರೀ ಎಸ್.ಎಸ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, ಬಸವಣ್ಣನವರು ಕಟ್ಟಿರುವ ಅನುಭವ ಮಂಟಪದ ಮಾದರಿಯಲ್ಲಿಯೇ ಇದನ್ನು ಕಟ್ಟಿರುವುದು. ಅಲ್ಲಿ ಕೂಡ ಪ್ರಜಾಪ್ರಭುತ್ವ ವ್ಯವಸ್ಥೆ ಇತ್ತು. ಇಲ್ಲಿಯೂ ಕೂಡ ಪ್ರಜಾಪ್ರಭುತ್ವ ವ್ಯವಸ್ಥೆ ಇದೆ. ಮತ್ತೆ ಅಲ್ಲಿ ಕೂಡ ಹೆಣ್ಣು ಮಕ್ಕಳಿಗೆ ಮತ್ತು ಇತರರಿಗೆಲ್ಲರಿಗೂ ಸ್ವಾತಂತ್ರ್ಯ ಕೊಟ್ಟಿದ್ದರು. ಆದರೆ, ದುರ್ದೈವದಿಂದ ಇವತ್ತು ನಮ್ಮ ರಾಯರೆಡ್ಡಿಯವರಿಗೆ ಅದು ಬಹಳ ನೋವಾಗುತ್ತಿದೆ.

ಶ್ರೀ ಬಸವರಾಜ್ ಎಸ್.ರಾಯರೆಡ್ಡಿ : ಹಾಗಲ್ಲ. ನಾನು ಹೇಳಿರುವುದೇನೆಂದರೆ, ವಿಧಾನ ಸಭೆಯಲ್ಲಿ ಬೇಡಿಕ ಬಗ್ಗೆ. ಮಾತನಾಡಿ. ಆದರೆ ನೀವು ಮಾತನಾಡುತ್ತಿರುವುದು ಶರಣ ಸಾಹಿತ್ಯ ಸಮ್ಮೇಳನದಲ್ಲಿ ಮಾತನಾಡುವಂತೆ ಇದೆ ಎಂದು ಹೇಳಿದೆ.

ಶ್ರೀ ಎಸ್.ಎಸ್.ಪಾಟೀಲ್ : ಇದೂ ಕೂಡ ಡಿಮ್ಯಾಂಡ್ ಬಗ್ಗೆಯೇ ಇದೆ. ಭ್ರಷ್ಟಾಚಾರ ಹೋದರೆ ನಿಮ್ಮೆಲ್ಲಾ ಡಿಮ್ಯಾಂಡ್‌ಗೆ ಬೆಂಕಿ ಹಚ್ಚಬೇಕಾಗುತ್ತದೆ. 50 ವರ್ಷದಿಂದ ಡಿಮ್ಯಾಂಡ್ ಎಂದು ಹಣ ಕೊಡುತ್ತಾ ಬರಿತ್ತಿದ್ದೇವೆ. ಆದರೆ, ಈ ಹಣವನ್ನು ತೆಗೆದುಕೊಂಡು ಹೋಗಿ ಎಲ್ಲರೂ ತಿಂದು ಹಾಕುತ್ತಿದ್ದಾರೆ. ಇವತ್ತು ನಾನು ಪ್ರಾಮಾಣಿಕವಾಗಿ ಹೇಳುವುದೇನೆಂದರೆ, 1 ರೂಪಾಯಿಯನ್ನು ಇವತ್ತು ನಾವು ಯೋಜನೆಯಲ್ಲಿ ಕೊಟ್ಟರೆ ನೆಲಕ್ಕೆ ಬೀಳುವುದು 20 ರಿಂದ 50 ಪೈಸೆ ಅಷ್ಟೆ, 50 ಪೈಸೆ ಬಿದ್ದರೆ ಬಹಳ ಚೆನ್ನಾಗಿ ಕೆಲಸ ಆಗಿರುತ್ತದೆ. ಆದರೆ, ಇವತ್ತಿನ ದಿವಸ ಕೇವಲ ಪೈಸೆ ಮಾತ್ರ ವೆಚ್ಚವಾಗುತ್ತಿದೆ.

ಅಧ್ಯಕ್ಷರು : ನೆಲಕ್ಕೆ ಎಷ್ಟು ಬೀಳುತ್ತದೆಂದು ಮಾನ್ಯ ರಾಯರೆಡ್ಡಿಯವರು ಆನಂತರ ಹೇಳುತ್ತಾರೆ ನೋಡೋಣ.

ಶ್ರೀ ಎಸ್.ಎಸ್.ಪಾಟೀಲ್ : ಇವತ್ತಿನ ದಿವಸ ಶರಣ ನಡೆದಂಥ ದಾರಿಯಲ್ಲಿ ನಡೆಯುವಂಥ ಪ್ರಯತ್ನವನ್ನು ನಾವು ಮಾಡಬೇಕು. ಭ್ರಷ್ಟಾಚಾರ ರಹಿತ ಕೆಲಸ ಮಾಡುವುದಕ್ಕೆ ನಾವೆಲ್ಲರೂ ತಯಾರಾಗಬೇಕಾಗುತ್ತದೆ. ಈ ಒಂದು

ಹಿನ್ನಲೆಯಲ್ಲಿ ಮಾನ್ಯ ರಾಯರೆಡ್ಡಿಯವರು ಹೇಳಿದ ಹಾಗೆ ಬಜೆಟ್ ಮೇಲೆ ಮಾತನಾಡತಕ್ಕಂಥ ವಿಷಯ ಇದೂ ಕೂಡ ಆಗಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಎಲ್ಲಿಯವರೆಗೆ ಪ್ರಾಮಾಣಿಕತೆ ಬೇರೂರುವುದಿಲ್ಲವೋ ಅಲ್ಲಿಯವರೆಗೆ ನಿಮ್ಮೆಲ್ಲಾ ಬಜೆಟ್ ಸುಳ್ಳಾಗುತ್ತದೆ. ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾಯಿತು, ಆದರೂ ಕೂಡ ಇವತ್ತಿನವರೆಗೆ ಅಸ್ಪೃಶ್ಯತೆಯ ಆಚರಣೆ ನಿಂತಿದೆಯೇ? ನಮ್ಮ ಹಳ್ಳಿಯಲ್ಲಿ ಇವತ್ತೂ ಕೂಡ ಈ ಜನರನ್ನು ದೇವಸ್ಥಾನದಲ್ಲಿ ಬಿಡುತ್ತಿಲ್ಲ. ಮಂತ್ರಿಗಳನ್ನು ಕೇಳಿದಕ್ಕೆ ಇದರ ಬಗ್ಗೆ ಕಾಯಿದೆ ಇದೆ ಎಂದು ಹೇಳುತ್ತಾರೆ. ನಿಮ್ಮ ಊರಿನಲ್ಲಿ ಹರಿಜನ ಹೆಣ್ಣುಮಕ್ಕಳನ್ನು ಗುಡಿಯಲ್ಲಿ ಬಿಡುತ್ತಾರೆಂಬುದನ್ನು ನೋಡುವುದಕ್ಕೆ ಹೋಗೋಣ ಬನ್ನಿ. ಯಾರಾದರು ದೊಡ್ಡವರು ಮತ್ತು ನೌಕರಿಯಲ್ಲಿದ್ದಂಥವರು ಮತ್ತು ಅದಿಕಾರಿಗಳನ್ನು ಬಿಡಬಹುದು.

ಶ್ರೀ ಬಿ.ನಾಗರಾಜ ಶೆಟ್ಟಿ : ಎಲ್ಲರನ್ನು ಎಲ್ಲಾ ಕಡೆ ಬಿಡುತ್ತಾರೆ. ಎಲ್ಲಿ ಬಿಡುವುದಿಲ್ಲವೆಂದು ಮಾಹಿತಿ ಕೊಟ್ಟರೆ ಖಂಡಿತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್.ಎಸ್.ಪಾಟೀಲ್ : ಬಿಡಬೇಕೆಂದು ಕಾಯಿದೆ ಇದೆ, ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ, ನಿಮ್ಮ ಮತ್ತು ನಮ್ಮ ಊರಿನಲ್ಲಿ ಕೂಡ ಬಿಡುವುದಿಲ್ಲ. ಸುಮ್ಮನೆ ಇದೆಲ್ಲಾ ಹೇಳುವ ಮಾತಷ್ಟೆ. ಬಸವಣ್ಣನ ತತ್ವಗಳನ್ನು ನೀವು ಆಚರಣೆಗೆ ತರದಿದ್ದರೆ ಅಸ್ಪೃಶ್ಯ ಆಚರಣೆ ಹೋಗುವ ಪ್ರಶ್ನೆಯೇ ಇಲ್ಲ. ಇದನ್ನು ಹೋಗಲಾಡಿಸಿದರೆ ಸಾಕು ಯಾವುದೇ ಬಜೆಟ್‌ನಲ್ಲಿ ಅವರಿಗೆ ಹಣ ಬೇಕಾಗಿಲ್ಲ. ಅವರು ದುಡಿದುಕೊಂಡು ತಿನ್ನುತ್ತಾರೆ. ಮೊದಲು ಇದನ್ನು ಬಾವಿ ಮತ್ತು ಬೋರ್‌ನ್ನು ತೋಡಿಸಿ ಕೊಟ್ಟೆವು. ಇದಕ್ಕೆ ನಾವು ಏಕೆ ಒಪ್ಪಿದೇವೆಂದರೆ ನಾನು ಹಿಂದೆ ಗೌಡಿಕೆ ಮಾಡುತ್ತಿದ್ದೆ. ನಾನು ಆಗ ತಾನೆ ಶಾಲೆ ಬಿಟ್ಟಿದ್ದೆ. ಆಗ ನಮ್ಮ ದೃಷ್ಟಿಕೋನ ಬೇರೆ ಇತ್ತು. ಒಂದು ಬಾವಿಯ ಹತ್ತಿರ ನೀರಿಗೋಸ್ಕರ ಈ ಜನಾಂಗದವರು ಸಾಲಾಗಿ ಬಿಂದಿಗೆಗಳನ್ನು ಇಟ್ಟುಕೊಂಡು ನಿಂತುಕೊಳ್ಳುತ್ತಿದ್ದರು. ಇತರೇ ಜನಾಂಗದವರು ಆ ಬಾವಿಯಿಂದ ನೀರನ್ನು ತೆಗೆದುಕೊಂಡು ಹೋಗುವಾಗ ಇವರಿಗೆ ನೀರನ್ನು ಸೇದಿ ಹಾಕುತ್ತಿದ್ದರು. ಒಂದು ವೇಳೆ ಯಾರದರೂ ನೀರನ್ನು ಹಾಕದೇ ಇದ್ದಾಗ ಸಂಜೆಯವರೆಗೂ ಅಲ್ಲಿಯೇ ಇವರು ನಿಂತುಕೊಳ್ಳುತ್ತಿದ್ದರು. ನಾನು ಗೌಡಿಕೆಗೆ ಹೋದಾಗ ಈ ಪರಿಸ್ಥಿತಿಯನ್ನು ನೋಡಿದೆ. ಒಂದು ದಿವಸ ಒಬ್ಬ ಹೆಣ್ಣುಮಗಳಿಗೆ ಬಡಿದು, ಚೆಂಡು ಹಿಡಿದು ಬಾವಿಯಿಂದ ನೀರು ಸೇದಿಕೋ ಎಂದು ಹೇಳಿದರೂ ಅವಳು ಬಾವುಕಟ್ಟೆ ಹತ್ತಲಿಲ್ಲ. ಏಕೆಂದರೆ, ಅವಳಿಗೆ ಅಂಜಿಕೆ ಇತ್ತು. ಕೊನೆಗೆ ಅವಳನ್ನು ಬಾವಿಕಟ್ಟೆಯ ಮೇಲೆ ಹತ್ತಿಸಿ ನೀರನ್ನು ಸೇದಿಸಿದೆ. ಈ ರೀತಿಯಾಗಿ ಎಲ್ಲರಿಗೂ ಅವರ ಕೈಯೊಂದಲೇ ನೀರನ್ನು ಸೇದಿಸಿ ಕಳುಹಿಸಿದೆ. ಊರಿನ ಕೆಲವು ಜನರು ಇವನು ಯಾವ ಗೌಡನೆಂದು ನಮ್ಮ ಅಣ್ಣನ ಹತ್ತಿರ ಬಂದು ಇಡೀ ಊರನ್ನು

ಮುಡಚಟ್ಟು ಮಾಡಿಬಿಟ್ಟ ಎಂದು ಚಾಡಿ ಹೇಳಿದರು, ಆಗಲಿ ಹೋಗಿ ಎಂದು ನಾನು ಹೇಳಿದೆ. ಕೊನೆಯಲ್ಲಿ ಕೆಟ್ಟ ನೀಚ ಜನರು ಏನು ಮಾಡಿದರೆಂದರೆ, ಆ ಬಾವಿಯಲ್ಲಿ ನಾಯಿಯನ್ನು ಹಾಕಿದರು. ಇವತ್ತೂ ಕೂಡ ಅಸ್ಪೃಶ್ಯತೆ ಆಚರಣೆ ನಡೆಯುತ್ತಿದೆ. ಇದನ್ನು ಮೊದಲು ತಡೆಯಿರಿ. ಇವತ್ತಿನ ದಿವಸ ಹರಿಜನರಿಗೆ ನೀವು ಬೇರೆ ಏನು ಮಾಡುವುದು ಬೇಕಾಗಿಲ್ಲ. ಅಸ್ಪೃಶ್ಯತೆ ಆಚರಣೆಯನ್ನು ಮೊದಲು ತೆಗೆದು ನಮ್ಮಂತೆ ಸಮಾನರೆಂದು ಕಾಣಿ ಎಂದು ಬಸವಣ್ಣ ಹೇಳಿದ್ದು ಅದನ್ನೇ. ಆ ಕಾರಣದಿಂದ ಇದನ್ನು ನಾನು ಹೇಳುತ್ತಿದ್ದೇನೆ. ಮಾನ್ಯ ರಾಯರೆಡ್ಡಿಯವರೆ, ಇವೆಲ್ಲವೂ ಬಸವ ತತ್ವದಲ್ಲಿ ಅಡಕವಾಗಿದೆ. ಈ ತತ್ವಗಳನ್ನು ನಾವು ನಿಜವಾಗಿ ಆಚರಣೆಗೆ ತಂದರೆ, ಇದೆಲ್ಲದಕ್ಕೂ ಮತ್ತು ಹೆಣ್ಣುಮಕ್ಕಳಿಗೆ ಸಮಾನತೆ ಬರುತ್ತದೆ. ಅದೆಲ್ಲಾ ಹೇಳಿಕೊಳ್ಳುತ್ತಾ ಹೋದರೆ ಬಹಳ ಸಮಯ ಬೇಕಾಗುತ್ತದೆ. ಮಹಿಳೆಯರ ಮೇಲೆ ಆಗುತ್ತಿರುವ ದೌರ್ಜನ್ಯದ ಬಗ್ಗೆ ಹೇಳುವುದಾದರೆ, ಇದು ವರ್ಷೇ ವರ್ಷೇಜಾಸ್ತಿಯಾಗುತ್ತಾ ಹೋಗುತ್ತಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯವರು ಮಾಡತಕ್ಕಂಥ ಕೆಲಸವೇನು ಎಂದು ಕೇಳುವುದಕ್ಕೆ ಬಯಸುತ್ತೇನೆ. ಕೇವಲ 400 ರೂಪಾಯಿಗಳನ್ನು ಅವರಿಗೆ ಕೊಟ್ಟರೆ ಆಗುವುದಿಲ್ಲ. ಮಹಿಳೆಯರ ಮೇಲೆ ಆಗುತ್ತಿರುವ ದೌರ್ಜನ್ಯದ ಬಗ್ಗೆ ಅಂಕಿ-ಅಂಶಗಳು ನನಗೆ ಕೊಟ್ಟಿದ್ದಾರೆ. ಇದರ ಬಗ್ಗೆ ಹೇಳುತ್ತಾ ಹೋದರೆ ಬಹಳ ಸಮಯ ಆಗುತ್ತದೆ. ಆದರೆ, ಇದು ವರ್ಷೇ ವರ್ಷೇ ಜಾಸ್ತಿಯಾಗುತ್ತಾ ಹೋಗುತ್ತಿದೆ. ಮಾನ್ಯ ಅಶೋಕ್‌ರವರು ಇಲ್ಲಿಲ್ಲ ಅವರು ಎಲ್ಲರನ್ನು ತೋರಿಸುವುದಕ್ಕೆ ಆರೋಗ್ಯ ಶಿಬಿರಕ್ಕೆ ಹೋಗಿದ್ದಾರೆಂದು ಕಾಣುತ್ತದೆ. ನಮ್ಮೆಲ್ಲರ ಮೇಲೆ ವಿಶ್ವಾಸ ಇಟ್ಟು ಅವರು ಮಾಡಿದ್ದಾರೆ. ಆದರೆ, ಎಲ್ಲಾ ಮಂತ್ರಿಗಳಿಗೆ ನಾನು ಹೇಳುವುದೇನೆಂದರೆ, ನಾಳೆ ದಿವಸ ನಾವು ಹಳ್ಳಿಗೆ ಹೋದರೆ ಜನ ನಮ್ಮನ್ನು ಬೈಯುತ್ತಾರೆ. ನೀವು ಮಾಡಿರುವುದು ಸರಿ, ನಾನು ಇಲ್ಲವೆಂದು ಹೇಳೂವುದಿಲ್ಲ. ಏಕೆಂದರೆ, ನಾವೆಲ್ಲಾ ತೋರಿಸಿಕೊಳ್ಳುತ್ತೇವೆ. ಶಾಸಕರಿಗೆ ಎಲ್ಲಾ ರೀತಿಯ ಚಿಕಿತ್ಸೆಯ ವ್ಯವಸ್ಥೆಯನ್ನು ಅಲ್ಲಿಟ್ಟಿದ್ದರೆಂದು ಮತ್ತು ಎಲ್ಲಾ ಶಾಸಕರು ತೋರಿಸಿದರಂತೆ, ನಮಗೂ ತೋರಿಸಿ ಎಂದು ನಾವು ಊರಿಗೆ ಹೋದಾಗ ಕೇಳುತ್ತಾರೆ. ಏಕೆಂದರೆ, ಹಳ್ಳಿಯಲ್ಲಿ ಡಾಕ್ಟರ್ ಇಲ್ಲ. ಆದ್ದರಿಂದ, ಅವರಿಗೆ ಈ ಯೋಜನೆಯನ್ನು ತರತಕ್ಕಂಥ ಪ್ರಯತ್ನವನ್ನು ನಾವು ಮಾಡಬೇಕೇ ವಿನಃ, ಇದನ್ನು ಮಾಡಿರುವುದು ತಪ್ಪೆಂದು ಮಾಡಿಸುತ್ತೀರಿ. ಅದು ಏಕೆ ಬೇಕಾಗಿತ್ತೆಂದು ಅವರು ನಮ್ಮನ್ನು ಕೇಳಿದರೆ ಏನು ಹೇಳುವುದು? ನಮಗೆಲ್ಲಾ ಪುಕಟ್ಟೆ ಇದೆ. ನಾವು ಹೋಗಿ ತೋರಿಸಿಕೊಂಡು ಬಂದು ಬಿಲ್ ಕೊಟ್ಟರೆ ಖರ್ಚಾಗಿರುವ ಹಣವನ್ನು ಅಧ್ಯಕ್ಷರು ನಮಗೆ ಕೊಡುತ್ತಾರೆ. ಆದರೆ, ಇವತ್ತಿನ ದಿವಸ ಹಳ್ಳಿ ಜನರಿಗೆ ಡಾಕ್ಟರ್ ಇಲ್ಲ. ಮಾನ್ಯ ಅಶೋಕ್ ಇದ್ದರೆ ಒಂದು ವಿಷಯವನ್ನು ಅವರಿಗೆ ಹೇಳಬೇಕೆಂದು ಇದ್ದೆ. ಅದೇನೆಂದರೆ, ಕೊನೇ ಪಕ್ಷ ಎಲ್ಲಾ ಕಡೆ

ಹೋಮಿಯೊಪತಿ ಮತ್ತು ಆಯುರ್ವೇದಿಕ್ ಆಸ್ಪತ್ರೆಗಳನ್ನು ಪ್ರಾರಂಭ ಮಾಡಿ. ಏಕೆಂದರೆ, ಇವತ್ತಿನ ದಿವಸ ಒಳ್ಳೇಯ MBBS ಡಾಕ್ಟರ್ ಬರುತ್ತಿಲ್ಲ. ಮತ್ತೆ ಹಳ್ಳಿಗಳಲ್ಲಿ ನರ್ಸ್ ಕೂಡ ಇಲ್ಲ. ಈ ಕಾರಣಕ್ಕೆ ಅದನ್ನೆಲ್ಲಾ ಮಾಡಬೇಕೆಂದು ನಾನು ಹೇಳುತ್ತೇನೆ. ಇನ್ನು ಸಾರಿಗೆ ಚೆಲುರಾಯ ಸ್ವಾಮಿಯವರ ಇಲಾಖೆಯ ಬಗ್ಗೆ ಹೇಳುವುದಾದರೆ, ನಾನು ಎಲ್ಲಾ ಸಂಸ್ಥೆಗಳ ಮಾಹಿತಿಯನ್ನು ತರಿಸಿಕೊಂಡೆ, ನಮ್ಮ ಕೆಎಸ್ಆರ್‌ಟಿಸಿ ಕೂಡ ಲಾಭದಲ್ಲಿದೆ. ಅವರು ನಿಜವಾಗಿ ಕೆಲಸ ಮಾಡಿದರೆ ನಾನು ಇಲ್ಲವೆಂದು ಹೇಳುವುದಿಲ್ಲ, ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಅಲ್ಲಿ ಕೇಂದ್ರ ರೈಲ್ವೆ ಮಂತ್ರಿಗಳಾದ ಲಾಲು ಪ್ರಸಾದ್ ಯಾದವ್ ಅವರು, ರೈಲ್ವೆ ಖಾತೆ ಮುಳುಗಿ ಹೋಗುತ್ತದೆಂದು ತಿಳಿದುಕೊಂಡಿದ್ದೆವು, ಏನೇನೊ ಮಾತನಾಡಿಕೊಂಡೆವು, ಅವರು ಕೆಲಸ ಮಾಡಿದರು, ಹಾಗೆ ಇವರೂ ಕೂಡ ಕೆಲಸ ಮಾಡಿದ್ದಾರೆ, ಇಲ್ಲವೆಂದು ನಾನು ಹೇಳುವುದಿಲ್ಲ, ಲಾಭದಲ್ಲಿ ತರುವಂಥ ಪ್ರಯತ್ನವನ್ನು ಮಾಡಿದ್ದಾರೆ, ಮಂತ್ರಿಗಳು ಒಳ್ಳೆಯದನ್ನು ಮಾಡಿದ್ದನ್ನು ಹೊಗಳಲೇಬೇಕಲ್ಲ, ಎಲ್ಲವನ್ನು ಹೇಳುವುದಕ್ಕೆ ಬರುವುದಿಲ್ಲ. ನಿಜವಾಗಿ ಹೇಳುತ್ತೇನೆ, ಇಷ್ಟೊಂದು ಹೈಸ್ಕೂಲ್, ಕಾಲೇಜುಗಳನ್ನು ಇತಿಹಾಸದಲ್ಲಿ ಯಾವಾಗಲೂ ಕೊಟ್ಟಿರಲಿಲ್ಲ. ನಾವು ಹಿಂದೆ ಅಧಿಕಾರದಲ್ಲಿದ್ದರೂ ಕೊಡುವುದಕ್ಕಾಗಲಿಲ್ಲ. ಕೊಟ್ಟಿರುವುದಕ್ಕೆ ನಾನು ಸಂತೋಷಪಡುತ್ತೇನೆ. ಆದರೆ, ಯಾರಿಗೊ 20 ಕೊಡುವುದು, ಯಾರಿಗೋ ಕೊಡುವುದೇ ಇಲ್ಲ, ಇದು ಆಗುವುದು ಬೇಡ. ಇದೆಲ್ಲವನ್ನು ಸರಿ ಮಾಡಿ. ಬಹಳ ಕ್ರಾಂತಿ ಮಾಡಿದ್ದೀರಿ, ಅದರಲ್ಲೂ ಡಿಗ್ರಿ ಕಾಲೇಜನ್ನು ಹಳ್ಳಿಗೆ ಕೊಟ್ಟಿದ್ದೀರಿ, ಬಹಳ ಸಂತೋಷ. ಹಳ್ಳಿ ಮಕ್ಕಳು ಎಲ್ಲಿ ಹೋಗಿ ಓದಬೇಕು? ಸಿಟಿಗೆ ಬಂದು ಓದಲು ಎಲ್ಲಿ ಆಗುತ್ತದೆ. ಇವತ್ತು ಈ ಶಿಕ್ಷಣ ಕ್ಷೇತ್ರದಲ್ಲಿ ಬಹಳ ಕ್ರಾಂತಿ ಮಾಡಿದ್ದೀರೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕೊಟ್ಟಿರುವುದರಲ್ಲಿ ಹೆಚ್ಚು ಕಡಿಮೆಯಾಗಿರುವುದನ್ನು ಸರಿಮಾಡಿ. ಯಡಿಯೂರಪ್ಪನವರೆ, ಪ್ರಕಾಶ್ ಅವರು ನಂಜುಂಡಪ್ಪ ವರದಿಯ ಪ್ರಕಾರ ಬಜೆಟ್‌ನಲ್ಲಿ ಹೆಚ್ಚು ಹಣವನ್ನು ಕೊಟ್ಟಿಲ್ಲ, ನಾನು ಈಗ ಎಂಎಲ್ಎಆಗಿ ಹೇಳುತ್ತೇನೆ, ಅಲ್ಲಿ ನಾನು ಸರ್ಕಾರವನ್ನು ರಕ್ಷಣೆ ಮಾಡಿರಬಹುದು ಎಂದು ಮೊನ್ನೆ ಹೈದರಾಬಾದ್ ಪೇಪರ್‌ನಲ್ಲಿ ಹೇಳಿದರು. ಇದು ಪೇಪರ್‌ನಲ್ಲಿದೆ, ಓದುತ್ತೇನೆ, ನಾನು ಜಗಳ ತಂದಿಕ್ಕುತ್ತಿಲ್ಲ, ಹೆಚ್ಚುವರಿ ಹಣವನ್ನು ನಿಗದಿ ಮಾಡಿಲ್ಲ, ನಂಜುಂಡಪ್ಪ ವರದಿಯ ಮೇಲೆ ಎಂ.ಪಿ. ಪ್ರಕಾಶ್ ಅವರ ಸ್ಪಷ್ಟನೆ.

ಶ್ರೀ ಎಂ.ಪಿ.ಪ್ರಕಾಶ್ [ಗೃಹ ಸಚಿವರು] : ಬಿ.ಆರ್.ಪಾಟೀಲ್ ಅವರು ಅಲ್ಲಿ ಒಂದು ಸೆಮಿನಾರ್ ಮಾಡಿದ್ದರು, ಆ ಸೆಮಿನಾರ್‌ನಲ್ಲಿ ಸೂತ್ರವನ್ನು ಸರಿಯಾದ ರೀತಿಯಲ್ಲಿ ಅನುಸರಿಸಿ ಹಣ ವಿಭಜನೆಯಾಗಬೇಕು ಎನ್ನುವ ಮಾತನ್ನು ಹೇಳಿದ್ದೇನೆ.

ಶ್ರೀ ಎಸ್.ಎಸ್.ಪಾಟೀಲ್ : ಸರ್, ನಾನು ಒಪ್ಪುತ್ತೇನೆ, ಪೇಪರ್ ನವರು ಸುಳ್ಳು ಬರೆದಿದ್ದಾರೇನೋ ಏನೋ ನನಗೆ ಗೊತ್ತಿಲ್ಲ. ಪತ್ರಿಕೆಯಲ್ಲಿ ಈ ರೀತಿ ಬಂದಿದೆ, ಡಾ: ನಂಜುಂಡಪ್ಪ ವರದಿಯ ಅನುಷ್ಠಾನಕ್ಕಾಗಿ ಸರ್ಕಾರಿ ಯಾವುದೇ ಹೆಚ್ಚಿಗೆ ಹಣವನ್ನು ನಿಗದಿ ಮಾಡಿಲ್ಲ. ಬಜೆಟ್‌ನಲ್ಲಿ ನಮೂದಿಸಲಾದ ಹದಿನೈದುನೂರ ಎಪ್ಪತೊಂದು ಕೋಟಿ ರೂಪಾಯಿ ವಾರ್ಷಿಕ ಯೋಜನೆಯ ಗಾತ್ರದ ಒಂದು ಭಾಗವಷ್ಟೆ ಎಂದು ಗೃಹ ಸಚಿವರಾದ ಎಂ.ಪಿ.ಪ್ರಕಾಶ್‌ರವರು ಬುಧವಾರ ಇಲ್ಲಿ ಸ್ಪಷ್ಟಪಡಿಸಿದರು. ಶಾಸಕನಾಗಿ ಹೇಳುವೆ, ಈ ವಿಷಯದಲ್ಲಿ ನಾನು ಕೆಲವು ಸಂದರ್ಭದಲ್ಲಿ ಸರ್ಕಾರವನ್ನು ಸಮರ್ಥಿಸಿಕೊಳ್ಳಬಹುದು. ನಿಮಗೆ ಆಗದಿದ್ದರೆ ಏತಕ್ಕೆ ಸಮರ್ಥಿಸಿಕೊಳ್ಳುತ್ತಿರಿ? ನ್ಯಾಯ, ನಿಷ್ಠುರವಾಗಿದ್ದೇನೆ, ದಾಕ್ಷಿಣ್ಯ ಪರವಾಗಿ ನಾನಿಲ್ಲವೆಂದು ಬಸವಣ್ಣನವರ ತತ್ವದ ಬೆನ್ನಲ್ಲೇ ಬಂದೆಂಥವರು ನೀವು, ಏತಕ್ಕೆ ಸಮರ್ಥಿಸಿಕೊಳ್ಳುತ್ತೀರಿ, ತಪ್ಪು ಎಂದು ಇಲ್ಲಿ ಹೇಳಿ. ಸರ್ವಜ್ಞರಾಗಿ ಇಲ್ಲಿ ಚೆನ್ನಾಗಿರುವುದು ಸೇರಿದಂತೆ ಎಲ್ಲವನ್ನು ರಕ್ಷಣೆ ಮಾಡುಕೊಳ್ಳುತ್ತೀರಿ.

ಶ್ರೀ ಎಂ.ಪಿ.ಪ್ರಕಾಶ್ : ಹಾಗಲ್ಲ, ತಪ್ಪು ಅಭಿಪ್ರಾಯವಾಗುತ್ತದೆ, ಅಲ್ಲಿ ಯಾವ context ಬಂತೆಂದರೆ, ಹದಿನೈದು ನೂರ ಎಪ್ಪತ್ತೊಂದು ಕೋಟಿ ರೂಪಾಯಿಗಳು ಈಗ ಯೋಜನಾ ಆಯೋಗದವರು ನಿಗದಿಪಡಿಸಿರುವುದರಲ್ಲಿ ಬಂದಿದೆ, ಅದು ಪ್ರತ್ಯೇಕವಾಗಿ ಕೊಟ್ಟಿರುವ ಹಣವಲ್ಲವೆಂದು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಮತ್ತೆ ಅದರಲ್ಲಿ ಸೂತ್ರವನ್ನು ಅಳವಡಿಸಿಕೊಂಡು, ಅತ್ಯಂತ ಹಿಂದುಳಿದಿರುವ, ಹಿಂದುಳಿದಿರುವ ಈ ಪ್ರದೇಶಗಳನ್ನು ಗುರುತಿಸಿ, SC/ST ಮೊದಲಾಗಿರುವುದಕ್ಕಿಟ್ಟಿರುವ ಮೊತ್ತವೇನಿದೆ ಅದನ್ನು ಇಡಿ ರಾಜ್ಯ ವ್ಯಾಪ್ತಿಯಲ್ಲಿ ಹಂಚಬೇಡಿ, ನಮ್ಮ ಭಾಗದಲ್ಲಿ ಬಂದಿರುವ ಪೂಲ್ಡ್ ರಿಸೋರ್ಸಸ್ ಏನಿದೆ ಅದನ್ನು ಆ ಭಾಗಕ್ಕೆ ಮಾತ್ರ ಹಂಚಿ ಎಂದು ಹೇಳಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್ : ನಾನು ಇಲ್ಲಿ ಪತ್ರಿಕೆಯಲ್ಲಿ ಬಂದದ್ದನ್ನು ಹೇಳಿದೆ, ಏನಿದೆ ಎಂದರೆ, ಇಲ್ಲಿ ನಾನು ಶಾಸಕನಾಗಿ ಹೇಳುವೆ, ಈ ವಿಷಯದಲ್ಲಿ ಕೆಲವು ಸಂದರ್ಭದಲ್ಲಿ ಸರ್ಕಾರವನ್ನು ಸಮರ್ಥಿಸಿಕೊಳ್ಳಬಹುದು. ಆದರೆ ಇಲ್ಲಿ ಸಚಿವನಾಗಿ ಮಾತನಾಡುತ್ತಿಲ್ಲ ಹಿಂದುಳಿದ ಪ್ರದೇಶದ ಒಬ್ಬ ಪ್ರತಿನಿಧಿಯಾಗಿ ಮಾತನಾಡುತ್ತಿದ್ದೇನೆ ಎಂದಿದೆ. ಕರೆಕ್ಟ್ ಆಗಿ ಇದೆ, ಹೌದು ಅಲ್ಲವೇ ಅಲ್ಲಿ ಹಿಂದುಳಿದ ಪ್ರತಿನಿಧಿಯಾಗಿ ಮಾತನಾಡಿ, ಇಲ್ಲಿ ಏನು ಬಂದರು ಸರ್ವಜ್ಞ, ಎಲ್ಲದರಲ್ಲು ಸರ್ಕಾರವನ್ನು ರಕ್ಷಣೆ ಮಾಡಿದ್ದೆ ಮಾಡಿದ್ದು ಮಾಡಿ, ನೀವು ಒಬ್ಬರೆ ಇದ್ದಿರಿ ಮಾಡಿ ಬೇಡವೆನ್ನುವುದಿಲ್ಲ. ಆದರೆ ಇವತ್ತು ನಂಜುಂಡಪ್ಪ ವರದಿಯನ್ನು ಕೂಡ ಮತ್ತೆ ಪರಿಶೀಲನೆ ಮಾಡುವ ಪ್ರಸಂಗ ಬಂದಿದೆ. ಅವರು 7–8 ವರ್ಷಗಳ ಹಿಂದೆ ಹೇಳಿದ್ದು, ಆದರೆ ಇವತ್ತು ಆ ಹದಿನಾರು ಸಾವಿರ ಕೋಟಿ ರೂಪಾಯಿಗಳು ಸಾಕಾಗುವುದಿಲ್ಲ ತಾವೆ ಹೇಳಿದಿರಿ. ಸಾಕಾಗುವುದಿಲ್ಲ, ಅವರು

ಹೇಳಿದ ಲೆಕ್ಕಕ್ಕೆ ನಾವು ಹೋಗಬೇಕಾದರೂ ಇವತ್ತು ನಲವತ್ತು ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಕನಿಷ್ಟ ಒಂದು ಯೋಜನೆಯನ್ನು ಹಿಂದುಳಿದ ತಾಲ್ಲೂಕಿನಲ್ಲಿ ಮಾಡಿಕೊಡಿ. ಯಾವುದಾದರೂ ಮಾಡಿಕೊಂಡರೆ, ಹಿಂದುಳಿದ ಎಲ್ಲಾ ತಾಲ್ಲೂಕುಗಳನ್ನು ಮುಂದಕ್ಕೆ ತರುವುದಕ್ಕೆ ಸಾಧ್ಯವಾಗುತ್ತದೆನ್ನುವ ಮಾತನ್ನು ಹೇಳುತ್ತೇನೆ. ಮತ್ತೊಮ್ಮೆ ಈ ರಾಷ್ಟ್ರಪತಿ ಎಂದು ಹೇಳುವುದಕ್ಕೆ ನನಗೆ ಮನಸ್ಸಿಲ್ಲ, ರಾಷ್ಟ್ರ ಮಾತಾ ಎಂದು ಹೇಳಬೇಕು, ರಾಷ್ಟ್ರಪತಿ ಹೋಯಿತು. ಒಬ್ಬ ಹೆಣ್ಣು ಮಗಳನ್ನು ಈ ರಾಷ್ಟ್ರದ ಅತ್ಯುನ್ನತ ಸ್ಥಾನಕ್ಕೆ ಕಳುಹಿಸಿದಂಥ, ಆಯ್ಕೆ ಮಾಡಿದ ಎಲ್ಲರಿಗೂ ಕೂಡ, ಅದರಲ್ಲೂ ನಮ್ಮ ಪಕ್ಷದ ನಾಯಕಿಗೆ ಕೃತಜ್ಞತೆಗಳನ್ನು ಸಲ್ಲಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತಿದ್ದೇನೆ.

[ಪೀಠವನ್ನು ಉಪ ಸಭಾಧ್ಯಕ್ಷರು ಅಲಂಕರಿಸಿದರು]

ಶ್ರೀ ಬಸವರಾಜ ರಾಯರೆಡ್ಡಿ [ಯಲ್ಬುರ್ಗಾ] : ಮಾನ್ಯ ಉಪಸಭಾಧ್ಯಕ್ಷರೆ, 2007–8ನೇ ಸಾಲಿನ ವಿವಿಧ ಇಲಾಖೆಗಳ ಬೇಡಿಕೆಗಳ ಅನುದಾನಕ್ಕೆ ಸಂಬಂಧಿಸಿದ ವಿಚಾರದಲ್ಲಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಈಗಾಗಲೇ 28 ಇಲಾಖೆಗಳ ಬೇಡಿಕೆಗಳ ಒಪ್ಪಿಗಾಗಿ ಸರ್ಕಾರ ಈ ಸದನದ ಮುಂದೆ ಮಂಡಿಸಿದೆ. ಈಗಾಗಲೇ ವಿರೋಧ ಪಕ್ಷದ ನಾಯಕರು ಸೇರಿದಂತೆ ಹಲವಾರು ಹಿರಿಯ ಸದಸ್ಯರು ಆ ಇಲಾಖೆಗಳ ವಿಚಾರದ ಬಗ್ಗೆ ಸವಿಸ್ತಾರವಾಗಿ ಚರ್ಚೆ ಮಾಡಿದ್ದಾರೆ. ಇಲ್ಲಿ ನಾನು 3–4 ಇಲಾಖೆಗಳ ಬಗ್ಗೆ ಮಾತನಾಡುವುದಕ್ಕೆ ಇಚ್ಚೆಪಡುತ್ತೇನೆ, ಮತ್ತೆ ಸರ್ಕಾರ ಈ ಪ್ರಮುಖವಾದ ಇಲಾಖೆಗಳ ವಿಚಾರದಲ್ಲಿ ಸರಿಯಾದ ದಾರಿಯಲ್ಲಿ ನಡೆಯಬೇಕೆಂಬ ವಿಚಾರದ ಬಗ್ಗೆ ನಾನು ಹೇಳುತ್ತೇನೆ. ನಾನು ನೀರಾವರಿಯಿಂದ ಪ್ರಾರಂಭ ಮಾಡಬೇಕೆಂದು ಮಾಡಿದ್ದೆ, ಈಗ ಲೋಕೋಪಯೋಗಿ ಮಂತ್ರಿಗಳು ಬಂದ ತಕ್ಷಣ ಲೋಕೋಪಯೋಗಿ ಇಲಾಖೆಯ ಬಗ್ಗೆ ಪ್ರಾರಂಭ ಮಾಡಬೇಕೆಂದು ತೀರ್ಮಾನ ಮಾಡಿದ್ದರಿಂದ ಆ ಮಂತ್ರಿಗಳು ಬಂದಿದ್ದರೆ ಚೆನ್ನಾಗಿರುತ್ತಿತ್ತು, ದಯಮಾಡಿ ಅವರನ್ನು ಸದನಕ್ಕೆ ಕರೆಯಿಸಿದರೆ ಒಳ್ಳೆಯದೆಂಬುದು ನನ್ನ ಭಾವನೆ. ಇವತ್ತು ಲೋಕೋಪಯೋಗಿ ಇಲಾಖೆಯ ವಿಚಾರದಲ್ಲಿ ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಬಹಳ ಗಂಭೀರವಾಗಿ ಮಾತನಾಡಿದ್ದಾರೆ ಮತ್ತು ಸತ್ಯವನ್ನು ಹೇಳಿದ್ದಾರೆ ನಾನು ನಿಮ್ಮನ್ನು ಪ್ರಶಂಸೆ ಮಾಡುತ್ತೇನೆ. ಇವತ್ತು ಲೋಕೋಪಯೋಗಿ ಇಲಾಖೆಯಲ್ಲಿ ಏನಾಗಿದೆ, ರಾಜ್ಯದಲ್ಲಿ ತಾರತಮ್ಯವಾಗಿದೆ? ಮಂತ್ರಿಗಳಾಗಿ ನಾವು ಪ್ರಮಾಣವಚನ ತೆಗೆದುಕೊಂಡಿರುತ್ತೇವೆ, ಮುಖ್ಯಮಂತ್ರಿಗಳು ಪ್ರಮಾಣವಚನ ತೆಗೆದುಕೊಂಡಿರುತ್ತಾರೆ. ನಾವು, ಯಾವುದೇ ರೀತಿಯ ತಾರತಮ್ಯ, ರಾಗದ್ವೇಷ ಯಾವುದನ್ನು ಮಾಡುವುದಿಲ್ಲವೆಂದು ಪ್ರಮಾಣವಚನವನ್ನು ಕೂಡ ತೆಗೆದುಕೊಂಡಿರುತ್ತಾರೆ.

ಆದರೆ ಇಲ್ಲಿ ಏನಾಗಿದೆ? ಲೋಕೋಪಯೋಗಿ ಇಲಾಖೆಯ ಮಂತ್ರಿಗಳಾದ ಸನ್ಮಾನ್ಯ ರೇವಣ್ಣನವರು ಬಹಳ ಉತ್ಸಾಹದಿಂದ ಕೆಲಸ ಮಾಡುತ್ತಿದ್ದಾರೆ, ಕೆಲವೊಂದು ಇಲಾಖೆಯಲ್ಲಿ ನುಗ್ಗಿ ರಾಜ್ಯಕ್ಕೆ ಕೆಲಸ ಮಾಡಿಸಿಕೊಡುತ್ತಿದ್ದಾರೆ ಸಂತೋಷ. ಆದರೆ ಅದು ಸಮಾನಂತರವಾಗಿ ಹಂಚಿಕೆಯಾಗಬೇಕು. ಇವತ್ತು ಆಡಳಿತ ಪಕ್ಷದಲ್ಲಿಯು ಕೂಡ ರೇವಣ್ಣನವರ ಬಗ್ಗೆ ಏನಿದೆ ಎಂದರೆ, ನಮ್ಮ ಕಡೆ ಗಾದೆ ಮಾತಾಗಿದೆ, ಆಡು ಮುಟ್ಟದ ಸೊಪ್ಪಿಲ್ಲ, ರೇವಣ್ಣನವರು ಕೈಹಾಕದ ಇಲಾಖೆಯಿಲ್ಲ. ನಾನು ನಿಮ್ಮನ್ನು ಟೀಕೆ ಮಾಡುತ್ತಿಲ್ಲ, ಮಾಡಲಿ, ಆದರೆ ರಾಜ್ಯಕ್ಕೆ ಸರಿಸಮಾನವಾಗಿ ಹಂಚಿಕೆಯಾಗಬೇಕು, ಎಲ್ಲೋ ಒಂದು ಕಡೆ ಆಗಬಾರದು. ರೇವಣ್ಣನವರು ಸದನಕ್ಕೆ ಬಂದರು. ಸಂತೋಷ. ಸರಿಸಮಾನವಾಗಿ ಹಂಚಿಬಿಟ್ಟರೆ ಮುಂದಿನ ಮುಖ್ಯಮಂತ್ರಿ ಯಾಗಲೆಂದು ನಾನು ಹಾರೈಕೆ ಮಾಡುತ್ತೇನೆ, ಈಗ ಆಗಲಿಲ್ಲವೆಂದರೆ, ಅಕ್ಟೋಬರ್ 3ಕ್ಕೆ ಆಗಲಿ. ಅವರು ರಾಜ್ಯಕ್ಕೆ ಸರಿಸಮಾನವಾಗಿ ಹಂಚಿಕೆ ಮಾಡಿಬಿಟ್ಟರೆ, 3ನೇ ತಾರೀಖು ನಮ್ಮ ಬೆಂಬಲವನ್ನೆಲ್ಲಾ ಅವರಿಗೆಕೊಟ್ಟುಬಿಡೋಣ, ರೇವಣ್ಣನವರು ಆಗಲಿ. ಆದರೆ ಇವತ್ತು ಏನಾಗಿದೆ ಎಂದರೆ, ನಮ್ಮ ರೇವಣ್ಣನವರಿಗೆ ಹಾಸನ ಮತ್ತು ಹೊಳೆನರಸೀಪುರದ ಬಗ್ಗೆ ಬಹಳ ಪ್ರೀತಿ, ನಮಗೆ ಸಂತೋಷ ದುಃಖವಿಲ್ಲ. ಹೊಳೆನರಸೀಪುರ ಕ್ಷೇತ್ರವನ್ನು ಇವತ್ತು ಅಂತರಾಷ್ಟ್ರೀಯ ಮಟ್ಟಕ್ಕೆ ಮುಟ್ಟಿಸಿದ್ದಾರೆ, ನಾನು ಶ್ಲಾಘಿಸುತ್ತೇನೆ. ಆದರೆ ಮಂತ್ರಿಯಾಗಿ ದಯಮಾಡಿ ನಮಗೂ ಉತ್ತರ ಕರ್ನಾಟಕಕ್ಕೆ ಮತ್ತೆ ಬೇರೆ ಭಾಗಕ್ಕೂ ಸಹಾಯ ಮಾಡಿದರೆ ನಿಮಗೆ ಅತ್ಯಂತ ಧನ್ಯವಾದಗಳು.

ಶ್ರೀ ಹೆಚ್.ಡಿ.ರೇವಣ್ಣ[ಲೋಕೋಪಯೋಗಿ ಮತ್ತು ಇಂಧನ ಸಚಿವರು] : ಮಾನ್ಯ ಉಪ ಸಭಾಧ್ಯಕ್ಷರೆ, ರಾಯರೆಡ್ಡಿಯವರು ನಮ್ಮ ಬಗ್ಗೆ ಅಷ್ಟೊಂದು ಈಗ ಹೇಳುತ್ತಿದ್ದಾರೆ, ಒಂದು ದಿವಸ ನಿಮ್ಮನ್ನು ನಾನು ಕರೆದುಕೊಂಡು ಹೋಗುತ್ತೇನೆ, ನಿಮ್ಮ ಕ್ಷೇತ್ರದಲ್ಲಿ ನನ್ನ ಕ್ಷೇತ್ರದಲ್ಲಿ ಎಷ್ಟು ಕೆಲಸವಾಗಿದೆ ನೋಡಿ. ಮತ್ತೆ ರಾಯರೆಡ್ಡಿಯವರು ಎಲ್ಲಾ ಮಂತ್ರಿಗಳ ಹತ್ತಿರ ಒಂದೊಂದು ಕೆಲಸವನ್ನು ಮಾಡಿಕೊಂಡಿರುತ್ತಾರೆ, ಯಾವ ಮಂತ್ರಿ ಹತ್ತಿರ ಅವರ ಕೆಲಸವಾಗದಿರುವುದನ್ನು ತೆಗೆಯಿರಿ? ಪಾಲಿಟೆಕ್ನಿಕ್ ತೆಗೆದುಕೊಳ್ಳಿ, ಕಾಲೇಜನ್ನು ತೆಗೆದುಕೊಳ್ಳಿ, ನೀವು ಮಾಡಿರುವುದರಲ್ಲಿ ಒಂದು ಕಾಲು ಭಾಗ ನಾನು ಮಾಡುವುದಕ್ಕಾಗಿಲ್ಲ. 5ವರ್ಷದ ಹಿಂದೆ ಹೊಳೆನರಸೀಪುರ ವಿಧಾನ ಸಭೆ ಕ್ಷೇತ್ರಕ್ಕೆ ಏನು ಕೊಟ್ಟರೆಂಬುದರ ಬಗ್ಗೆ ನೀವು ಮಾತನಾಡಿ.

ಶ್ರೀ ಬಸವರಾಜು ರಾಯರೆಡ್ಡಿ : ತಾವು ಯಲ್ಬುರ್ಗಾ ಕ್ಷೇತ್ರಕ್ಕೆ ಏನು ಮಾಡಲಿಲ್ಲವೆಂದು ನಾನು ಯಲ್ಬುರ್ಗಾ ಸುದ್ಧಿಯನ್ನು ತರಲಿಲ್ಲ, ಬಹಳ ಸಂತೋಷವಾಯಿತು, ನಮ್ಮ ಉತ್ತರ ಕರ್ನಾಟಕಕ್ಕೂ ಹಾಗೆ ಮಾಡಿದರೆ ನಾನು ನಿಮ್ಮನ್ನು ಅಭಿನಂದಿಸುತ್ತೇನೆ, ಮುಂದಿನ ಮುಖ್ಯಮಂತ್ರಿ ನೀವು ಆಗಿರಪ್ಪ, ನಾವು

ಹೊಗಳುತ್ತೇವೆಂದು ನಾನು ಹೇಳೀದೆ, ನಾವು ಮನಸಾರೆ ಹೇಳುತ್ತೇವೆ ನಿಮ್ಮ ಬಗ್ಗೆ ನಮಗೇನೂ ದ್ವೇಷವಿಲ್ಲ. ಆದರೆ ಇಲ್ಲಿ ಏನಾಗಿದೆ ಎಂದು ಹೇಳುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ : ನಾವು ಮುಖ್ಯಮಂತ್ರಿಗಳನ್ನು ಯಾರನ್ನಾದರೂ ಮಾಡಿಕೊಳ್ಳುತ್ತೇವೆ, ರಾಯರೆಡ್ಡಿಯವರ ತಲೆಕಡಿಸಿಕೊಳ್ಳುವುದು ಬೇಡ, ಪಾಪ ಇದು ಅವರಿಗೇಕೆ ಬೇಕು? ಚರ್ಚೆ ಏನಿದೆಯೋ ಆ ಬಗ್ಗೆ ಮಾತನಾಡಿ.

ಶ್ರೀ ಬಸವರಾಜ ರಾಯರೆಡ್ಡಿ : ನೀವು 20 ವರ್ಷದ ಸ್ನೇಹಿತರು, ನಮಗೆ ಆಸೆ ಇಲ್ಲವೇ?

ಶ್ರೀ ಎ.ಎಸ್. ಪುಟ್ಟೇಗೌಡ : ರಾಯರೆಡ್ಡಿಯವರು ಬಹಳ ಜನರನ್ನು ಮುಖ್ಯಮಂತ್ರಿಗಳನ್ನು ಮಾಡಿ ಈ ಕಡೆ ಕುಳಿತು ಈಗ ಆ ಕಡೆ ಕುಳಿತಿದ್ದಾರೆ, ಯಾರನ್ನಾದರೂ ಮುಖ್ಯಮಂತ್ರಿಯನ್ನಾಗಿ ಮಾಡಲಿ, ಅವರಿಗ್ಯಾಕೆ ಆ ಪ್ರಸಂಗ.

ಶ್ರೀ ಹೆಚ್,ಡಿ,ರೇವಣ್ಣ : ಮೊನ್ನೆ ಕೊಪ್ಪಳದಲ್ಲಿ ಅವರನ್ನು[ರಾಯರೆಡ್ಡಿ] ಡಯಾಸ್‌ನಲ್ಲಿ ಕೂರಿಸಿಕೊಂಡು ಸಭೆ ನಡೆಯಿತು. ಅವರ ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟು ಕೋಟಿ ರೂಪಾಯಿಗಳ ಕೆಲಸವಾಗಿದೆ ಎಂದು ದಯಮಾಡಿ ಹೇಳಿ. ಒಂದು ಕ್ಷೇತ್ರದಲ್ಲಿ 280 ಕೋಟಿ ರೂಪಾಯಿಗಳ ಕೆಲಸ ನಡೆಯುತ್ತಿದೆ, ಮೊನ್ನೆ ಕೊಪ್ಪಳದ ಸಭೆಯಲ್ಲಿ ಅವರೇ ಕುಳಿತ್ತಿದ್ದರು ತಾನೇ, ನಾನಲ್ಲ, ಸಮ್ಮುಖದಲ್ಲಿ 280 ಕೋಟಿ ರೂಪಾಯಿಗಳ ಮಾಹಿತಿಯನ್ನು ಕೊಟ್ಟರು. ಆ ಭಾಗ, ಉತ್ತರ ಕರ್ನಾಟಕದ ಭಾಗ ಎಲ್ಲಿ ಬರುತ್ತದೆಂಬುದನ್ನು ತೆಗೆದು ಓದಿ, ನೀವು ಹೇಳಿ.

ಶ್ರೀ ಬಸವರಾಜು ರಾಯರೆಡ್ಡಿ : ರೇವಣ್ಣನವರೆ ಸ್ವಲ್ಪ ಗಂಭೀರವಾಗಿ ಕೇಳಿ, ನಾನು ಹೇಳುತ್ತೇನೆ. ಮೊನ್ನೆ ಮಾಧುಸ್ವಾಮಿಯವರು ರೇವಣ್ಣನವರಿಗೆ ಹಾಸನವೇ ರಾಷ್ಟ್ರ, ಹೊಳೆನರಸಿಪುರವೇ ರಾಜ್ಯವೆಂದು ಹೇಳಿದ್ದು ಒಮ್ಮೆ ಸತ್ಯವೆನಿಸುತ್ತದೆ. ಏಕೆಂದು ಹೇಳುತ್ತೇನೆ, ನಮ್ಮ ಕರ್ನಾಟಕದಲ್ಲಿ ಲೋಕೋಪಯೋಗಿ ರಸ್ತೆಗಳು ಒಟ್ಟು 56,000 ಕಿ.ಮೀ. ಇದರಲ್ಲಿ ರಾಷ್ಟ್ರೀಯ ಹೆದ್ದಾರಿ 3957 ಕಿ.ಮೀ. ರಾಜ್ಯದ ಹೆದ್ದಾರಿ 17,371 ಕಿ.ಮೀ. ಮತ್ತು ಜಿಲ್ಲಾ ಪ್ರಮುಖರಸ್ತೆ ಸುಮಾರು 36,000 ಕಿ.ಮೀ ರಸ್ತೆಗಳು. ಈ ರಸ್ತೆಗಳಲ್ಲಿ ರಾಷ್ಟ್ರೀಯ ಹೆದ್ದಾರಿಗಳನ್ನು ಸೆಲೆಕ್ಟ್ ಮಾಡುವ ಸಂದರ್ಭದಲ್ಲಿ ರಾಜ್ಯ ಶಿಫಾರಸ್ಸು ಮಾಡುತ್ತದೆ, ಕೇಂದ್ರ ಸರ್ಕಾರ ಕೆಲವು ರಸ್ತೆಗಳನ್ನು ಆಯ್ಕೆ ಮಾಡುತ್ತದೆ. ಆದರೆ 11ನೇ ಪಂಚವಾರ್ಷಿಕ ಯೋಜನೆಯಲ್ಲಿ ಇನ್ನು ರಾಷ್ಟ್ರೀಯ ಹೆದ್ದಾರಿಗಳನ್ನು ತಾವು ತೆಗೆದುಕೊಂಡಿಲ್ಲ, ತಾವು ಬಹಳಷ್ಟು ರಸ್ತೆಗಳನ್ನು ಶಿಫಾರಸ್ಸು ಮಾಡಿದ್ದಿರಿ. ಇವತ್ತು ರಾಷ್ಟ್ರೀಯ ಹೆದ್ದಾರಿ ರಸ್ತೆಗಳಲ್ಲೂ ಕೂಡ ಉತ್ತರ ಕರ್ನಾಟಕದ ರಸ್ತೆಯಾದ ಬಿಜಾಪುರದಿಂದ ಚಿತ್ರದುರ್ಗಾ ಮತ್ತು ಬಳ್ಳಾರಿಯಿಂದ ಹುಬ್ಬಳ್ಳೀ ರಸ್ತೆಗಳು ಅತಿ ಪ್ರಮುಖವಾದ ರಾಷ್ಟ್ರೀಯ ಹೆದ್ದಾರಿಗಳು. ಚಿತ್ರದುರ್ಗಾದಿಂದ ಸೊಲ್ಲಾಪುರ, ಇಡೀ ದಕ್ಷಿಣದಿಂದ ದೆಹಲಿ ಉತ್ತರ ಭಾರತದ ಕಡೆ ಹೆಚ್ಚು ಟ್ರಾಫಿಕ್ ಆಗುತ್ತದೆ, ಅದನ್ನು 4 ಲೈನ್ ಆಗಿ

ತಾವು ಇದುವರೆವಿಗೂ ಮಾಡಲಿಲ್ಲ. ಅದರ ಜೊತೆಗೆ ಹುಬ್ಬಳ್ಳಿ ಬಳ್ಳಾರಿ ರಸ್ತೆಯಲ್ಲಿ ಗಣಿಗಾರಿಕೆಯ ಸುಮಾರು 10 ಸಾವಿರಕ್ಕಿಂತ ಹೆಚ್ಚು ಲಾರಿಗಳು ಪ್ರತಿದಿವಸ ಹೋಗುತ್ತವೆ, ಆ ರಸ್ತೆಯನ್ನು ತಾವು ನೋಡಿದ್ದಿರಿ, ಆ ಕಡೆ ಗಮನಹರಿಸಲಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ನಾನೇ ಕೇಂದ್ರ ಸರ್ಕಾರಕ್ಕೆ ಎಷ್ಟು ಪತ್ರವನ್ನು ಬರೆದಿದ್ದೇನೆಂದರೆ, ಕೇಂದ್ರ ಸರ್ಕಾರದ ಮಂತ್ರಿಗಳಿಗೂ ಪತ್ರವನ್ನು ಬರೆದಿದ್ದೇನೆ. ತಮಿಳುನಾಡಿನಲ್ಲಿ ಎಷ್ಟು ರಾಷ್ಟ್ರೀಯ ಹೆದ್ದಾರಿಯನ್ನು ಕೊಟ್ಟಿದ್ದಾರೆ, ಕರ್ನಾಟಕದಲ್ಲಿ ಎಷ್ಟು ರಾಷ್ಟ್ರೀಯ ಹೆದ್ದಾರಿಯನ್ನು ಕೊಟ್ಟಿದ್ದಾರೆ,ಕೇಂದ್ರ ಸರ್ಕಾರದಲ್ಲಿ ಏನು ಅನ್ಯಾಯ ನಡೆಯುತ್ತಿದೆ ಎಂಬುದರ ಬಗ್ಗೆ ರಾಯರೆಡ್ಡಿಯವರು ಸ್ವಲ್ಪ ಬೆಳಕನ್ನು ಚೆಲ್ಲಬೇಕು.

ಶ್ರೀ ಬಸವರಾಜು ರಾಯರೆಡ್ಡಿ : ನಾನೇನು ಹೇಳುತ್ತಿದ್ದೇನೆ, ಈ ಎರಡೂ ಪ್ರಮುಖ ರಸ್ತೆಗಳ ಬದಲಾಗಿ ಹಳೆಯ ಮೈಸೂರಿನಲ್ಲಿರುವ ಹಾಸನ–ಬೆಂಗಳೂರು–ಮಂಗಳೂರು, ಕೋಲಾರ–ಮುಳಬಾಗಲು, ಮೈಸೂರು–ಬೆಂಗಳುರು ಇವೇ ರಸ್ತೆಗಳನ್ನು 4 ಪಥದ ರಸ್ತೆಗಳನ್ನಾಗಿ ಮಾಡಿದ್ದಿರಲ್ಲ, ನಮಗೇನು ದುಃಖವಿಲ್ಲ ಮಾಡಿ, ಆದರೆ ಪ್ರಥಮ ಆದ್ಯತೆಯನ್ನು ಬಳ್ಳಾರಿ–ಹುಬ್ಬಳ್ಳಿ ಇದಕ್ಕೆ ಕೊಡಬೇಕಾಗಿತ್ತು. ಈ ಬಳ್ಳಾರಿ–ಹುಬ್ಬಳ್ಳಿ ರಸ್ತೆಯಿಂದ ಇವತ್ತು ಸಾವಿರಾರು ಕೋಟಿ ರೂಪಾಯಿಗಳು ಬರುತ್ತದೆ, ಆ ರಸ್ತೆಯಲ್ಲಿ 30 ಲಕ್ಷಕ್ಕೂ ಹೆಚ್ಚು ಅದಿರು ಟ್ರಾನ್ಸ್‌ಪೋರ್ಟ್ ಆಗುತ್ತದೆ, ಆ ರಸ್ತೆಯನ್ನು ನೀವು ನೋಡಬಾರದು, ಹೋಗುವುದಕ್ಕೆ ಸಾಧ್ಯವಿಲ್ಲ, ಒಂದು ಗಂಟೆಗೆ 5 ಕಿ.ಮೀ ಮಾತ್ರ ಸಂಚಾರ ಮಾಡಲು ಸಾಧ್ಯವಿದೆ, ಈ ರಸ್ತೆಯನ್ನು ತಾವು ತೆಗೆದುಕೊಳ್ಳಬೇಕಾಗಿತ್ತು. ಆದರೆ ಇವೆಲ್ಲಾ ಹಳೆಯ ಮೈಸೂರಿಗೆ ಹೋಯಿತು. ನೀವು ಹೇಳಿದ ಹಾಗೆ ತಮಿಳುನಾಡಿದವರದು ಫೆನಿಟಿಸಂ, ಅವರದು ಏನಾಗಿದೆ ಎಂದರೆ, ಡಿಎಂಕೆ ಸಚಿವರಾದ ಬಾಲುರವರು ನನಗೆ ಚೆನ್ನಾಗಿ ಗೊತ್ತು, ನಿಮಗೂ ಗೊತ್ತು, ಈ ತಮಿಳುನಾಡಿಗೆ ಮಾಡಿಕೊಂಡಷ್ಟು ಸಹಾಯವನ್ನು ಕರ್ನಾಟಕಕ್ಕೆ ಮಾಡಿಲ್ಲವೆಂಬುದು ನನಗೂ ಗೊತ್ತಿದೆ. ಏನಾಗಿದೆ ಎಂದರೆ, ಎಲ್ಲರೂ ಕೂಡ ತಮ್ಮದೇ ಕ್ಷೇತ್ರ, ತಮ್ಮದೇ ಊರು, ತಮ್ಮದೇ ರಾಜ್ಯ, ತಮ್ಮದೇ ರಾಷ್ಟ್ರ, ಅಷ್ಟಕ್ಕೆ ಸೀಮಿತವಾಗಿದ್ದಾರೆ. ಇಂಥ ಸಂಕುಚಿತವಾದ ಭಾವನೆ ಇರುವುದರಿಂದ ಈ ಸಮಸ್ಯೆಯಾಗಿದೆ, ದಯಮಾಡಿ ರೇವಣ್ಣನವರು ತಮ್ಮ ಮನಸ್ಸನ್ನು ಸ್ವಲ್ಪ ವಿಸ್ತಾರ ಮಾಡಿ ಎಂದು ನಾವು ಮನವಿಯನ್ನು ಮಾಡಿದ್ದೇವೆ.

ಶ್ರೀ ಎಸ್. ರಾಜೇಂದ್ರನ್ : ಕರ್ನಾಟಕದಲ್ಲಿ ಕೇಂದ್ರ ಸಚಿವರಾದ ಕೆ.ಹೆಚ್. ಮುನಿಯಪ್ಪನವರಿದ್ದಾರೆ.

ಶ್ರೀ ಬಸವರಾಜು ರಾಯರೆಡ್ಡಿ : ಎಲ್ಲವನ್ನೂ ಡಿಎಂಕೆ ಮಿನಿಸ್ಟರ್ ಇಟ್ಟುಕೊಂಡಿದ್ದಾರೆ. He is a Minister of State. He has no power.

ಶ್ರೀ ಎಸ್.ರಾಜೇಂದ್ರನ್ : He is a Congress Minister and you are saying he has no power.

ಶ್ರೀ ಬಸವರಾಜ ರಾಯರೆಡ್ಡಿ : ಡಿಎಂಕೆ ಮಿನಿಸ್ಟರ್ ತಮ್ಮ ಕಪಿಮುಷ್ಠಿಯಲ್ಲಿಟ್ಟುಕೊಂಡುಬಿಟ್ಟಿದ್ದಾರೆ, ಹೀಗಾಗಿ ದಯಮಾಡಿ ರೇವಣ್ಣನವರು ಈ ರಸ್ತೆಗಳ ಬಗ್ಗೆ ಗಮನಹರಿಸಬೇಕು.

ಶ್ರೀ ಹೆಚ್.ಡಿ.ರೇವಣ್ಣ : ಉದಾಹರಣೆಗೆ ನಿಮಗೆ ಹೇಳುವುದಾದರೆ, ಮಂಗಳೂರಿನ ನಾಗರಾಜ ಶೆಟ್ಟರವರು ಇಲ್ಲಿದ್ದಾರೆ, ಹಾಸನದಿಂದ ಮಂಗಳೂರಿಗೆ ದಿವಸ 15,000 ಲಾರಿಗಳು ಹೋಗುತ್ತಿದ್ದಾವೆ. ಅವರು ರಾಷ್ಟ್ರೀಯ ರಸ್ತೆಗಳನ್ನು ಅವರು ತೆಗೆದುಕೊಳ್ಳವುದಕ್ಕಾಗುವುದಿಲ್ಲವೆಂದರೆ, ನಮ್ಮ ರಾಜ್ಯಕ್ಕೆ ವಾಪಸ್ ಕೊಡಿಸಿ ನಾವು ಮಾಡಿಸುತ್ತೇವೆ. ಅವರು ಬಿಓಟಿ ಮೇಲೆ ಮಾಡುವುದು, ನಾನು ಬಿಓಟಿ ಮೇಲೆ ಮಾಡಿಸುತ್ತೇನೆ, ನನಗೆ ಕೊಡಿಸಿ, ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ ಹೇಳಿ.

ಶ್ರೀ ಬಸವರಾಜ ರಾಯರೆಡ್ಡಿ : KRDCL ಮುಖಾಂತರ ರಾಜ್ಯದ ಹೆದ್ದಾರಿಯನ್ನು ಈಗ ತಾವೇನು ನಿರ್ವಹಣೆ ಮಾಡುತ್ತಿದ್ದಿರಿ ಅದು ಸರಿ ಇದೆ. ನೋಡಿ ಇದು ಸರಿಯಾಗಿದೆ ಎಂದು ಹೇಳುತ್ತಿದ್ದೇನಲ್ಲ. ನೀವು ನಿರ್ವಹಣೆಯನ್ನು ಮಾಡಿ 3.75 ವಿಡ್ತ್ ಗೆ ಏನು ಡಾಬರ್ ಹಾಕುತ್ತಿದ್ದಿರಿ ಇದರ ಬದಲಾಗಿ ರಾಜ್ಯದ ಹೆದ್ದಾರಿಗಳನ್ನು ನೀವು 7 ಮೀಟರ್‌ಗೆ ವಿಸ್ತರಣೆ ಮಾಡಬೇಕು. ಏಕೆಂದರೆ, ಇವತ್ತು ವಾಹನದ ಸಂಖ್ಯೆ ಬಹಳವಾಗಿದೆ. ನೋಡಿ ನೀವು ಕೆಲಸ ಮಾಡಿದ್ದನ್ನು ಈಗ ಹೇಳಲಿಲ್ಲವೇ? ಅದನ್ನು ಮಾಡಿ. ಇನ್ನು ಮುಖ್ಯವಾಗಿ 36,000 ಕಿ.ಮೀ., exactly 35,610 ಕಿ.ಮೀ MDR ಇದೆ. ಈ MDR ನಲ್ಲಿ ನಮ್ಮ ಉತ್ತರ ಕರ್ನಾಟಕಕ್ಕೆ ಎಷ್ಟು ತಾರತಮ್ಯವಾಗಿದೆ. ಉತ್ತರ ಕರ್ನಾಟಕ ಭೌಗೋಳಿಕವಾಗಿ 52% ಇದೆ. ನಮ್ಮ ರಾಜ್ಯದ 1,92,000 sq. meter ನಲ್ಲಿ ಉತ್ತರ ಕರ್ನಾಟಕ 52% ಇದೆ. ಉತ್ತರ ಕರ್ನಾಟಕದಲ್ಲಿ 96 ಶಾಸಕರಿದ್ದಾರೆ, 84 ತಾಲ್ಲೂಕುಗಳಿವೆ. ಅಲ್ಲಿ 36,000 ಕಿ,ಮೀ.ಗೆ ಕೇವಲ 13,000 MDR ಇದೆ. ಅಂದರೆ ದಕ್ಷಿಣ ಕರ್ನಾಟಕಕ್ಕೆ 22,000 MDR ಇದೆ. ಅದಕ್ಕೆ ದಯಮಾಡಿ ರೇವಣ್ಣನವರು ನಮಗೆ ಇನ್ನು ಸ್ವಲ್ಪ MDRಗಳನ್ನು ಕೊಡಿ. ಏಕೆಂದರೆ ಡಾ: ಡಿ.ಎಂ.ನಂಜುಂಡಪ್ಪ ವರದಿಯ ಪ್ರಕಾರ 39 ಹಿಂದುಳಿದ ಹಾಗೂ ಇನ್ನುಳಿದ ಹಿಂದುಳಿದ ತಾಲ್ಲೂಕುಗಳಿಗೆ ತಾವು ಹೆಚ್ಚು MDRಗಳನ್ನು ಕೊಟ್ಟರೆ ಉತ್ತರ ಮತ್ತು ದಕ್ಷಿಣ ಕರ್ನಾಟಕ ಸರಿಸಮಾನವಾಗಿರುವುದಕ್ಕೆ ಸಾಧ್ಯತೆ ಇದೆ. ಯಡಿಯೂರಪ್ಪನವರೆ, ಲೋಕೋಪಯೋಗಿ ಸಚಿವರ ಹತ್ತಿರ ನಂಜುಂಡಪ್ಪ ವರದಿಗೆ ಸಂಬಂಧಿಸಿದ ಕಡತ ಬಂದು ಎರಡು ತಿಂಗಳಾಗಿದೆ, ಅದನ್ನು ಹಣಕಾಸು ಇಲಾಖೆಗೆ ಕಳುಹಿಸುತ್ತಾರೆ, ದಯಮಾಡಿ ಅದಕ್ಕೆ ಒಪ್ಪಿಗೆಯನ್ನು ಕೊಡಿ, ಏಕೆಂದರೆ ಉತ್ತರ

ಕರ್ನಾಟಕದಲ್ಲಿ ಕೇವಲ 13,000 MDR ಇದೆ, ದಕ್ಷಿಣ ಕರ್ನಾಟಕಕ್ಕೆ 82,000 ಕಿ.ಮೀ ಇದೆ, ಈ ಬಗ್ಗೆ ದಯವಿಟ್ಟು ಗಮನಹರಿಸಿ. ಈ ವರ್ಷ ಮತ್ತು ಕಳೆದ ವರ್ಷ ಕೇಂದ್ರ ಸರ್ಕಾರ 12ನೇ ಹಣಕಾಸು ಯೋಜನೆಯಲ್ಲಿ ರಾಜ್ಯ ಸರ್ಕರದ ರಸ್ತೆ ನಿರ್ವಹಣೆಗಾಗಿ ಸುಮಾರು 165 ಕೋಟಿ ರೂಪಾಯಿಗಳ ನಿರ್ವಹಣ ಹಣ ಕೊಡುತ್ತಿದ್ದಾರೆ. ಅದರಲ್ಲಿ ಲೋಕೋಪಯೀಗಿ ಇಲಾಖೆಗೆ 2006–7ನೇ ಸಾಲಿನಲ್ಲಿ ಸುಮಾರು ರೂ.146 ಕೋಟಿ ಕೇಂದ್ರ ಸಕಾರದಿಂದ ಬಂದಿದೆ. ಇದನ್ನು ನಾನು ಹೇಳುತ್ತಿರುವುದಿಲ್ಲ, ಅಧಿಕೃತ ಅಂಕಿ ಅಂಶಗಳನ್ನು ಹೇಳುತ್ತಿದ್ದೇನೆ, ಇದರಲ್ಲಿ ಎಷ್ಟು ಕೊಟ್ಟಿದ್ದಾರೆಂದರೆ, The chief Engineer Southಗೆ for maintenance of MDR ರೂ.146 ಕೋಟಿಯಲ್ಲಿ ರೂ.101ಕೋಟಿ ಕೊಟ್ಟಿದ್ದಾರೆ, ಕೇವಲ ರೂ.46 ಕೋಟಿ ಮಾತ್ರ ಉತ್ತರ ಕರ್ನಾಟಕಕ್ಕೆ ಕೊಟ್ಟಿದ್ದಾರೆ.

ಶ್ರೀ ಹೆಚ್.ಡಿ.ರೇವಣ್ಣ : ನಾನು ಮಾಡಿರುವುದಿಲ್ಲ, ರೋಡ್ ಲೆಂತ್ ಮೇಲೆ ಕೊಡುತ್ತಿದ್ದೇವೆ ನನಗೇನಂತೆ, ನೀವು ಒಂದು ಕೆಲಸ ಮಾಡಿ 5 ವರ್ಷದಲ್ಲಿ ಉತ್ತರ ಕರ್ನಾಟಕಕ್ಕೆ ಹಾಗೂ ದಕ್ಷಿಣ ಕರ್ನಾಟಕಕ್ಕೆಏನೇನು ಕೊಟ್ಟಿದ್ದಾರೆಂದು ತಮ್ಮ ಭಾಷಣದಲ್ಲಿ ದಯಮಾಡಿ ಹೇಳಿ.

ಶ್ರೀ ಬಸವರಾಜ ರಾಯರೆಡ್ಡಿ : 12ನೇ ಹಣಕಾಸಿಗೆ ಸಂಬಂಧಿಸಿದಂತೆ ಅವರು ಕೊಟ್ಟಂಥ ಉತ್ತರವಿದ್ದು, ರೂ.146 ಕೋಟಿಯಲ್ಲಿ Rs.101 Crors are given to Chief Engineer (South), the remaining Rs. 45 Crors are given to the remaining part of Karnataka, including Bombay-Karnataka and Hyderabad-Karnataka.ಈ ವರ್ಷ ಕೂಡ continue ಮಾಡಿದ್ದಾರೆ. ಯಡಿಯೂರಪ್ಪನವರೇ 2007–08ನೇ ಸಾಲಿಗೂ continue ಆಗಿದೆ. That means we are getting only 45 crores. ಇದಾದ ಮೇಲೆ ಈ ವರ್ಷದ Appendix-E ಕಟ್ಟಡಗಳು, ಭಾಗ 1 ಇದರಲ್ಲಿ ದಕ್ಷಿಣ ವಲಯ. C.E.South, ಒಟ್ಟು ಈ ವರ್ಷ ಎಷ್ಟು ಕಾಮಗಾರಿಗಳಿಗೆ ಒಪ್ಪಿಗೆ ಕೊಟ್ಟಿದ್ದಾರೆ? ಯಡಿಯೂರಪ್ಪನವರೇ ಇಲ್ಲಿ ಗಮನ ಕೊಡಿ. South ಗೆ ತಾವು ಸುಮಾರು ರೂ. 953,33,77,000–00. ಇದಕ್ಕೆ ಅನುದಾನ 205 ಕೋಟಿ ರೂ.ಗಳು ಕೊಟ್ಟಿದ್ದಾರೆ. ಉತ್ತರ ವಲಯ 325.64 ಲಕ್ಷ ರೂ.ಗಳು. ಅದಕ್ಕೆ ಅನುದಾನ 84.00 ಕೋಟಿ ರೂ.ಗಳು ಯಡಿಯೂರಪ್ಪನವರೇ ಈ ರೀತಿಯ ತಾರತಮ್ಯ ಏಕೆ?

ಶ್ರೀ ಹೆಚ್.ಡಿ.ರೇವಣ್ಣ(ಮಾನ್ಯ ಲೋಕೋಪಯೋಗಿ ಸಚಿವರು) : North ನಲ್ಲಿ ಎಷ್ಟು ಸಬ್ ಡಿವಿಷನ್ಸ್ ಇವೆ, South ಎಷ್ಟು ಸಬ್ ಡಿವಿಷನ್ಸ್ ಇವೆ, ಅದನ್ನು ದಯಮಾಡಿ ಹೇಳಿ.

ಶ್ರೀ ಬಸವರಾಜು ರಾಯರೆಡ್ಡಿ : ಅದಕ್ಕೆ ಬರುತ್ತೇನೆ, ನಾನು ಕಂಪ್ಲೀಟ್ ಮಾಡಲಿಕ್ಕೆ ಬಿಡಿ. ಇದರಲ್ಲಿ ಎಷ್ಟು ತಾರತಮ್ಯ ಇದೆ ನೋಡಿ, 953–00 ಕೋಟಿ

ರೂ.ಗಳು, 352 ಕೋಟಿ ರೂ.ಗಳು. ಇದಾದ ಮೇಲೆ ಸಬ್ ಡಿವಿಷನ್ಸ್ ಬರುತ್ತೇನೆ. ನಂತರ CMGSY 3054 grant, ಮುಖ್ಯಮಂತ್ರಿಗಳ ಗ್ರಾಮೀಣ ಅಭಿವೃದ್ಧಿ ನಿಧಿ 2,067–00, total 300 ಕೋಟಿ ರೂ.ಗಳು. entire North Karnataka 90 crores. 210 crores for South. ಇದರ ಜೊತೆಗೆ KRDCL ನಲ್ಲಿ ಬ್ರಿಡ್ಜಸ್ Rs. 561.00 crores Neavly Rs. 350 crores for South Rs. 200 crores for the North. ಸನ್ಮಾನ್ಯ ಲೋಕೋಪಯೋಗಿ ಸಚಿವರು ಹೇಳಿದರು, ನಾವು ವಿಭಾಗವಾರು,ಉಪ ವಿಭಾಗವಾರು ಎಷ್ಟು ಇವೆ ನೋಡಿ ಎನ್ನುವ ಮಾತನ್ನು ಹೇಳಿದ್ದಾರೆ. ಉಪಾಧ್ಯಕ್ಷರೇ, ಒಂದು ಮತನ್ನು ನಾನು ತಮ್ಮ ಮೂಲಕ ಕೇಳಲಿಕ್ಕೆ ಇಚ್ಛಿಸುತ್ತೇನೆ. ಅವರ ಮಾತನ್ನು ನಾನು ಒಪ್ಪುತ್ತೇನೆ. Entire North Karnataka 16 division ಇವೆ. 84 ತಾಲ್ಲೂಕುಗಳಿಗೆ 84 sub division ಇವೆ. South –20 division ಇವೆ. 120 sub division ಇವೆ. Sub division ಜಾಸ್ತಿ ಮಾಡಿಕೊಂಡಿದ್ದಾರೆ. ಇಲ್ಲಿ ಡಿವಿಷನ್, ಸಬ್ ಡಿವಿಷನ್ ಪ್ರಶ್ನೆ ಅಲ್ಲ. Work load ಜಾಸ್ತಿ ಆದಹಾಗೆ ಸಬ್ ಡಿವಿಷನ್ ಜಾಸ್ತಿ ಆಗುತ್ತದೆ. It depends upon the work load.

ಶ್ರೀ ಹೆಚ್.ಡಿ.ರೇವಣ್ಣ : ದಯಮಾಡಿ ಕೇಳಿ, 5 ವರ್ಷಗಳಲ್ಲಿ ಏನೇನು ಮಾಡಿದಿರಿ ಎಂಬುದನ್ನು ಎಳೆಎಳೆಯಾಗಿ ಬಿಡಿಸಿ ಹೇಳಿ. ಉತ್ತರ ಕರ್ನಾಟಕಕ್ಕೆ ಎಷ್ಟು ಕೊಟ್ಟರು? ದಕ್ಷಿಣ ಕರ್ನಾಟಕಕ್ಕೆ ಎಷ್ಟು ಕೊಟ್ಟರು? ಎಷ್ಟು ವರ್ಷಗಳ ಕಾಲ ಈ ಭಾಗದಲ್ಲಿ ರಸ್ತೆಯಾಗಿತ್ತು ಎನ್ನುವುದನ್ನು ಶ್ರೀನಿವಾಸಗೌಡರು ಹೇಳಲಿ. 5 ವರ್ಷಗಳ ಕಾಲದಿಂದ ಈ ಭಾಗದಲ್ಲಿ ಒಂದು ರಸ್ತೆಯಿತ್ತೇ? ಉದಾಹರಣೆಗಾಗಿ ಹೇಳುವುದಾದರೆ ದೊಡ್ಡಬಳ್ಳಾಪುರದೊಂದು ರಸ್ತೆ ಇದೆ, ಅದಕ್ಕೆ ಇಪ್ಪತ್ತೈದು ಕೋಟಿ ರೂ.ಗಳನ್ನು ಕೊಟ್ಟಿದ್ದೇವೆ. ದೊಡ್ಡಬಳ್ಳಾಪುರ ನನ್ನ ಕ್ಷೇತ್ರವೇ? ಇಪ್ಪತ್ತೈದು ಕೋಟಿ ರೂ.ಗಳನ್ನು ಕೊಟ್ಟಿದ್ದೇವೆ, ರಸ್ತೆ ಕಾಮಗಾರಿ ಕೆಲಸ ನಡೆಯುತ್ತಿಲ್ಲವೇ?

ಶ್ರೀ ಜೆ.ನರಸಿಂಹ ಸ್ವಾಮಿ(ದೊಡ್ಡಬಳ್ಳಾಪುರ) : ಇಪ್ಪತ್ತೈದು ಕೋಟಿ ರೂ.ಗಳನ್ನು ಕೊಟ್ಟಿದ್ದೀರಿ ಅದಕ್ಕೆ ತಮ್ಮನ್ನು ಶ್ಲಾಘಿಸುತ್ತೇನೆ. ನಾನು ತಮ್ಮನ್ನು ಹೊಗಳುತ್ತಿದ್ದೇನೆ. ಹಾಸನದಿಂದ ಹೊಳೆನರಸೀಪುರದ ರಸ್ತೆ ಒಳ್ಳೆಯ ನ್ಯಾಷನಲ್ ಹೈವೇ ರೀತಿ ಮಾಡಿದ್ದೀರಿ, ಹಾಸನದಿಂದ ಮೈಸೂರಿಗೆ ಹೋದಾಗ ನಾನು ನೋಡಿದೆ. ನಮ್ಮ ದೊಡ್ಡಬಳ್ಳಾಪುರಕ್ಕೆ ಇಪ್ಪತ್ತೈದು ಕೋಟಿ ರೂ.ಗಳನ್ನು ಕೊಟ್ಟಿದ್ದನ್ನು ಲೆಕ್ಕ ಹಾಕುತ್ತಿದ್ದೀರಿ.

ಶ್ರೀ ಹೆಚ್.ಡಿ.ರೇವಣ್ಣ : ಅದು ನನ್ನದಲ್ಲ. ನಾನು ಮಾಡಿದ ರಸ್ತೆಯಲ್ಲ.

ಶ್ರೀ ಎನ್.ಚೆಲುವರಾಯಸ್ವಾಮಿ : ಈಗ ಉತ್ತರವನ್ನು ಇಲಾಖಾ ಮಂತ್ರಿಗಳು ಕೊಡುತ್ತಾರೆ. ದಯಮಾಡಿ ಇವೆಲ್ಲಾ serious ವಿಷಯಗಳು, 25 ವರ್ಷಗಳಿಂದ ಎಂ.ಎಲ್.ಎ. ಆಗಿರುವವರು ನೀವು, ಸ್ವಲ್ಪ ಸಮಾಧಾನದಿಂದ

ಕೇಳಿ. ಒಂದು ನಿಮಿಷದಿಂದ ರೇವಣ್ಣನವರೇ, ನಾನು ಸಹ ಮೊನ್ನೆ ಬಿಜಾಪುರ, ಹಾವೇರಿ, ಗದಗ ಬಾಗಲಕೋಟೆ ಎಲ್ಲಾ ಟೂರ್ ಮಾಡಿಕೊಂಡು ಬಂದೆ, ಬಹುಶಃ ತಾವು ದಯಮಾಡಿ ಗಮನಿಸಿ. ದಕ್ಷಿಣ ಭಾಗದಲ್ಲಿಯೂ ನಾಲ್ಕೈದು ತಾಲ್ಲೂಕುಗಳು. ಅದರಲ್ಲಿ ಹೊಳೆನರಸೀಪುರ ಒಂದು. ನಾನು ಹಿಂದೆ ಶಾಸಕನಾಗಿದ್ದಾಗ, 5 ವರ್ಷದಲ್ಲಿ ಒಂದು CRFನಲ್ಲಿ ಒಂದು ರೂಪಾಯಿ ಯನ್ನು ನಾಗಮಂಗಲಕ್ಕೆ ಕೊಟ್ಟಿಲ್ಲ. ಒಂದು ರೂಪಾಯಿಯನ್ನು ನಬಾರ್ಡ್‌ನಲ್ಲಿ ಸಹ ಕೊಟ್ಟಿರಲಿಲ್ಲ. ನಮ್ಮ ಹಿಂದಿನ ಮುಖ್ಯಮಂತ್ರಿಗಳು ಮದ್ದೂರಿಗೆ ಹೆಚ್ಚು ಕಡಿಮೆ 100 ಕೋಟಿ ರೂಗಳನ್ನು ಹಾಕಿಕೊಂಡಿದ್ದರು. ಏನೋ ಒಂದು ಸ್ವಲ್ಪ ತಾರತಮ್ಯ ಇದೆ, ಆದರೆ ಅದು ಇವತ್ತಿನಿಂದ ಪ್ರಾರಂಭವಾಗಿಲ್ಲ. ಹೈದರಾಬಾದ್ ಕರ್ನಾಟಕಕ್ಕೆ, ಬಾಂಬೆಕರ್ನಾಟಕಕ್ಕೆ ಇತಿಹಾಸದಲ್ಲಿಯೇ ಈ ಸಮ್ಮಿಶ್ರ ಸರ್ಕಾರ ಮಾಡಿರುವಷ್ಟು ಕೆಲಸ ಯಾರು ಮಾಡಿಲ್ಲ.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ : ನೀವು ಆ ರೀತಿ ಮಾತನಾಡಬೇಡಿ.

ಶ್ರೀ ಶರಣ್ ಪ್ರಕಾಶ್ ರುದ್ರಪ್ಪ ಪಾಟೀಲ್ : ಏನು ಮಾಡಿದ್ದೀರಿ, ಹೈದರಾಬಾದ್ ಕರ್ನಾಟಕಕ್ಕೆ ಈ ಸರ್ಕಾರ ಮಾಡಿರುವಷ್ಟು ಅನ್ಯಾಯ ಯಾರು ಮಾಡಿಲ್ಲ. ಅದರ ಬಗ್ಗೆ ನೀವು ಮಾತನಾಡಬೇಡಿ.

(ಗೊಂದಲ)

ಶ್ರೀ ಎನ್. ಚೆಲುವರಾಯಸ್ವಾಮಿ : ಮಂಡ್ಯ ಪ್ಯಾಕೇಜ್‌ಗೆ 300.00 ಕೋಟಿ ರೂ.,ಗಳನ್ನು ಕೊಟ್ಟಿದ್ದರು, ಅದನ್ನು ಟ್ರಂಕ್‌ನಲ್ಲಿ ಹಾಕಿ ಬೀಗ ಹಾಕಿಕೊಂಡು ಇಟ್ಟುಕೊಂಡಿದ್ದರು. ದಯಮಾಡಿ ಕೇಳಿ.

(ಗೊಂದಲ)

ಶ್ರೀ ಅರ್.ವಿ.ದೇಶಪಾಂಡೆ : ರೇವಣ್ಣನವರು ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆಂದು ಹೇಳುತ್ತಿದ್ದೇವೆ. ಅದರಲ್ಲಿ ಸತ್ಯವಿರಬೇಕು. ಅವರು ಧೈರ್ಯವಾಗಿ ಮಾಡಿರುವ ಕೆಲಸವನ್ನು ಒಪ್ಪಿಕೊಳ್ಳುತ್ತಿದ್ದಾರೆ.

(ಗೊಂದಲ)

ಶ್ರೀ ಎನ್.ಚೆಲುವರಾಯಸ್ವಾಮಿ : ಉಪಾಧ್ಯಕ್ಷರು ಒಳ್ಳೆಯವರಿದ್ದಾರೆ, ನಿಧಾನವಾಗಿ ಮಾತನಾಡಿ. ನಾವು ಒಂದೆರಡು ಗಂಟೆಗಳಲ್ಲಿ ಉತ್ತರ ಕೊಡಿಸುತ್ತೇವೆ. ನನಗೆ ಗೊತ್ತಿದೆ ಚೆನ್ನಾಗಿ, ನಾನು ನೋಡಿದ್ದೇನೆ. ಇವತ್ತು ಈ ಸಮ್ಮಿಶ್ರ ಸರ್ಕಾರದಲ್ಲಿ ಹೈದರಾಬಾದ್ ಕರ್ನಾಟಕ, ಬಾಂಬೆ ಕರ್ನಾಟಕಕ್ಕೆ ಕೊಟ್ಟಿರುವ ಒತ್ತನ್ನು 60 ವರ್ಷಗಳಲ್ಲಿ ಯಾರೂ ಕೊಟ್ಟಿರಲಿಲ್ಲ. ಅದನ್ನು ಅರ್ಥ ಮಾಡಿಕೊಳ್ಳಿ, ಸುಮ್ಮನೆ ಏನೇನೋ ಮಾತನಾಡುತ್ತೀರಿ.

ಶ್ರೀ ಹೆಚ್.ಡಿ.ರೇವಣ್ಣ :ಈಗ ಮಾನ್ಯ ಉಪಾಧ್ಯಕ್ಷರೇ,

ಶ್ರೀ ಎನ್.ಚೆಲುವರಾಯಸ್ವಾಮಿ :ಹಾಸನದಲ್ಲಿ ಇವತ್ತಿನದಿವಸ ರೇವಣ್ಣ ನವರೇ ಮಾಡುತ್ತಿಲ್ಲ. ಹಿಂದೆ ನೀವು ಮಾಡಿದ್ದೀರಿ. ಈ ಹಾಸನಕ್ಕೆ ಏನಾಗಿದೆ, ವಿಶೇಷವಾಗಿ ಶ್ರೀಕಂಠಯ್ಯನವರು ನೀವು ಬಂದಾಗಲೂ ಮೂವ್ ಮಾಡುತ್ತೀರಾ, ರೇವಣ್ಣನವರು ಬಂದಾಗಲೂ ಮಾಡುತ್ತಾರೆ. ಇದೇನು ಹೊಸದಲ್ಲ. ರೇವಣ್ಣನವರು ಸ್ವಲ್ಪ ಜಾಸ್ತಿ ಮಾಡುತ್ತಿದ್ದಾರೆ. ಮಂಡ್ಯಕ್ಕೆ ನಾವು ಈ ರೀತಿಯಾಗಿ ತಾರತಮ್ಯ ಮಾಡಿಲ್ಲ ಬಿಡಿ.

(ಗೊಂದಲ)

ಶ್ರೀ ಬಿ.ಶಿವರಾಂ : ಈಗ ರಾಯರೆಡ್ಡಿಯವರು ಹೇಳುತ್ತಿರುವುದು ನೀವು ಮಾಡಿರುವ ಕೆಲಸಗಳ ಸಾಧನೆಯ ಬಗ್ಗೆಯೇ.

ಶ್ರೀ ಎನ್. ಚೆಲುವರಾಯಸ್ವಾಮಿ : ದೇಶಪಾಂಡೆಯವರು ರಾಜಕೀಯಕ್ಕೆ ಬಂದಾಗಿನಿಂದ ಮಂತ್ರಿಯಾಗಿದ್ದಾರೆ. ನಿಮ್ಮಲ್ಲಿ ಯಾರು ಮಾಡಬೇಡ ಎಂದಿದ್ದವರು? ..ಹುಬ್ಬಳ್ಳಿಗೆ ಒಂದು ಫ್ಯಾಕ್ಟರಿ ತೆಗೆದುಕೊಂಡು ಹೋಗಿ.

ಶ್ರೀ ಆರ್.ವಿ.ದೇಶಪಾಂಡೆ : ರೇವಣ್ಣನವರಿಂದ ಒಳ್ಳೆಯ ಕೆಲಸ ಆಗಿದೆ. ಬಾಗಲಕೋಟೆಯಲ್ಲಿ ಒಳ್ಳೆಯ ಕೆಲಸ ಆಗಿವೆ. ಆದರೆ ಕೆಲವು ಕಡೆ ತಾವು ನೋಡಿ, ನಾನು ಸಹ ನಾಲ್ಕೈದು ಬಾರಿ ಹೇಳಿದ್ದೇನೆ. ಕೆಲವು ರಸ್ತೆಗಳು ನೋಡಿ, especially ಮಲೆನಾಡು ಪ್ರದೇಶಗಳಲ್ಲಿ heavy rainfall ಇರುವುದರಿಂದ ಕಳೆದ ವರ್ಷ ರಸ್ತೆಗಳು ಕೊರೆದುಕೊಂಡು ಹೋಗಿವೆ. Maintenance package ನವರು ಏನೂ ಮಾಡಲಿಲ್ಲ. ಈ ವರ್ಷ ಏನು ಪರಿಸ್ಥಿತಿ ಆಗಿದೆ ಹೋಗಿ ನೋಡಿ. Entire Malnad roads ಹೇಗಿವೆ ನೋಡಿ? ಎಲ್ಲಾ ರಸ್ತೆಗಳು ಹಾಳಾಗಿವೆ. ನಾನು ನಿಮ್ಮನ್ನು ಟೀಕಿಸುತ್ತಿಲ್ಲ. ತಾವು ಬೇಕಾದರೆ ತಮ್ಮ ಅಧಿಕಾರಿಗಳನ್ನು ಕಳುಹಿಸಿ, ತಮಗೂ ಹತ್ತು ಬಾರಿ ಹೇಳಿದ್ದೇನೆ.

ಶ್ರೀ ಹೆಚ್.ಡಿ.ರೇವಣ್ಣ : ದೇಶಪಾಂಡೆಯವರು ಹೇಳುವುದು ನಿಜ, ನಾನು ಒಪ್ಪುತ್ತೇನೆ, ಏಕೆಂದರೆ ಉತ್ತರ ಕರ್ನಾಟಕದಲ್ಲಿ ಕಾರವಾರ, ಉಡುಪಿ, ಮಂಗಳೂರು ಜಿಲ್ಲೆಗಳಿರಬಹುದು, ಈ ಭಾಗಗಳಲ್ಲಿ ಕೆಲವು ರಸ್ತೆಗಳಿರಬಹುದು. ನಾನು ಈ ಸಾರಿ ಆದಷ್ಟು State Highway packageನಲ್ಲಿ ಆದಷ್ಟು ಒಳ್ಳೆಯ ಹಿಂದಿನ ಕಾಮಗಾರಿಯನ್ನು ಈಗಿನ ಕಾಮಗಾರಿಯನ್ನು ನೋಡಿ. ಈಗ ರಾಯರೆಡ್ಡಿಯವರು ಹಿಂದಿನ 5 ವರ್ಷಗಳ ಸರ್ಕಾರಕ್ಕಿಂತ ಹೆಚ್ಚಾಗಿ ದುಡ್ಡನ್ನು ನಮ್ಮ ಕಾಲದಲ್ಲಿ ತೆಗೆದುಕೊಂಡಿದ್ದಾರೆ. ಬೇಕಾದರೆ ತೆಗೆದು ನೋಡಲಿ, ಇಲ್ಲವೆಂದರೆ 5 ವರ್ಷಗಳಿಗಿಂತ ನಾವೇನಾದರೂ ಹೆಚ್ಚಾಗಿ ದುಡ್ಡು ಕೊಟ್ಟಿಲ್ಲವೆಂದರೆ ಅವರೇನು ಹೇಳುತ್ತಾರೋ ಅದಕ್ಕೆ ನಾನು ಭಾಗಿಯಾಗುತ್ತೇನೆ.

ಶ್ರಿ ಎನ್. ಚೆಲುವರಾಯಸ್ವಾಮಿ : ರೇವಣ್ಣನವರೇ, 300 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿರುವುದರ ಬಗ್ಗೆ ಹೇಳಿ. ಹಿಂದಿನ ಸರ್ಕಾರ ಎಷ್ಟು

ಕೊಟ್ಟಿದ್ದರು? ಲೋಕೋಪಯೋಗಿ ಸಚಿವರಾಗಿ ತಮ್ಮಲ್ಲಿ ಮಾಹಿತಿ ಇದೆಯೆಲ್ಲಾ ಹೇಳಿ.

ಶ್ರೀ ಹೆಚ್.ಡಿ.ರೇವಣ್ಣ : ನಾವು 300–00 ಕೋಟಿ ರು.ಗಳನ್ನು ಕೊಟ್ಟಿದ್ದೇವೆ. ಹಿಂದಿನ ಮೂರು ವರ್ಷಗಳಲ್ಲಿ ಕೇವಲ 7.00 ಕೋಟಿ ರೂ.ಗಳನ್ನು ಕೊಟ್ಟಿದ್ದರು.

ಶ್ರೀ ಬಸವರಾಜು ರಾಯರೆಡ್ಡಿ :ರೇವಣ್ಣನವರೇ ನನ್ನನ್ನು ಮಾತನಾಡಲಿಕ್ಕೆ ಬಿಡಿ.

ಶ್ರೀ ಆರ್.ವಿ.ದೇಶಪಾಂಡೆ : ರೇವಣ್ಣನವರು 300.00 ಕೋಟಿ ರೂ.ಗಳನ್ನು ಕೊಟ್ಟಿರಬಹುದು. ಆ ಸಮಯದಲ್ಲಿ ಆ ಹಣ.. ಮಂಡ್ಯ ಪ್ಯಾಕೇಜ್..

(ಗೊಂದಲ)

ಶ್ರೀ ಎನ್.ಚೆಲುವರಾಯಸ್ವಾಮಿ : 2001 ರಲ್ಲಿ ಪ್ಯಾಕೇಜ್ ಸ್ಟಾರ್ಟ್ ಆಗಿದ್ದು 2004 ರಲ್ಲಿ ಆ ಪ್ಯಾಕೇಜ್ ಮುಗಿಯಬೇಕಾಗಿತ್ತು. ಮೂರು ವರ್ಷಕ್ಕೆ 7.00 ಕೋಟಿ ರೂ.ಗಳನ್ನು ಕೊಟ್ಟಿದ್ದರು. ಈಗ ಅದಕ್ಕೆ ಒಂದೇ ಟೆಂಡರ್ ಕರೆದಿದ್ದು, ಎರಡನೇ ಟೆಂಡರ್ ಕರೆದಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ : ಈಗ ನಿಮಗೆ ಸುವರ್ಣ ಕಾಲ. ಎಸ್.ಎಂ.ಕೃಷ್ಣರವರ ಕಾಲದಲ್ಲಿ ನಿಮಗೆ ಸುವರ್ಣ ಕಾಲವಿತ್ತು.

ಶ್ರೀ ಹೆಚ್.ಡಿ.ರೇವಣ್ಣ : ನಮ್ಮ ಹಿರಿಯ ನಾಯಕರು ದೇಶಪಾಂಡೆ ಸಾಹೇಬರಿಗೆ ಎಲ್ಲಾ ಕಾಲದಲ್ಲಿಯೂ ಸುವರ್ಣ ಕಾಲ ಇದ್ದ ಹಾಗೆ.

ಶ್ರಿ ಎನ್.ಚೆಲುವರಾಯಸ್ವಾಮಿ : ದೇವೇಗೌಡರ ಕಾಲದಲ್ಲಿಯೂ ಸುವರ್ಣ ಕಾಲ, ಜೆ.ಹೆಚ್.ಪಟೇಲ್, ಎಸ್.ಎಂ.ಕೃಷ್ಣರವರ ಕಾಲದಲ್ಲಿ, ಸದಾ ಸುವರ್ಣ ಕಾಲವನ್ನು ಅನುಭವಿಸಿದವರಲ್ಲಿ ಈ ಸದನದಲ್ಲಿ ದೇಶಪಾಂಡೆಯವರು ಒಬ್ಬರೇ.

ಶ್ರೀ ಬಸವರಾಜ ರಾಯರೆಡ್ಡಿ : ನಾನೀಗಾಗಲೇ ಹೇಳುತ್ತಿದ್ದೆ. ಈ KRDCL ಬ್ರಿಡ್ಜಸ್‌ನಲ್ಲಿ 561 crores, North Karnataka-160. crores. South-400 Crores. Sub division, division ಬಗ್ಗೆ ತಾವು ಹೇಳಿದಿರಿ, ಸಬ್ ಡಿವಿಷನ್ ಹೇಗಾಗುತ್ತದೆ ಉಪಾಧ್ಯಕ್ಷರೇ, work load ಎಲ್ಲಿ ಜಾಸ್ತಿಯಾಗುತ್ತದೆ, ಅಲ್ಲಿ ಸಬ್ ಡಿವಿಷನ್ಸ್ ಜಾಸ್ತಿಯಾಗುತ್ತದೆ. ಸುಮ್ಮ ಸುಮ್ಮನೆ ಸಬ್ ಡಿವಿಷನ್ಸ್ ತೆಗೆಯಲಿಕ್ಕಾಗುತ್ತದೆಯೇ? South ನಲ್ಲಿ 954.00 crores ಇರುವುದರಿಂದ ಸಬ್ ಡಿವಿಷನ್ಸ್ ಜಾಸ್ತಿ. ಇಲ್ಲೇ ಇದೆ ನೋಡಿ. ಸರ್ಕಾರ ಕೊಟ್ಟಿರುವಂಥ Appendix-E ನಲ್ಲಿ ಎಷ್ಟು ಇದೆ ಎಂದು ಇದರಲ್ಲಿದೆ ನೋಡಿ. 95,333 Lakhs ಅಂದರೆ ಎಷ್ಟಾಯಿತು South 953 ಕೋಟಿ ರೂ.ಗಳು ಉತ್ತರ ವಲಯ, 32,564 lakhs ಅಂದರೆ 325 crores.

ಶ್ರೀ ಹೆಚ್.ಡಿ.ರೇವಣ್ಣ : ಕಳೆದ 5 ವರ್ಷಗಳಲ್ಲಿ ರಸ್ತೆ ನಿಗಮದಲ್ಲಿ 100 ಕೋಟಿ ರೂಪಾಯಿಗಳನ್ನು ಕೇವಲ ಸೇತುವೆಗಳಿಗೆ ಮಾತ್ರ ಖರ್ಚು ಮಾಡಿದ್ದು. ಈ ವರ್ಷ 710 ಕೋಟಿ ರೂಪಾಯಿಗಳನ್ನು ರಸ್ತೆ ಅಭಿವೃದ್ಧಿಗಾಗಿ ಮೀಸಲಿಟ್ಟಿದ್ದೇವೆ. ಈಗ 30 ತಿಂಗಳುಗಳಲ್ಲಿ 710 ಕೋಟಿ ರೂಪಾಯಿಗಳನ್ನು ರಸ್ತೆಗೆ ತೆಗೆದುಕೊಂಡಿದ್ದೇವೆ. ಅವುಗಳನ್ನು ಎಲ್ಲೆಲ್ಲಿ ತೆಗೆದುಕೊಂಡಿದ್ದೇವೆಂಬುದನ್ನು ಬೇಕಾದರೆ ನಾಳೆ ನಾನು ನಿಮಗೆ ಉತ್ತರ ಕೊಡುವಂತಹ ಸಂದರ್ಭದಲ್ಲಿ ನಿಮಗೆ ಕೊಡುತ್ತೇನೆ. 710 ಕೋಟಿ ರೂಪಾಯಿಗಳ ಕೆಲಸಗಳನ್ನು ಎಲ್ಲೆಲ್ಲಿ ತೆಗೆದುಕೊಂಡಿದ್ದೇವೆ, ಯಾವ್ಯಾವ ಭಾಗಗಳಲ್ಲಿ ಎಷ್ಟೆಷ್ಟು ಎಂಬುದನ್ನು sectorwise ಚರ್ಚೆ ಮಾಡೋಣ.

ಶ್ರೀ ಬಸವರಾಜ ರಾಯರೆಡ್ಡಿ : ಪ್ರಕಾಶ್‌ರವರೆ, ದಯಮಾಡಿ ಗಮನಹರಿಸಿ. Appendix-E, part-2 ನಲ್ಲಿ ಇವು ಹೊಸ ಕೆಲಸಗಳು. ಇದು spill over works. ಈ ಹೊಸ ಕೆಲಸದಲ್ಲಿ total release is Rs. 45 Crores. 45 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. 45 ಕೋಟಿ ರೂಪಾಯಿಗಳಲ್ಲಿ South 42 ಕೋಟಿ 46 ಲಕ್ಷ, North ಗೆ 2 ಕೋಟಿ 44 ಲಕ್ಷ ರೂಪಾಯಿಗಳು.

ಶ್ರೀ ಹೆಚ್.ಡಿ.ರೇವಣ್ಣ:– ಸರ್, ನಾನು ಇದರ ಬಗ್ಗೆ ಹೇಳುತ್ತೇನೆ. ಸ್ವಲ್ಪ ಯೀಲ್ಡ್ ಆಗಿ. ನೀವು ಯಾವುದನ್ನೋ ಇಟ್ಟುಕೊಂಡು ಪ್ರಸ್ತಾಪಿಸಬೇಡಿ. ಅದನ್ನು ಸ್ವಲ್ಪ ತೆಗೆದು ಓದಿ. ರಾಯರೆಡ್ಡಿಯವರೆ, ಅದ್ಯಾವುದು ಎಂಬುದನ್ನು ದಯಮಾಡಿ ಆ ಪುಸ್ತಕದಲ್ಲಿರುವುದನ್ನು ಹೇಳಬೇಕಾಗುತ್ತದೆ. District Court ಅನ್ನು shift ಮಾಡುತ್ತಿದ್ದಾರೆ. ಹಾಸನದಲ್ಲಿ ಒಂದು Medical College ಬರುತ್ತದೆ. ಅದಕ್ಕೋಸ್ಕರ, District Court shift ಆಗುತ್ತಿದೆ. ಉದಾ: ಧಾರವಾಡದಲ್ಲಿ ಒಂದು ಹೈಕೋರ್ಟ್ ಮಾಡುತ್ತಿದ್ದೇನೆ. ಅದು 200 ಕೋಟಿ ರೂಪಾಯಿಗಳ ಹೈಕೋರ್ಟ್ ಪೀಠವಾಗಿದೆ. ಗುಲ್ಬರ್ಗಾದಲ್ಲಿ ಮಾಡುತ್ತಿದ್ದೇವೆ. ನಾವೇನಾದರೂ ಬೇಡವೆಂದು ಹೇಳಿದ್ದೇವೆಯೇ? Medical College ಗೋಸ್ಕರ District Court shift ಆಗುತ್ತಿದೆ. ಅದರಲ್ಲಿ 15 ಕೋಟಿ ದುಡ್ಡು ಕೊಟ್ಟಿದ್ದಾರೆ. ಬಾಕಿಯದು ಶಿವಮೊಗ್ಗಕ್ಕೆ ಸಂಬಂಧಿಸಿದಂತೆ ಒಂದೆರಡು ವರ್ಕ್ ಇದೆ, ಕೊಟ್ಟಿದ್ದಾರೆ. Special ಆಗಿ ಏನಾದರೂ ಕೊಟ್ಟಿರುವುದು ಇದೇಯೇ? 1/3rd ಹಾಕಿ ಕೊಟ್ಟಿರುವಂತಹ ಬೇರೆ ಏನಾದರೂ ಯೋಜನೆ ಹೊಳೆನರಸೀಪುರಕ್ಕೆ ತೆಗೆದುಕೊಂಡಿದ್ದೇನೆಯೇ? ತೆಗೆದು ನೋಡಿ. ಯಾವುದೋ ಒಂದಕ್ಕೆ ಕೊಟ್ಟಿರುವುದಕ್ಕೆ ನೀವು ಹೇಳುತ್ತಿದ್ದೀರಿ ಎಂದರೆ, Court building ಅನ್ನು ನಾನು ತೆಗೆದುಕೊಂಡಿದ್ದೇನೆಯೇ? Court building ನನಗೆ ಬರುತ್ತದೆಯೇ? ನೋಡಿ, ಈಗ electronic media ಇದೆ, ಅದರಲ್ಲಿ ಬೆಳಗಾಗುವುದರೊಳಗೆ ನಿಮ್ಮ ಹೆಸರು ಬರಬೇಕೆಂದಿದ್ದರೆ, ನೀವು ಭಾಷಣ ಮಾಡಿ. ನಮ್ಮದೇನೂ ಅಭ್ಯಂತರವಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ದಯಮಾಡಿ ನಮ್ಮ ಹೆಸರನ್ನು ಬರೆಯಬೇಡಿ. ಅವರು ನನ್ನ ಹೆಸರನ್ನು ಹೇಳಿದ್ದಾರೆ. ಆದ್ದರಿಂದ, ನನ್ನ ಹೆಸರನ್ನು ನೀವು ಬರೆಯಬೇಡಿ.

ಉಪಾಧ್ಯಕ್ಷರು : ನನ್ನ advise ಏನೆಂದರೆ, ಸದ್ಯಕ್ಕೆ PWD subject ಅನ್ನು ಬಿಟ್ಟುಬಿಡಿ.

ಶ್ರೀ ಬಸವರಾಜ ರಾಯರೆಡ್ಡಿ : ಬಿಟ್ಟುಬಿಡಲೇ? ರೇವಣ್ಣ ಖುಷಿ ಏನಪ್ಪಾ? ನಾನು ಬಿಟ್ಟುಬಿಡುತ್ತೇನೆ ಮಾರಾಯ.

ಶ್ರೀ ಹೆಚ್.ಡಿ.ರೇವಣ್ಣ : ಇದನ್ನೂ ಭಾಷಣ ಮಾಡಿ, ಇಂಧನ ಇಲಾಖೆ ಬಗ್ಗೆಯೂ ಭಾಷಣ ಮಾಡಿ. ಎರಡನ್ನೂ ಮಾಡಿ. ಅದೇನಿದೆ ಎಂಬುದನ್ನು ಹೇಳಿ. ವಿಸ್ತಾರವಾಗಿ ಹೇಳಲಿ, ಚರ್ಚೆ ನಡೆಯಲಿ. ನನ್ನದೇನೂ ಅಭ್ಯಂತರವಿಲ್ಲ.

ಉಪಾಧ್ಯಕ್ಷರು : ಇಷ್ಟು detail ಆಗಿ ಹೋಗಿತ್ತಿದ್ದೀರಲ್ಲ, ನಿಮಗೆ ಗಂಟೆಗಳೂ ಸಾಲುವುದಿಲ್ಲ, ದಿನಗಳೂ ಸಾಲುವುದಿಲ್ಲ.

ಶ್ರೀ ಎಸ್. ರಾಜೇಂದ್ರನ್ : ರಾಯರೆಡ್ಡಿಯವರೆ, ಸಚಿವರು ಮಾತನಾಡುತ್ತಾ, electronic media ಇದೆಯೆಂದು ನೀವು ಮಾತನಾಡುತ್ತಿದ್ದೀರೆಂದರು. ಆದರೆ, ಮಾಧುಸ್ವಾಮಿಯವರು ಮಾತನಾಡುವ ಸಮಯದಲ್ಲಿ ಏನು ಹೇಳಿದರು ಗೊತ್ತೇ? I will move the privilege motion ಎಂದರು. ನೀವು ಇದನ್ನು ಇಷ್ಟು ಲಘುವಾಗಿ ತೆಗೆದುಕೊಂಡು ಮಾತನಾಡಿದರೆ ಹೇಗಪ್ಪಾ?

ಶ್ರೀ ಬಸವರಾಜು ರಾಯರೆಡ್ಡಿ : ನಗು ನಗುತ್ತಾ ಮಾತನಾಡುತ್ತಾ ಹೋಗಬೇಕು.

ಶ್ರೀ ಎಸ್. ರಾಜೇಂದ್ರನ್ : You must take it as a challenge in the Government. When he was uttering that word, you must challenge that word.

ಶ್ರೀ ಬಸವರಾಜ ರಾಯರೆಡ್ಡಿ : OK. ಅಧ್ಯಕ್ಷರೆ, Appendix-E ನಲ್ಲಿ ಏನೋ ಹೇಳಿದರಲ್ಲ, ಈ 42 ಕೋಟಿ ರೂಪಾಯಿಗಳಲ್ಲಿ ಕೇವಲ ಮೂರೇ ತಾಲ್ಲೂಕುಗಳಿಗೆ, ಒಂದು ರಾಮನಗರ, ಒಂದು ಹಾಸನ, ಮತ್ತೊಂದು ಶಿಕಾರಿಪುರ.

ಶ್ರೀ ಹೆಚ್.ಡಿ.ರೇವಣ್ಣ : ಹಾಸನದಲ್ಲಿ ಏನಿದೆ ಎಂಬುದನ್ನು ಹೇಳಿ ಸರ್. ದಯಮಾಡಿ ಅದನ್ನೂ ಹೇಳಿ.

ಶ್ರೀ ಬಸವರಾಜ ರಾಯರೆಡ್ಡಿ : ಹಾಸನ ಜಿಲ್ಲೆ ಎಂದು ಹೇಳಲಿಲ್ಲವೇ? ಹಾಸನದ್ದು ಹೇಳಲೇ? 42 ಕೋಟಿ ರೂಪಾಯಿಗಳಲ್ಲಿ ಹೇಳಿ ಬಿಡುತ್ತೇನೆ. ಬೆಂಗಳೂರಿನ ನೃಪತುಂಗ ರಸ್ತೆಯಲ್ಲಿರುವ ಎಂ.ಎಂ. ಕೋರ್ಟ್ ಆವರಣ 3 ಕೋಟಿ, ರಾಮನಗರ ನ್ಯಾಯಾಲಯ ಸಂಕೀರ್ಣ 200 ಲಕ್ಷ ಹಾಸನದಲ್ಲಿ ಜಿಲ್ಲಾ

ನ್ಯಾಯಾಲಯ ಸಂಕೀರ್ಣ 2ನೇ ಹಂತ 10 ಕೋಟಿ, ನಗರದ ಜಿಲ್ಲಾ ನ್ಯಾಯಾಲಯ ಸಂಕೀರ್ಣ ಲಾ ಚೇಂಬರ್ 200 ಲಕ್ಷ ಹಾಸನ ನಗರದ ಜಿಲ್ಲಾ ನ್ಯಾಯಾಲಯ ಸಂಕೀರ್ಣ ಲಾ ಚೇಂಬರ್ 2ನೇ ಬ್ಲಾಕ್ ಮತ್ತೆ 200 ಲಕ್ಷ, ಹಾಸನ ನಗರದ ಜಿಲ್ಲಾ ನ್ಯಾಯಾಲಯ ಸಂಕೀರ್ಣ ಬಾರ್ ಅಸೋಸಿಯೇಷನ್ ಕಟ್ಟಡ ನಿರ್ಮಾಣ 200 ಲಕ್ಷ ಹಾಸನ ನಗರದ ಜಿಲ್ಲಾ ನ್ಯಾಯಾಲಯ ಸಂಕೀರ್ಣವಾದ stamp vending ಮತ್ತು ಬೆರಳಚ್ಚು ಶಾಖಾ ನಿರ್ಮಾಣ 3ಲಕ್ಷ, ಹೀಗೆ ಇಲ್ಲಿ 17 ಕೋಟಿ ರೂಪಾಯಿಗಳು ಹೋಗುತ್ತದೆ. ಅದಾದ ನಂತರ, ಬೆಂಗಳೂರು ವಿಭಾಗ. ರಾಮನಗರ ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್ ರಂಗಮಂದಿರ 20 ಲಕ್ಷ, ರಾಮನಗರ ಪಟ್ಟಣದಲ್ಲಿ ಲೋಕೋಪಯೋಗಿ ಇಲಾಖೆ ಕಚೇರಿ ಕಟ್ಟಡ 150 ಲಕ್ಷ, ಮೈಸೂರು ನಗರದ ಚಾಮುಂಡಿ ಅತಿಥಿಗೃಹ ನವೀಕರಣ 5 ಲಕ್ಷ, ಅದನ್ನು ಬಿಡಿ. ಹಾಸನ ನಗರದಲ್ಲಿ ಬಾಲಕಿಯರ ಪ್ರಥಮದರ್ಜೆ ಕಾಲೇಜು ಕಟ್ಟಡ 200 ಲಕ್ಷ, ಹಾಸನ ನಗರದ ವಾಣಿ ವಿಲಾಸ ಶಾಲಾ ಆವರಣದ ಜ್ಯೂನಿಯರ್ ಕಾಲೇಜು ಕಟ್ಟಡ 150 ಲಕ್ಷ, ಹಾಸನ ನಗರದ ಚಿಪ್ಪನ ಕಟ್ಟೆ ಬಡಾವಣೆಯಲ್ಲಿ ಜ್ಯೂನಿಯರ್ ಕಾಲೇಜು ಕಟ್ಟಡ 275 ಲಕ್ಷ, ಹಾಸನ ನಗರದ ಬಾಲಕಿಯರ ಗೃಹ ವಿಜ್ಞಾನ ಕಾಲೇಜು 150 ಲಕ್ಷ, ಹಾಸನ ನಗರದ ಜಿಲ್ಲಾ ಆರೋಗ್ಯ ಕಟ್ಟಡ 120 ಲಕ್ಷ, ಹಾಸನ ನಗರದ ಜಿಲ್ಲಾ ಮಟ್ಟದ ಕಚೇರಿಗಳ ಸಂಕೀರ್ಣ....

ಒಬ್ಬ ಮಾನ್ಯ ಸದಸ್ಯರು : ಎಲ್ಲಾ ಹಾಸನಮಯ.

ಶ್ರೀ ಬಸವರಾಜ ರಾಯರೆಡ್ಡಿ : ಶಿಕಾರಿಪುರದ ಕಚೇರಿ ನಿರ್ಮಾಣ 200 ಲಕ್ಷ,

ಒಬ್ಬ ಮಾನ್ಯ ಸದಸ್ಯರು : ಎಲ್ಲಾ ಬಜೆಟ್ಟೂ ಹಾಸನಮಯ.

ಶ್ರೀ ಕೆ.ಅಭಯಚಂದ್ರ : ಬೇರೆಯವರು ಶಾಸಕರಲ್ಲವೇ?

ಶ್ರೀ ಬಸವರಾಜ ರಾಯರೆಡ್ಡಿ : ಹಾಸನದಲ್ಲಿ ಪೊಲೀಸ್ ಅಧೀಕ್ಷಕರ ಕಚೇರಿ ಕಟ್ಟಡಕ್ಕೆ ಹೆಚ್ಚುವರಿಯಾಗಿ 50 ಲಕ್ಷ, ಹೊಳೆನರಸೀಪುರ ತಾಲ್ಲೂಕು ಪ್ರಥಮ ದರ್ಜೆ ಕಾಲೇಜು ಕಟ್ಟಡ 200 ಲಕ್ಷ, ಶಿಕಾರಿಪುರದಲ್ಲಿ ಪಶು ಸಂಗೋಪನೆ ಕಚೇರಿ 25 ಲಕ್ಷ, ಶಿರಾಳಕೊಪ್ಪದಲ್ಲಿ ಪಶು ಸಂಗೋಪನೆ ಸಹಾಯಕ ನಿರ್ದೇಶಕರ ಕಚೇರಿ 25 ಲಕ್ಷ,

ಒಬ್ಬ ಮಾನ್ಯ ಸದಸ್ಯರು : ಎಲ್ಲಾ ಹಾಸನಮಯ, ಬೇಡಿಕೆಗಳೆಲ್ಲವೂ ಹಾಸನಕ್ಕೇ.

ಶ್ರೀ ಬಸವರಾಜ ರಾಯರೆಡ್ಡಿ : ಪ್ರಕಾಶ್‌ರವರೆ, ಉತ್ತರ ಕರ್ನಾಟಕಕ್ಕೆ ಎರಡು ಕೋಟಿ ಮಾತ್ರ ಕೊಟ್ಟಿದ್ದಾರೆ. 2 ಕೋಟಿ ರೂಪಾಯಿಗಳಲ್ಲಿ Construction of PWD special sub division office building at Dharwad-30 lakh, Karwar, building at Sirsi-17 lakh, construction of

PWD special sub division building, Belgaum-30 lakh, ಗುಲ್ಬರ್ಗಕ್ಕೆ 30 ಲಕ್ಷ, ಗಜೇಂದ್ರಘಡದಲ್ಲಿ ಒಂದು ಐಟಿಐ ಕಾಲೇಜಿಗೆ 20 ಲಕ್ಷ ಬಿಟ್ಟರೆ, 2 ಕೋಟಿ ರೂಪಾಯಿಗಳಲ್ಲಿ chapter close ಆಗುತ್ತದೆ.

ಶ್ರೀ ಹೆಚ್.ಡಿ.ರೇವಣ್ಣ : ರಾಯರೆಡ್ಡಿಯವರು ಹೇಳುತ್ತಾರೆ. ಹದಿಮೂರುವರೆ ಕೋಟಿ ರೂಪಾಯಿಗಳನ್ನು extra ಕೊಟ್ಟಿದ್ದರಲ್ಲ, ಅದರಲ್ಲಿ 1/3rd ಹಾಕಿ ನಾವೇನು ಮಾಡಿದ್ದೇವೆಂದರೆ, Medical College ಕಟ್ಟಡ ಕಟ್ಟುವುದಕ್ಕೆ, ಎರಡು ಜ್ಯೂನಿಯರ್ ಕಾಲೇಜುಗಳನ್ನು shift ಮಾಡಿದ್ದೇವೆ. ಕೋರ್ಟ್ ಬಿಲ್ಡಿಂಗ್ ಅನ್ನು shift ಮಾಡಿದ್ದೇವೆ. ಆ ಜಾಗಕ್ಕೋಸ್ಕರ ಹಾಸನದಲ್ಲಿ Medical College ನಡೆಯುತ್ತಿದೆಯಲ್ಲ, ಆಸ್ಪತ್ರೆ ಕಟ್ಟಡಕ್ಕೆ shift ಮಾಡಿರುವ ಜಾಗಕ್ಕೆ ಕೊಟ್ಟಿದ್ದೇವೆಯೇ ಹೊರತು ಹೊಳೆನರಸೀಪುರಕ್ಕೆ special ಆಗಿ ಎಲ್ಲವನ್ನೂ ತೆಗೆದುಕೊಂಡು ಹೋಗಿಲ್ಲ. ಬೇಕಾದರೆ, ನೀವು ಅದನ್ನು ತೆಗೆದು ಓದಿ. ಈಗ ರಾಜ್ಯದಲ್ಲಿ ಆರು ಕಡೆಗಳಲ್ಲಿ Medical College ಗಳನ್ನು ಮಾಡುತ್ತಿದ್ದಾರಲ್ಲ, ನಾವು ಮಾಡುತ್ತಿದ್ದೇವೆಯೇ? ಇದು Medical College ಗೋಸ್ಕರ shift ಮಾಡಿರುವ ಜಾಗವಾಗಿದೆ. ನೋಡಿ ಸ್ವಾಮಿ, ಏನಾಗಿದೆ ಎಂಬುದರ ಬಗ್ಗೆ ಚರ್ಚೆ ಮಾಡೋಣ. ಕಳೆದ ಐದು ವರ್ಷಗಳಲ್ಲಿ, ನನ್ನದೂ 3 ವರ್ಷದ್ದು ಚರ್ಚೆ ಮಾಡಿ.

ಶ್ರೀ ಕೆ. ಅಭಯಚಂದ್ರ : ಬೇರೆ ಶಾಸಕರು ಈ ರಾಜ್ಯಕ್ಕೆ ಏನು ಅನ್ಯಾಯ ಮಾಡಿದ್ದಾರೆ?

ಶ್ರೀ ಬಸವರಾಜ ರಾಯರೆಡ್ಡಿ : ಅಧ್ಯಕ್ಷರೆ, ನಾನು ಏನು ಕೇಳುತ್ತಿದ್ದೇನೆಂದರೆ, ಈ ಎಲ್ಲಾ ವಿಚಾರಗಳಲ್ಲಿ ಇಷ್ಟೊಂದು ತಾರತಮ್ಯ ಉತ್ತರ ಕರ್ನಾಟಕಕ್ಕೆ ಆಗಿರಲಿಲ್ಲ. ಇದು ಸರಿಯಾದುದಲ್ಲ. ಇದು ಸಂವಿಧಾನಕ್ಕೆ ಮಾಡಿರುವ ಅಪಚಾರ. ನಾನು ಮಾನ್ಯ ರೇವಣ್ಣನವರಿಗೆ ಹೇಳುವುದಿಷ್ಟೆ, ಈ ತಾರತಮ್ಯ ಬಿಡಿ. ನೀವು ಉತ್ತರ ಕರ್ನಾಟಕಕ್ಕೆ ಬನ್ನಿ. ಅದು ಎಷ್ಟು backward ಆಗಿದೆ ಎಂಬುದನ್ನು ನೋಡಿ. ಐತಿಹಾಸಿಕವಾಗಿ ಅತ್ಯಂತ ಹಿಂದುಳಿದಿರುವ ಭಾಗ ಅದಾಗಿದೆ. ಅದರಲ್ಲಿ ಹೈದರಬಾದ್-ಕರ್ನಾಟಕ ಪ್ರದೇಶದಲ್ಲಿ ಸರಿಯಾದ ರಸ್ತೆಗಳಿಲ್ಲ, ಕಟ್ಟಡಗಳಿಲ್ಲ. ಅಲ್ಲಿಗೆ ಹೆಚ್ಚಿಗೆ ಹಣವಿಲ್ಲ. ಬಾಂಬೆ-ಕರ್ನಾಟಕದ ಪರಿಸ್ಥಿತಿ ಅದಕ್ಕಿಂತಲೂ ವಿಭಿನ್ನವಾಗಿಲ್ಲ. ಅಧ್ಯಕ್ಷರೆ, ತಾರತಮ್ಯವಾದರೂ ಎಷ್ಟಿರಬೇಕು? ಹಳೇ ಮೈಸೂರಿಗೆ 60% ಮಾಡಿ, ನಮ್ಮ ಭಾಗಕ್ಕೆ ಬೇಕಾದರೆ 40% ಕೊಟ್ಟರೆ, ಒಪ್ಪಿಕೊಳ್ಳೋಣ. ಆದರೆ, ಇಲ್ಲಿ ಹಾಗಿಲ್ಲ. ನಮಗೆ 25%, ಇವರಿಗೆ 75%. ಆದುದರಿಂದ, ಮಾನ್ಯ ಅಧ್ಯಕ್ಷರೆ, ಪ್ರಕಾಶ್‌ರವರೆ, ಇದರಿಂದ ಸ್ಪಷ್ಟವಾಗುತ್ತದೆ. ಇಲ್ಲಿ ಸ್ಪಷ್ಟವಾಗಿದೆ.

ಶ್ರೀ ಬಿ.ಆರ್.ಪಾಟೀಲ್ : ಪ್ರತಿಯೊಂದು ಹಂತದಲ್ಲೂ ತಾವು ಈ ರೀತಿ ಎದ್ದು ನಿಂತರೆ ಹೇಗೆ? ಅವರು ಮಾತನಾಡುವುದಾದರೂ ಹೇಗೆ? ರಾಯರೆಡ್ಡಿಯವರು ಮಾತನಾಡಲಿ, ಬಿಡಿ.

ಶ್ರೀ ಪಿ.ಟಿ.ಪರಮೇಶ್ವರ್ ನಾಯಕ್ : ದಯಮಾಡಿ ಮಂತ್ರಿಗಳು ಸಹನೆಯಿಂದ ಕೇಳಿ ಅನಂತರ ನಿರಾಯಾಸವಾಗಿ ಉತ್ತರ ಕೊಡಿ. ಮೊದಲು ಅವರಿಗೆ ಹೇಳಲು ಬಿಡಿ. ಪದೇಪದೇ ತಾವು interfere ಆದರೆ ಹೇಗೆ? ತಾಳ್ಮೆಯಿಂದ ಕೇಳಿ ಸರ್. ಕೇಳಿದ ನಂತರ ಉತ್ತರ ಕೊಡಿ. ಮಾತನಾಡಲು ಅವರಿಗೆ ಬಿಡಿ. ಸದನಕ್ಕೆ ವಾಸ್ತವಾಂಶವನ್ನು ಹೇಳಬೇಕಲ್ಲ.

(ಗೊಂದಲ)

ಶ್ರೀ ಬಿ.ಆರ್.ಪಾಟೀಲ್ : ದಯಮಾಡಿ ಸ್ವಲ್ಪ ಕುಳಿತುಕೊಳ್ಳಿ. ಸಹನೆಯಿಂದ ಕೇಳಿ. ನೀವೇನು ಮಾಡಿದ್ದೀರೆಂದು ರಾಜ್ಯಕ್ಕೆ ಗೊತ್ತಿದೆ.

ಶ್ರೀ ಹೆಚ್.ಡಿ.ರೇವಣ್ಣ : ನಾನು ಬಂದ ನಂತರ ನಬಾರ್ಡ್‌ನಲ್ಲಿ ಕಟ್ಟಡಗಳಿಗ ಎಷ್ಟು ಕೊಟ್ಟಿದ್ದೇನೆ ಎಂಬುದನ್ನು ತೆಗೆದು ನೋಡಿ. 500 ಕೋಟಿ ರೂಪಾಯಿಗಳನ್ನು ಕಟ್ಟಡಗಳಿಗೆ ಕೊಟ್ಟಿದ್ದೇನಲ್ಲ ಮತ್ತು ರಸ್ತೆಗಳಿಗೆ ನಬಾರ್ಡ್ ಹಣದಿಂದ ಕೊಟ್ಟಿದ್ದೇನೆ. ಅದರಲ್ಲೂ ಏನಾಯಿತು ಎಂಬುದನ್ನು ಬೇಕಾದರೆ ಹೇಳಲಿ. ಕೊಟ್ಟಿಲ್ಲವೆಂದು ಹೇಳುತ್ತಾರಲ್ಲ. ಬೇಕಾದರೆ ಹೇಳಲಿ.

ಶ್ರೀ ಬಸವರಾಜ ರಾಯರೆಡ್ಡಿ : ನಾನು ಎಲ್ಲೆಲ್ಲಿ ತಾರತಮ್ಯವಾಗಿದೆ ಎಂದು ಹೇಳಿದೇನೆ. ನಬಾರ್ಡ್‌ನಲ್ಲಿ ಏಕೆ ತಾರತಮ್ಯ ಮಾಡಲಿಲ್ಲವೆಂದು ಹೇಳಿಬಿಡುತ್ತೇನೆ. ನಬಾರ್ಡ್‌ನಲ್ಲಿ ಹೆಚ್ಚುಕಮ್ಮಿ ಸಮಾನಾಂತರವಾಗಿ ಕೊಟ್ಟಿದ್ದಾರೆ. ಇದಕ್ಕೆ ಕಾರಣ ನಬಾರ್ಡ್ ಒಪ್ಪುವುದಿಲ್ಲ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಗೊತ್ತಿದೆ. ಎಲ್ಲಾ ಪ್ರದೇಶಗಳಿಗೂ ನೀವು ಸಮಾನಾಂತರವಾಗಿ ಹಂಚದಿದ್ದರೆ ನಬಾರ್ಡ್ ನಿಮಗೆ ಸಾಲ ಕೊಡುವುದಿಲ್ಲ. National Agricultural Bank ನವರು ಬಂದು scrutiny ಮಾಡುತ್ತಾರೆ.

ಶ್ರೀ ಹೆಚ್.ಡಿ.ರೇವಣ್ಣ : ಅವರು ಹೇಳಿದಕ್ಕೆ, ಒಂದು ನಿಮಿಷ ಯಿಲ್ಡ್ ಆಗಿ.

ಶ್ರೀ ಬಿ.ಆರ್.ಪಾಟೀಲ್ : ಇದೇನು ಸದನವೇ? ಒಬ್ಬ ಸದಸ್ಯರು ಮಾತನಾಡುತ್ತಾರೆ. ಈ ರೀತಿ ಮಂತ್ರಿಗಳು ಎದ್ದು ನಿಂತು ಮಾತನಾಡಿದರೆ ಸದಸ್ಯರು ಯಾವ ರೀತಿಯಾಗಿ ಮಾತನಾಡಬೇಕು? ·ಅವರು ಉತ್ತರ ಕೊಡಬೇಕಾದರೆ ಕೊಡಲಿ.

(ಗೊಂದಲ)

ಶ್ರೀ ದಿನೇಶ್‌ಗೂಡುರಾವ್ : ತಾವು ಉತ್ತರ ಕೊಡಬೇಕಾದರೆ ಕೊಡಿ. ಏಕೆ ಪದೇ ಪದೇ ಮಧ್ಯೆ ಎದ್ದೇಳುತ್ತೀರಿ.

ಶ್ರೀ ಹೆಚ್.ಡಿ.ರೇವಣ್ಣ : ಎರಡು ನಿಮಿಷ.

ಶ್ರೀ ಬಿ.ಟಿ.ಪರಮೇಶ್ವರ ನಾಯಕ್ : ತಾವು ಎರಡು ನಿಮಿಷ ಅಲ್ಲದಿದ್ದರೆ ಎರಡು ಗಂಟೆ ಉತ್ತರ ಕೊಡಿ. ಈ ಅವರು ಮಾತನಾಡಲು ಬಿಡಿ. ಮದ್ಯೆ ಏಕೆ ಪ್ರವೇಶ ಮಾಡುತ್ತೀರಿ?

(ಗೊಂದಲ)

ಶ್ರೀ ಬಿ.ಆರ್.ಪಾಟೀಲ್ : ಇದು ಸಭೆಗೆ ಭೂಷಣಾ ತರತಕ್ಕದಲ್ಲ. ಒಬ್ಬ ಸದಸ್ಯರು ತಮಗೆ ಸಿಕ್ಕಿದಂತ ಸಮಯವನ್ನು ಉಪಯೋಗ ಮಾಡಿಕೊಂಡು ಏನೆಲ್ಲಾ ಹೇಳಬೇಕಾದ್ದು ಅವರ ಹಕ್ಕು. ನೀವು ಇಂಥಹದ್ದೇ ಹೇಳಿ, 3 ವರ್ಷದ್ದು, 5 ವರ್ಷದ್ದು ಹೇಳಿ ಎಂದು ಮಂತ್ರಿಯವರು ಒಬ್ಬರು ಸದಸ್ಯರಿಗೆ ಹೇಳುವುದು ತರುವುದಿಲ್ಲ. ಇದರಿಂದ ಚರ್ಚೆಗೆ ಅರ್ಥ ಬರುವುದಿಲ್ಲ. ನೀವು ಉತ್ತರ ಕೊಡುವಾಗ ಎಲ್ಲವನ್ನು ಕೊಡಿ.

(ಗೊಂದಲ)

ಶ್ರೀ ಕೆ.ಅಭಯಚಂದ್ರ : ಕರ್ನಾಟಕದ ಚರಿತ್ರೆಯಲ್ಲಿ ಈ ರೀತಿ ಎಂದೂ ಆಗಿಲ್ಲ. ವಿರೋಧ ಪಕ್ಷದವರನ್ನು ಬಗ್ಗುಬಡಿಯುವಂಥ ವ್ಯವಸ್ಥೆ. ಎಂದೂ ಈ ರೀತಿ ಆಗಿರಲಿಲ್ಲ.

(ಗೊಂದಲ)

ಶ್ರೀ ಎನ್. ಚಲುವರಾಯಸ್ವಾಮಿ :ತಾರತಮ್ಯದ ಬಗ್ಗೆ ಹಿಂದಿನ 10 ವರ್ಷದ ಬಗ್ಗೆಯೇ ಒಂದು ಸಮಿತಿ ಮಾಡಿ. ಯಾವ ರೀತಿ ವ್ಯತ್ಯಾಸವಾಗಿದೆ ನೋಡೋಣ. ಮುಂದೆ ಅದನ್ನಾದರೂ ಸರಿಪಡಿಸಬಹುದು.

ಶ್ರೀ ಹೆಚ್.ಡಿ.ರೇವಣ್ಣ : ಒಂದೇ ಒಂದು clarification. ನಬಾರ್ಡ್ ಗೈಡ್ ಲೈನ್ಸ್ ಇಲ್ಲದೇ ಹೆಚ್ಚುಕಮ್ಮಿಯಾದರೆ ಕೊಡುವುದಿಲ್ಲವೆಂದು ರಾಯರೆಡ್ಡಿಯವರು ಹೇಳಿದರು. ಸ್ವಲ್ಪ ಹೆಚ್ಚುಕಮ್ಮಿಯಾದರೆ ನಬಾರ್ಡ್‌ನಿಂದ ಸಾಲ ಕೊಡುವುದಿಲ್ಲವೆಂಬ ವಿಷಯವನ್ನು ಸದನದಲ್ಲಿ ಎತ್ತಿದರು. ಆದರೆ 5 ವರ್ಷದ ಹಿಂದೆ ನಬಾರ್ಡ್‌ನಲ್ಲಿ ಯಾವ್ಯಾವ ಕ್ಷೇತ್ರದಲ್ಲಿ ಎಷ್ಟೆಷ್ಟು ಕೊಟ್ಟಿದ್ದಾರೆ ಎಂದು ಹೇಳಲಿ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ನಾನು ಈಗಾಗಲೇ ಎಲ್ಲಾ ವಿಚಾರಗಳನ್ನು ಹೇಳಿದ್ದೇನೆ. ಇಷ್ಟೊಂದು ತಾರತಮ್ಯ ಉತ್ತರ ಕರ್ನಾಟಕಕ್ಕೆ ಆಗುತ್ತಿದೆ. ದಯಮಾಡಿ ಹಿರಿಯ ಮಂತ್ರಿಗಳು, ಅನುಭವಿಗಳು ಆದ ಮಾನ್ಯ ಎಂ.ಪಿ. ಪ್ರಕಾಶ್ ರವರು ಇದರ ಬಗ್ಗೆ ಗಮನ ಹರಿಸಬೇಕು. ಯಡಿಯೂರಪ್ಪನವರು ಈ ವರ್ಷ 1561 ಕೋಟಿ ರೂಪಾಯಿಯನ್ನು ಯೋಜನೆಯಲ್ಲಿ ಹೈದ್ರಾಬಾದ್ ಕರ್ನಾಟಕಕ್ಕೆ ವಿಶೇಷವಾಗಿ ಕೊಡುತ್ತಿದ್ದೀರಿ. ಅದು ಏನೇನೂ ಇಲ್ಲ. It is a big zero. ಏಕೆಂದರೆ ಉತ್ತರ ಕರ್ನಾಟಕಕ್ಕೆ ಒಂದೊಂದು ಕ್ಷೇತ್ರಕ್ಕೆ ಬರುವುದು 1 ಅಥವಾ 2 ಕೋಟಿ. ನೋಡಿ ಹಳೆ ಮೈಸೂರಿಗೆ ಎಷ್ಟೊಂದು ಹಣ ಬಂದಿದೆ?

ಶ್ರೀ ಎನ್.ಚಲುವರಾಯಸ್ವಾಮಿ : ಹಾಗಾದರೆ ಹಳೆಯ ಮೈಸೂರಿನವರು ಇಲ್ಲಿ ಯಾರು ಇರಲೇಬಾರದೇ? ನಮ್ಮನ್ನೆಲ್ಲ ಓಡಿಸಿಬಿಡಿ ನೀವೇ ಎಲ್ಲವನ್ನು ಮಾಡಿ. ಏನು ಮಾತನಾಡುತ್ತೀರಿ? ಕೆಲಸ ಹಚ್ಚಿ ಎಂದು ಹೇಳಿ ಬೇಕಾದರೆ. ಹಳೆಯ ಮೈಸೂರು ಹಳೆಯ ಮೈಸೂರು ಎಂದು ಏಕೆ ಹೇಳುತ್ತೀರಿ? ನಾವೇನು ಇಲ್ಲಿ ಊಟ ಮಾಡಲು ಬಂದಿದ್ದೇವೆಯೇ? ನಾವೂ ನಿಮ್ಮಂತ ಜನಪ್ರತಿನಿಧಿಗಳು, ಕೆಲಸ ಮಾಡುವುದಕ್ಕೇ ಬಂದಿರುವುದು. ನಿಮಗೆ ಅವಕಾಶ ಸಿಕ್ಕಿದಾಗ ಕೆಲಸ ಮಾಡಬೇಕಾಗಿತ್ತು. 40 ವರ್ಷ ಆಡಳಿತ ಮಾಡಿದರೂ ನಿಮ್ಮ ಕೈಯಲ್ಲಿ ಮಾಡಲು ಆಗಲಿಲ್ಲ.

ಶ್ರೀ ಬಸವರಾಜು ರಾಯರೆಡ್ಡಿ : ಹೊಳೆನರಸೀಪುರ, ಹಾಸನ, ಶಿಕಾರಿಪುರ, ರಾಮನಗರಕ್ಕೆ ಎಷ್ಟು ಎಂಬುದನ್ನು ನೋಡಿ. ಹಳೆಯ ಮೈಸೂರು ಎಂಬುದನ್ನು ತೆಗೆದುಬಿಡೋಣ. ಪಾಪ ಚಲುವರಾಯಸ್ವಾಮಿಯವರದ್ದೂ ಹಿಂದುಳಿದ ಕ್ಷೇತ್ರವಿರಬಹುದು, ಹೋರಾಟ ಮಾಡುತ್ತಿದ್ದಾರೆ.

ಉಪಾಧ್ಯಕ್ಷರು : ರಾಯರೆಡ್ಡಿಯವರೆ ತಾವು ಬೇಡಿಕೆಯ ಮೇಲೆ ಮಾತನಾಡುತ್ತಿದ್ದೀರಿ. ತಾವು ಅದರ ಬಗ್ಗೆಯೇ concentrate ಮಾಡಿ ಮಾತನಾಡಿ. ನಿಮಗೆ ಏನು subject ಇದೆಯೋ ಅದರ ಮೇಲೆ ಮುಂದುವರೆದು ಹೋಗಿ. ಮಧ್ಯೆಮಧ್ಯೆ ಯಿಲ್ಡ್ ಆಗಬೇಡಿ.

ಶ್ರೀ ಬಸವರಾಜ ರಾಯರೆಡ್ಡಿ : ಮಂತ್ರಿಗಳಾದರು ಸರಿಸಮಾನತೆಯಿಂದ ರಾಜ್ಯವನ್ನು ನೋಡಬೇಕು. 5–10% ವ್ಯತ್ಯಾಸವಾಗಿರುವುದನ್ನು ಸಹಿಸಬಹುದು. ಸಹಿಸೋಣ. ಉತ್ತರ ಕರ್ನಾಟಕದ ಜನತೆಗೆ ಆ ರೀತಿಯ ವಿಶಾಲ ಹೃದಯವಿದೆ. ಆದರೆ ದಯಮಾಡಿ ಇಷ್ಟೊಂದು ಅಸಮಾನತೆಯನ್ನು ಮಾಡಿದರೆ ಹೈದ್ರಾಬಾದ್ ಕರ್ನಾಟಕದ ಜನ ಪ್ರತ್ಯೇಕ ರಾಜ್ಯ ಕೇಳುವ ಪರಿಸ್ಥಿತಿ ಬರುತ್ತಿರಲಿಲ್ಲ. ಆದ್ದರಿಂದ ಈ ರೀತಿ ತಾರತಮ್ಯ ಆಗಬಾರದು.

ಶ್ರೀ ವಾಟಾಳ್ ನಾಗರಾಜ್ : ರಾಯರೆಡ್ಡಿ ಇದು ಸರಿಯಾದ ಕ್ರಮವಲ್ಲ. ಆ ಮಾತು ಸರಿಯಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ಜನರು ಆ ರೀತಿ ಕೇಳುತ್ತಿದ್ದಾರೆ ಎಂದು ಹೇಳಿದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ನೀವು ತಾರತಮ್ಯ ಆಗಿರುವ ಬಗ್ಗೆ ಕೇಳಿ. ಅದಕ್ಕೆ ನಮ್ಮ ಯಾರ ಅಭ್ಯಂತರವೂ ಇಲ್ಲ. ಆದರೆ ನೀವು ಉತ್ತರ ಕರ್ನಾಟಕ ಪ್ರತ್ಯೇಕ ಕೂಗು ಆಗಬೇಕಾಗುತ್ತಿದೆ ಎಂದರೆ ನೀವು ಆ ಹೆಸರಿನಲ್ಲಿ ಕರ್ನಾಟಕವನ್ನು ಒಡೆಯಲು ಪ್ರಯತ್ನ ಮಾಡುತ್ತಿದ್ದೀರಿ ಎಂಬ ಭಾವನೆ ಬರುತ್ತದೆ. ನೀವು ಶಾಸನ ಸಭೆಯಲ್ಲಿ ಈ ರೀತಿ ಹೇಳಬಾರದು.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ಜನರಿಗೆ ಆ ರೀತಿ ಮಾನಸಿಕವಾದ ಭಾವನೆ ಬರಬಾರದು ಎಂದು ನಾನು ಹೇಳಿದ್ದು.

ಉಪಾಧ್ಯಕ್ಷರು : ಶ್ರೀರಾಮರೆಡ್ಡಿಯವರೆ, ಅವರು ಒಪ್ಪಿಕೊಂಡಿದ್ದಾರೆ ಬಿಡಿ. ಆ ರೀತಿ ಮಾತನಾಡುವುದಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ನೀವು ತಾರತಮ್ಯದ ಬಗ್ಗೆ ಮಾತನಾಡುತ್ತಿದ್ದೀರಿ. ನಿಮಗೆ ಹಕ್ಕಿದೆ ಮಾತನಾಡಿ. ನಾವು ಬೇಡ ಎಂದು ಹೇಳುವುದಿಲ್ಲ. ಆದರೆ ಈ ಸದನದ ಜವಾಬ್ದಾರಿ ಸ್ಥಾನದಲ್ಲಿದ್ದು ಆ ರೀತಿ ಉತ್ತರ ಕರ್ನಾಟಕ ಬೇರೆಯಾಗುತ್ತದೆ ಎಂಬ ಕೂಗು ಬರುತ್ತದೆ ಎಂದು ಮಾತನಾಡತಕ್ಕದ್ದು ಸರಿಯಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ಜನರು ಈ ಮಾನಸಿಕವಾದ ಭಾವನೆಯಿಂದ ಅಲ್ಲಿ ಬದುಕುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಕರ್ನಾಟಕ ಏಕೀಕರಣ ಆದದ್ದು ತಪಸ್ಸಿನ ಫಲ. ಹೋರಾಟದ ಫಲ. ಅದರ ಹಿಂದೆ ಬಹಳ ದೊಡ್ಡ ಶಕ್ತಿಗಳ ತ್ಯಾಗ ಇದೆ. ನಿಜ, ಅನ್ಯಾಯ ಆಗಿರತಕ್ಕದ್ದು ಬೇರೆ. ಇದಕ್ಕೆ ಕೂಗು ಇದೆಯೆಂದು ಹೇಳಿದ್ದೀರಲ್ಲ ಆ ಕೂಗಿನ ಬಗ್ಗೆ ನಾವು ಯಾರೂ ಸ್ಪಂದಿಸಬೇಕಾಗಿಲ್ಲ. ಎಂಥ ಕೂಗು ಬಂದರೂ ನಮಗೆ ಆ ಪರಿಸ್ಥಿತಿಯ ಯೋಜನೆ ಇರಬಹುದು, ಆದರೆ ಕರ್ನಾಟಕ ಏಕೀಕರಣದಂಥ ಕೂಗು ಯಾರೂ ಅದಕ್ಕೆ ಮತ್ತೆ ಪುನರುಚ್ಚಾರ ಮಾಡತಕ್ಕ ಪರಿಸ್ಥಿತಿಗೆ ನಾವು ಯಾರೂ ಹೋಗಬಾರದು. ಇದು ಕೆಟ್ಟ ಸಂದೇಶವಾಗುತ್ತದೆ.

(ಗೊಂದಲ)

ಶ್ರೀ ಶರಣಪ್ರಕಾಶ ರುದ್ರಪ್ಪ ಪಾಟೀಲ್ : ಈ ರೀತಿ ಆದರೆ ಕೂಗು ಬಂದೇ ಬರುತ್ತದೆ. ಅದನ್ನು ಯಾರೂ ನಿಲ್ಲಿಸಲು ಆಗುವುದಿಲ್ಲ. ಈ ಸರ್ಕಾರ ಮಾಡಿರುವ ತಾರತಮ್ಯ ನೋಡಿದರೆ ತಾರತಮ್ಯ ಆಗಿದೆಯೆಂದು ನಂಜುಂಡಪ್ಪನವರ ವರದಿ ಮಾಡಿದರಲ್ಲ, ಸಮ್ಮಿಶ್ರ ಸರ್ಕಾರ ಮಾಡಿರುವ ತಾರತಮ್ಯದ ನಿವಾರಣೆಗೆ ಒಂದು ಸಮಿತಿಯನ್ನು ಮಾಡಬೇಕಾಗುತ್ತದೆ. ರೇವಣ್ಣನವರು, ಯಡಿಯೂರಪ್ಪನವರು ಸೇರಿ ಅಷ್ಟು ತಾರತಮ್ಯ ಮಾಡಿದ್ದಾರೆ. ವಾಟಾಳ್ ನಾಗರಾಜ್ ಹಿರಿಯರು ಏನು ಹೇಳಿದ್ದಾರೆ ಆ ರೀತಿ ಆಗಬಾರದು. ಆದರೆ, ಈ ರೀತಿ ತಾರತಮ್ಯ ಆದರೆ ಅದು ಬಂದೇ ಬರುತ್ತದೆ. ಯಾರೂ ನಿಲ್ಲಿಸಲು ಆಗುವುದಿಲ್ಲ.

ಉಪಾಧ್ಯಕ್ಷರು : ಶರಣ ಪ್ರಕಾಶ್ ರವರೆ ತಾವೂ ಬೇಡಿಕೆಯ ಮೇಲೆ ಮಾತನಾಡುತ್ತಿದ್ದೀರಿ. ಆಗ ಈ ವಿಷಯವನ್ನು ಇಟ್ಟುಕೊಂಡು ನೀವೂ ಮಾತನಾಡಿ. ಅವರು ಮಾತನಾಡಲು ಬಿಡಿ.

(ಗೊಂದಲ)

ಶ್ರೀ ಎನ್.ಚಲುವರಾಯಸ್ವಾಮಿ :ಯಾವ್ಯಾವ ಶಾಸಕರ ಕ್ಷೇತ್ರದಲ್ಲಿ, ಯಾವ್ಯಾವ ಜಿಲ್ಲೆಗೆ ಹಣ ರಿಲೀಸ್ ಆದಾಗ ಯಾವ ರೀತಿಯಾಗಿ

ಉಪಯೋಗಿಸಿಕೊಂಡಿದ್ದಾರೆ ಎಂದು ಒಂದು ವರದಿ ತರಿಸಿ. ಆಗ ತಮ್ಮ ಬಂಡವಾಳವಾದರೂ ಗೊತ್ತಾಗುತ್ತದೆ. ಯಾವ್ಯಾವಾಗ ಯಾರ್ಯಾರು ಕೆಲಸ ಮಾಡಿದ್ದಾರೆ ಎಂದು ಗೊತ್ತಾಗಲಿ. ದಯಮಾಡಿ ಇದೊಂದು ಒಳ್ಳೆಯ ಕೆಲಸ ಮಾಡಿ.

(ಗೊಂದಲ)

ಶ್ರಿ ಬಿ.ಟಿ.ಪರಮೇಶ್ವರ ನಾಯಕ್ : ಆ ಕೆಲಸವನ್ನು ಮೊದಲು ಮಾಡಿ. ಆಗ ಒಳ್ಳೆಯ ಕೆಲಸ ಯಾರು ಮಾಡಿದ್ದಾರೆ ಅದು ಗೊತ್ತಾಗುತ್ತದೆ. ಅದು ಹೊರಕ್ಕೆ ಬರಲಿ. ನಿಮಗೇ ಅಧಿಕಾರ ಇದೆಯಲ್ಲ, ನೀವೇ ಏಕೆ ಅದನ್ನು ಮಾಡಬಾರದು?

(ಗೊಂದಲ)

ಶ್ರೀ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ : ನೀವು ಮೈನರ್ ಇರಿಗೇಷನ್‌ನಲ್ಲಿ ತೆಗೆದುಕೊಳ್ಳಿ. ಇಲ್ಲಿಯವರೆಗೆ ಇದರಲ್ಲಿ ಒಂದೂ ಕೂಡ ಕ್ಷೇತ್ರವಾರು ಕೊಡುತ್ತಿಲ್ಲ. ನಾನು 5 ಪ್ರಶ್ನೆ ಹಾಕಿದ್ದೇನೆ ಕಳೆದ ಎರಡು ಸದನದಿಂದ. ಆದರೆ ಅವರು ಉತ್ತರವನ್ನೇ ಕೊಡುತ್ತಿಲ್ಲ. ಇವತ್ತು ಹೈಸ್ಕೂಲ್ ಆಗಲಿ, ಕಾಲೇಜು ಆಗಲಿ, ಹಾಸ್ಪಲ್, ರಸ್ತೆಗಳಾಗಲಿ..

ಉಪಾಧ್ಯಕ್ಷರು : ಇದು ಯಾವುದೂ ರೆಕಾರ್ಡ್‌ಗೆ ಹೋಗಬಾರದು. ಅವರು ಹೇಳಿದ್ದೆಲ್ಲ ರೆಕಾರ್ಡ್ ಮಾಡಿಕೊಳ್ಳಬೇಡಿ.

ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಈ ರೀತಿ ತಾರತಮ್ಯ ಮುಂದುವರೆದರೆ ಖಂಡಿತವಾಗಿ ಈ ರಾಜ್ಯ ಒಂದಾಗಿ ಇರಲು ಸಾಧ್ಯವೇ ಇಲ್ಲ. ಹೇಗೆ ಸಾದ್ಯ ಇದೆ ನೀವೇ ಹೇಳಿ.

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ರಾಯರೆಡ್ಡಿಯವರೆ, ಈಗ ನೀವು ಮಾತನಾಡುತ್ತೀರೋ, ಇಲ್ಲವೋ?

(ಗೊಂದಲ)

ಶ್ರಿ ಬಸವರಾಜ ರಾಯರೆಡ್ಡಿ : I have not yielded.

(ಗೊಂದಲ)

ಉಪಾಧ್ಯಕ್ಷರು : ಹೀಗೆಯೇ ಸಾಕಷ್ಟು ಸಮಯ ವ್ಯಯವಾಯಿತು. ಈಗಾಗಲೇ ಆರು ಗಂಟೆಯಾಯಿತು. ತಾವು ಐದು ಗಂಟೆಗೇ ಮಾತನಾಡಲು ಆರಂಭಿಸಿದ್ದಿರಿ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ... ಯಾವುದೇ ವರ್ಗಕ್ಕೆ, ಯಾವುದೇ ಪ್ರದೇಶಕ್ಕೆ ತಾರತಮ್ಯ ತೋರಿಸುವುದಿಲ್ಲ, ದ್ವೇಷ, ರಾಗ ಇದೆಲ್ಲಾ ಮಾಡುವುದಿಲ್ಲವೆಂದು ತಾವು ಪ್ರಮಾಣ ವಚನವನ್ನು ಸ್ವೀಕಾರ ಮಾಡುವಾಗ ಹೇಳಿದ್ದೀರಿ. ಇವತ್ತು ಇದರಿಂದ ಅಪಚಾರವಾಗಿದೆ. ಇದನ್ನು ಸರಿ

ಮಾಡುವಂತಹ ಜವಾಬ್ದಾರಿ ಮತ್ತು ಹೊಣೆಗಾರಿಕೆ ಇವತ್ತು ಈ ಸರ್ಕಾರಕ್ಕೆ ಇದೆ. ಈ ತಾರತಮ್ಯದಿಂದ ಸಂವಿಧಾನಕ್ಕೆ ಅಪಚಾರವಾಗುತ್ತಿದೆ. ಆದ್ದರಿಂದ ಯಾವ ತರಹ ಇದನ್ನು ಸರಿ ಮಾಡುತ್ತಾರೆ ಎಂಬ ಬಗ್ಗೆ ಸರ್ಕಾರ ಸ್ಪಷ್ಟವಾಗಿ ಉತ್ತರವನ್ನು ಹೇಳಬೇಕು...

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ರಾಯರೆಡ್ಡಿಯವರೆ, ತಾವು ಮಾತನಾಡಿದ್ದು ಮುಗಿಯಿತೇ? ಮಾನ್ಯ ಪಾಟೀಲ್‌ರೆ, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಸ್.ಎಸ್.ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಒಂದು ನಿಮಿಷ. ನಾನು ಹೆಚ್ಚೇನೂ ಹೇಳುವುದಿಲ್ಲ. ನಾವು ಯಾರೇ ಏನೇ ಮಾತನಾಡಬೇಕಾದರೂ ಕೂಡ ಕರ್ನಾಟಕ ಒಡೆಯಬೇಕೆನ್ನುವ ಧ್ವನಿಯನ್ನು ನಾವ್ಯಾರು ತೆಗೆಯುವುದು ಬೇಡ...

(ಗೊಂದಲ)

ಶ್ರೀ ಬಿ.ಆರ್.ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಬಹಳ ಸೂಕ್ಷ್ಮವಾಗಿ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ.

(ಗೊಂದಲ)

ಶ್ರೀ ಎಸ್.ಎಸ್.ಪಾಟೀಲ್ : ಇಡೀ ರಾಜ್ಯವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಬೇಕು, ಆ ಮಾತು ಬೇರೆ. ಆದರೆ ಈ ರೀತಿಯ ಅಪಸ್ವರ ಬೇಡ.

(ಗೊಂದಲ)

ಶ್ರೀ ಬಿ.ಆರ್.ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ನಮ್ಮ ಭಾಗದಲ್ಲಿ ನವೆಂಬರ್ 1ನೇ ತಾರೀಖಿಗೆ ಪ್ರತ್ಯೇಕತಾ ಧ್ವಜವನ್ನು ಕಳೆದ ನಾಲ್ಕಾರು ವರ್ಷಗಳಿಂದ ಹಾರಿಸುತ್ತಾ ಬಂದಿದ್ದಾರೆ. ಇವತ್ತು ಇದು ಪ್ರಾರಂಭವಾಗಿದೆ. ಇದು ದುರ್ದೈವದ ಸಂಗತಿಯಾಗಿದೆ. ಇದು ಏಕೆ ಆಗಿದೆ ಎಂದರೆ, ಈ ಸರ್ಕಾರ ಆ ಸರ್ಕಾರ ಎಂದು ನಾನು ಹೇಳುವುದಿಲ್ಲ, ಎಲ್ಲಾ ಸರ್ಕಾರಗಳಿಂದ ನಮಗೆ ಅನ್ಯಾಯವಾಗಿದೆ. ಆದರೆ ಮಾನ್ಯ ರಾಯರೆಡ್ಡಿಯವರು ಮತ್ತು ನಾವು ಹೇಳತಕ್ಕಂಥದ್ದು ಏನೆಂದರೆ, ಮುಂದಾದರೂ ಕೂಡ ಈ ಕರ್ನಾಟಕ ಅಖಂಡವಾಗಿ ಉಳಿಯಬೇಕು, ಈ ಕರ್ನಾಟಕ ಒಂದು ಭಾಷಾ ಆಧಾರಿತ ಪ್ರಾಂತ್ಯವಾಗಿ ಸಮೃದ್ಧವಾಗಿ ಬೆಳೆಯಬೇಕು, ಇಡೀ ದೇಶದಲ್ಲಿ ಒಂದು ಉತ್ತಮ ನಾಡನ್ನು ಕಟ್ಟಬೇಕೆಂಬುದು ಆಗಿದ್ದರೆ, ಕನ್ನಡ ನಾಡಿನ ಅಭಿಮಾನ ಇಟ್ಟುಕೊಂಡು ನಾವೇನು ಇಲ್ಲಿ ಸೇರಿದ್ದೇವೋ, ನಮಗೆ ಅನ್ಯಾಯ ಮಾಡುವುದು ಬೇಡ. ನಾವು ಯಾರಿಗೂ ಅನ್ಯಾಯ ಮಾಡುವುದು ಬೇಡ. ದಯಮಾಡಿ ಸರ್ಕಾರದಲ್ಲಿ ಇರುವವರು ಆ ವಿಚಾರವನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ, ಈ

ಪ್ರತ್ಯೇಕತಾವಾದಿಗಳಿಗೆ ಶಕ್ತಿ ಸಿಗುತ್ತದೆ, ಪ್ರತ್ಯೇಕತಾವಾದಿಗಳಿಗೆ ಬಲ ಸಿಗುತ್ತದೆ. ನಾವು ಅವರ ಪರವಾಗಿಲ್ಲ. ಆದರೆ ಇಂತಹ ಪರಿಸ್ಥಿತಿ ಬಂದರೆ,..

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : No chance at all.

(ಗೊಂದಲ)

ಉಪಾಧ್ಯಕ್ಷರು : ಇಲ್ಲ. ಇದು ಆಗುವುದಿಲ್ಲ ಬಿಡಿ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಈ ಸರ್ಕಾರದಲ್ಲಿ ಮಾನ್ಯ ರಾಯರೆಡ್ಡಿಯವರು ಮಾಡಿಸಿಕೊಂಡಿರುವಷ್ಟು ಕೆಲಸವನ್ನು ಇನ್ಯಾರೂ ಮಾಡಿಸಿಕೊಂಡಿಲ್ಲ. ಆದ್ದರಿಂದ ದಯಮಾಡಿ ಅವರು ಟೀಕೆ ಮಾಡುವುದನ್ನು ಬಿಡಬೇಕಾಗುತ್ತದೆ. ಅವರು ಕೆಲಸ ಮಾಡಿಸಿಕೊಳ್ಳದೇ ಹೋಗಿದ್ದರೆ ಬೇಕಾದರೆ ಟೀಕೆ ಮಾಡಲಿ...

(ಗೊಂದಲ)

ಶ್ರೀ ಬಿ.ಆರ್.ಪಾಟೀಲ್ :ಸತ್ಯ ಹೇಳಿದರೆ ನಿಮಗೇಕೆ ಬೇಸರವಾಗುತ್ತದೆ? ಇದು on record ಇದೆ. ಮಾನ್ಯ ರಾಯರೆಡ್ಡಿಯವರು ತಮ್ಮಗೊಬ್ಬರಿಗೆ ಕೇಳುತ್ತಿಲ್ಲ...

(ಗೊಂದಲ)

ನಾನು ನನ್ನಕ್ಷೇತ್ರದ ವಿಚಾರವನ್ನಷ್ಟೇ ಮಾತನಾಡುತ್ತಿಲ್ಲ. ನಾನು ಉತ್ತರ ಕರ್ನಾಟಕದ ವಿಚಾರವನ್ನು ಮಾತನಾಡುತ್ತಿದ್ದೇನೆ. ನಾನು ಹೊಳೆನರಸೀಪುರ ಅಥವಾ ಯಲ್ಬರ್ಗ ಬಗ್ಗೆ ಮಾತನಾಡುತ್ತಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ನೀವು ಹೊಳೆನರಸೀಪುರದ ಬಗ್ಗೆ ಮಾತನಾಡುತ್ತೀರಲ್ಲಾ, ನಿಮಗೆ ಪ್ರಥಮ ದರ್ಜೆ ಕಾಲೇಜ್ ಅನ್ನು ಮಂಜೂರು ಮಾಡಿಸಿಲ್ಲವೇ?

ಶ್ರೀ ಬಸವರಾಜ ರಾಯರೆಡ್ಡಿ : ನಾನು ಮಾಡಿಸಿಲ್ಲವೆಂದು ಹೇಳಲಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಹೊಳೆನರಸೀಪುರಕ್ಕೆ ಮಾಡಿರುವ ಬಗ್ಗೆ ಮಾತನಾಡುತ್ತೀರಲ್ಲಾ? ಹಾಗಾದರೆ ನೀವು ನಿಮ್ಮ constituency ಗೆ ಏಕೆ ಮಾಡಿಸಿಕೊಂಡಿರಿ? ಜನ ನಿಮಗೆ ಓಟು ಕೊಟ್ಟಿಲ್ಲವೇ?...

ಶ್ರೀ ಬಸವರಾಜ ರಾಯರೆಡ್ಡಿ : ನಾನು ಇಲ್ಲವೆಂದು ಹೇಳಲಿಲ್ಲ. ನೀವು ಮಂಜೂರು ಮಾಡಿದ್ದಕ್ಕೆ ನಾನು ನಿಮ್ಮನ್ನು ಪ್ರಶಂಸೆ ಮಾಡಿದೆ. ನೀವು ಆ ತರಹ ಇಡೀ ರಾಜ್ಯಕ್ಕೆ ಮಾಡಿ ಎಂದು ನಾನು ಹೇಳುತ್ತಿದ್ದೇನೆ. ಅದೇ ರೀತಿ ಎಲ್ಲಾ ಕ್ಷೇತ್ರಗಳಿಗೂ ಮಾಡಿದರೆ ನಿಮಗೆ ವಂದನೆಗಳನ್ನು ಸಲ್ಲಿಸುತ್ತೇವೆ...

(ಗೊಂದಲ)

ಹೊಳೆನರಸೀಪುರಕ್ಕೆ ಮಾಡಿರುವುದು ಸರಿಯಲ್ಲವೆಂದು ನಾನು ಹೇಳಲಿಲ್ಲ. ನಾನು ಪ್ರಶಂಸೆ ಮಾಡಿದೆ. ಮಾನ್ಯ ಲೋಕೋಪಯೋಗಿ ಮಂತ್ರಿಯಾಗಿ ನೀವು ಅದನ್ನು

ಎಲ್ಲಾ ಕಡೆಗೂ ಮಾಡಿ ಎಂದು ನಾನು ಹೇಳುತ್ತಿದ್ದೇನೆ. ಆ Yard stick ಅನ್ನು as a Minister ಎಲ್ಲಾ ಕಡೆಗೂ ಮಾಡಿ ಎಂದು ನಾನು ಹೇಳುತ್ತಿದ್ದೇನೆ.

(ಗೊಂದಲ)

ಉಪಾಧ್ಯಕ್ಷರು : ಈಗ ಆ subject ಬಿಡಿ. ಅದನ್ನೇ ಮುಂದುವರೆಸಿಕೊಂಡು ಹೋಗುವುದರಲ್ಲಿ ಅರ್ಥವಿಲ್ಲ. ಮುಂದಿನ ವಿಷಯಕ್ಕೆ ಹೋಗಿ. ನೀವಿನ್ನೂ ಅದರಲ್ಲೇ ಇದ್ದೀರಲ್ಲಾ?

(ಗೊಂದಲ)

ಶ್ರೀ ಕೆ.ಶ್ರೀನಿವಾಸಗೌಡ : ಮಾನ್ಯ ರಾಯರೆಡ್ಡಿಯವರೆ, ಒಂದೇ ಒಂದು ನಿಮಿಷ ಯೀಲ್ಡ್ ಆಗಿ.

(ಗೊಂದಲ)

ಉಪಾಧ್ಯಕ್ಷರು : ಎಲ್ಲರಿಗೂ ಯೀಲ್ಡ್ ಆಗಿ ಐದು ಗಂಟೆಗೆ ಮಾತನಾಡಲು ಆರಂಭಿಸಿ ಈಗಾಗಲೇ ಒಂದು ಗಂಟೆಯಾಗಿದೆ.

(ಗೊಂದಲ)

ಶ್ರೀ ಕೆ.ಶ್ರೀನಿವಾಸಗೌಡ : ಮಾನ್ಯ ಬಿ.ಆರ್.ಪಾಟೀಲ್‌ರವರು ನಮಗೆ ಸ್ವಾತಂತ್ರ್ಯ ಬಂದಾಗಿನಿಂದ ಉತ್ತರ ಕರ್ನಾಟಕದ ಅಭಿವೃದ್ಧಿ ಕುಂಠಿತವಾಗಿದೆ ಎಂದು ಹೇಳಿದರು. ಇಲ್ಲಿ ಬಹಳ ಮೂಲಭೂತವಾಗಿ ಯೋಜನೆ ಮಾಡಬೇಕಾಗಿರುವುದು ಏನೆಂದರೆ, ಈ ಹಳೆ ಮೈಸೂರಿನಲ್ಲಿ ನಮ್ಮ ಮೈಸೂರು ಮಹಾರಾಜರು ಆಳಿರುವುದಕ್ಕೂ, ಅಲ್ಲಿ ನಿಜಾಮರು ಆಡಳಿತ ನಡೆಸಿದ್ದಕ್ಕೂ ವ್ಯತ್ಯಾಸವಿದೆ. ಆ ಕಾರಣಗಳಿಂದ ಅದು ಹಿಂದುಳಿದಿದೆಯೇ ವಿನಃ ಇತರ ಕಾರಣಗಳಿಂದಲ್ಲ. ಸರ್ಕಾರವೆಂದ ಮೇಲೆ ಎಲ್ಲಾ ಕಡೆಗಳಲ್ಲೂ ಅಭಿವೃದ್ಧಿಪಡಿಸಬೇಕು. ಆದರೆ ಅವರು ಎಷ್ಟು ಉದ್ಧಾರ ಮಾಡಬೇಕಾಗಿತ್ತೋ ಅಷ್ಟು ಉದ್ಧಾರ ಮಾಡಲಿಕ್ಕೆ ಆಗಿರಲಿಲ್ಲ. ಆ ಮಹಾರಾಜರುಗಳು ಅಷ್ಟೊಂದು ಹಾಳು ಮಾಡಿ ಹೋಗಿದ್ದರು. ಆದರೆ ನಮ್ಮ ಹಳೆಯ ಮೈಸೂರಿನ ಮಹಾರಾಜರುಗಳು ಮತ್ತು ಅವರ ವಂಶಸ್ಥರು ಸ್ವಲ್ಪ ಅಭಿವೃದ್ಧಿ ಕಡೆಗೆ ಗಮನ ಕೊಟ್ಟಿದ್ದರು. ಎಲ್ಲಾ ವಿಧದಲ್ಲೂ ಅವತ್ತು Representative of Assembly ಕೆಲಸ ಮಾಡಿದ್ದರಿಂದ ಸ್ವಲ್ಪ ಈ ಹಳೆಯ ಮೈಸೂರು ಭಾಗ ಅಭಿವೃದ್ಧಿಯಾಗಿದೆ. ಅದರ ಜೊತೆಗೆ ಆದ್ಯತೆಗಳು ಇರಬಹುದು, ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಎಲ್ಲವೂ ಅಭಿವೃದ್ಧಿಯಾಗಬೇಕು. ನಾನು ಹೇಳುವುದು ಇಷ್ಟೇ, ದಯವಿಟ್ಟು ಎಲ್ಲೂ ಕೂಡ ಕೂಗಿದೆ ಎಂದು ಹೇಳಬಾರದು. ಇಡೀ ರಾಜ್ಯದ ಏಕೀಕರಣಕ್ಕೆ ದುಡಿದವರು ಇನ್ನೂ ಬದುಕಿರುವಾಗಲೇ ಈ ಮಾತನ್ನುಹೇಳಬಾರದು. ಅಂದು ದುಡಿದಂತಹ ಮಾನ್ಯ ಪಾಟೀಲ್‌ಪುಟ್ಟಪ್ಪನವರು ಇನ್ನೂ ಬದುಕಿದ್ದಾರೆ...

(ಗೊಂದಲ)

ಉಪಾಧ್ಯಕ್ಷರು : ಪ್ರತ್ಯೇಕತೆ ಬಗ್ಗೆ ಮಾತನಾಡುವುದಿದ್ದರೆ ಅದನ್ನು ಅವರು separate ಆಗಿ ಇಟ್ಟುಕೊಳ್ಳಲಿ. ಆ ಬಗ್ಗೆ ಇಲ್ಲಿ ಮಾತುಗಳು ಬರುವುದು ಬೇಡ. ಆ ವಿಷಯವನ್ನು ಬಿಟ್ಟುಬಿಡಿ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ರೇವಣ್ಣನವರೆ, ನಮಗೊಂದು ಇಂಜಿನಿಯರಿಂಗ್ ಕಾಲೇಜ್ ಮಾಡಿಕೊಡಿ. ನಿಮಗೊಂದು ಅಭಿನಂದನೆ ಸಲ್ಲಿಸುತ್ತೇನೆ. ನೀವು ನಮಗೆ ಅದನ್ನು ಮಾಡಿಕೊಡುತ್ತೀರಾ? ನಮ್ಮ ಯಲಬುರ್ಗಾಕ್ಕೊಂದು ಇಂಜಿನಿಯರಿಂಗ್ ಕಾಲೇಜ್ ಅನ್ನು ಮಾಡಿಸಿಕೊಡಿ ಎಂದು ಮಾನ್ಯ ರೇವಣ್ಣನವರ ಮುಖಾಂತರ ಸರ್ಕಾರಕ್ಕೆ ಅರ್ಜಿ ಹಾಕುತ್ತಿದ್ದೇನೆ. ಅದನ್ನು ಮಾಡಿದರೆ ನಾನು ನಿಮಗೊಂದು ಅಭಿನಂದನೆ ಸಲ್ಲಿಸುತ್ತೇನೆ.

ಉಪಾಧ್ಯಕ್ಷರು : ಸುಮ್ಮನೆ ಏನೇನೋ ಕೇಳುತ್ತೀರಲ್ಲಾ?

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಉಪಾಧ್ಯಕ್ಷರೆ, ಅವರು ಇಂಜಿನಿಯರಿಂಗ್ ಕಾಲೇಜ್ ಬಗ್ಗೆ ಮಾತನಾಡಿದರು. ಮೈಸೂರು ಮಹಾರಾಜರು 1937ನೇ ಇಸವಿಯಲ್ಲಿ ಬೆಂಗಳೂರಿನಲ್ಲೊಂದು ಇಂಜಿನಿಯರಿಂಗ್ ಕಾಲೇಜ್ ಮಾಡಿದರು. ಅದನ್ನು ಬಿಟ್ಟರೆ ಇವತ್ತಿನವರೆಗೂ ಇಲ್ಲಿ ಒಂದೇ ಒಂದು ಇಂಜಿನಿಯರಿಂಗ್ ಕಾಲೇಜ್ ಕೂಡ ಆಗಿಲ್ಲ. ಅದರಲ್ಲಿ ಕೇವಲ ಮೂರು ಕೋರ್ಸ್‌ಗಳು ಮಾತ್ರ ಇದೆ. Textile, Design ಮತ್ತು Survey ಮಾಡುವುದು, ಈ ಮೂರು ಕೋರ್ಸ್‌ಗಳು ಮಾತ್ರ ಅದರಲ್ಲಿದೆ. ಅಲ್ಲಿಗೆ ಯಾರೂ admissionಗೆ ಬರಬಾರದು. ಇಲ್ಲಿಯವರೆಗೆ 50 ವರ್ಷಗಳಲ್ಲಿ 170 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದಾರೆ. 170 ಕೋಟಿ ರೂ.ಗಳನ್ನು ಯಾವ ಯಾವ ಕಾಲೇಜಿಗೆ ಕೊಟ್ಟಿದ್ದಾರೆ ಎನ್ನುವುದನ್ನು ದಯಮಾಡಿ ಹೇಳಿ. ಈಗ ಉದಾಹರಣೆಗೆ ಹೇಳುವುದಾದರೆ, ಈಗ ಮಾನ್ಯ ರಾಯರೆಡ್ಡಿಯವರು ಹೇಳಿದರು. ಯಾವ ಕ್ಷೇತ್ರಕ್ಕೆ ಏನೇನು ಕೊಟ್ಟರು? ಯಾವ ಯಾವ ವಿಧಾನಸಭಾ ಕ್ಷೇತ್ರಗಳಿಗೆ ಏನೇನು ಕೆಲಸ ನಡೆದಿದೆ ಎಂಬ ಬಗ್ಗೆ ಚರ್ಚೆಯಾಗಲಿ. ಅದನ್ನೇನು ನಾನು ಬೇಡ ಎನ್ನುವುದಿಲ್ಲ. ನನಗೆ ಕೊಟ್ಟಿದ್ದರೆ, ಬೇರೆ ಕ್ಷೇತ್ರದಲ್ಲೂ ಸರಿಪಡಿಸಿ ಎಂದು ಹೇಳುತ್ತೇನೆ. ನನಗೊಂದು First Grade College ಕೊಟ್ಟಿದ್ದಾರೆ, ನಿಮಗೊಂದು First Grade College ಕೊಟ್ಟಿದ್ದಾರೆ, ನನಗೊಂದು ITI ಕೊಟ್ಟಿದ್ದಾರೆ, ನಿಮಗೊಂದು ITI ಕೊಟ್ಟಿದ್ದಾರೆ, ಯಾವ ರೀತಿ ಇದರಲ್ಲಿ ಭೇದಭಾವವಾಗಿದೆ? ನಿಮ್ಮ ಕ್ಷೇತ್ರ ಬಿಟ್ಟು ನೀವು ಉತ್ತರ ಕರ್ನಾಟಕ ಬೇರೆ ಕ್ಷೇತ್ರದ ಬಗ್ಗೆಯೇನೂ ಇಲ್ಲ ಭಾಷಣ ಮಾಡುತ್ತಿಲ್ಲವಲ್ಲಾ?

(ಗೊಂದಲ)

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಉತ್ತರ ಕರ್ನಾಟಕದಲ್ಲಿ ಕೇವಲ ಮಾನ್ಯ ರಾಯರೆಡ್ಡಿಯವರೊಬ್ಬರೇ ಇಲ್ಲ. ನಾವೂ ಇದ್ದೇವೆ. ದಯಮಾಡಿ ನಮ್ಮ ಕಡೆಗೂ ಸ್ವಲ್ಪ ನೋಡಿ.

(ಗೊಂದಲ)

ಶ್ರಿ ಹೆಚ್.ಡಿ.ರೇವಣ್ಣ : ... ಈ ಸಾರಿ 160 ಕಾಲೇಜುಗಳನ್ನು ಕೊಟ್ಟಿದ್ದೇವೆ. ನೀವು 15 ವರ್ಷಗಳಿಂದ ಒಂದೂ ಕಾಲೇಜನ್ನು ಕೊಡಲಿಕ್ಕೆ ಆಗುತ್ತಿರಲಿಲ್ಲ. 1000 ಹೈಸ್ಕೂಲ್‌ಗಳನ್ನು ಕೊಟ್ಟಿದ್ದೇವೆ...

(ಗೊಂದಲ)

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ನಮ್ಮ ಕಡೆಗೆ ನೀವು ಏನನ್ನೂ ಕೊಟ್ಟಿಲ್ಲ. ಕೇವಲ ಬಿ.ಜೆ.ಪಿ. ಮತ್ತು ಜೆ.ಡಿ.[ಎಸ್]ಎಂಎಲ್‌ಎ ಇರುವ ಕಡೆಗಳಲ್ಲಿ ಮಾತ್ರ ಕೊಟ್ಟಿದ್ದೀರಿ.

(ಗೊಂದಲ)

ಶ್ರಿ ಬಸವರಾಜ ರಾಯರೆಡ್ಡಿ : ಮಾನ್ಯ ಉಪಾಧ್ಯಕ್ಷರೆ. ನೀರಾವರಿ ವಿಚಾರಗಳನ್ನು ಅತ್ಯಂತ ಗಂಭಿರವಾಗಿ ವಿಚಾರ ಮಾಡುವಂತಹ ಕಾಲ ಇದಾಗಿದೆ. ನಮ್ಮ ರಾಜ್ಯದಲ್ಲಿ ಮುಖ್ಯವಾಗಿ ನಾಲ್ಕು ಜಲಾವಯನ ಪ್ರದೇಶಗಳಿವೆ. ಒಟ್ಟು 4000 ಟಿಎಂಸಿ ನೀರು ಇಳುವರಿ ನಮ್ಮ ರಾಜ್ಯದಲ್ಲಿ ಸಿಗುತ್ತದೆ. ಅದರಲ್ಲಿ ಮುಖ್ಯವಾಗಿ ಕೃಷ್ಣಾ ಜಲಾನಯನ ಪ್ರದೇಶ. ಅಂದರೆ ತುಂಗಭದ್ರ, ಘಟ್ಟಪ್ರಭಾ, ಮಲಪ್ರಭಾ ಇವೆಲ್ಲಾ ಉಪ ನದಿ ಸೇರಿದಂತಹ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಸುಮಾರು 1 ಲಕ್ಷ 92 ಸಾವಿರ Sq.Km ನಲ್ಲಿ 1 ಲಕ್ಷ 13 ಸಾವಿರ Sq.Km ಕೃಷ್ಣಾ ಜಲಾನಯನ ಪ್ರದೇಶ ನಮ್ಮ ರಾಜ್ಯದಲ್ಲಿದೆ. Annual yield of the Krishna ಜಲಾನಯನ ಪ್ರದೇಶ is 1200 ಟಿಎಂಸಿ. ಕಾವೇರಿ ಜಲಾನಯನ ಪ್ರದೇಶ ಸುಮಾರು 36 ಸಾವಿರ Sq.Km ಇದೆ. ಅದರಲ್ಲಿ ಕೇರಳದ್ದೂ ಸೇರಿಕೊಂಡು ಸುಮಾರು 465 ಟಿಎಂಸಿ ನೀರಿನ ಲಭ್ಯತೆ ಇದೆ. ಗೋದಾವರಿ ಮತ್ತು ಪೆನ್ನಾರ್ 17 ಸಾವಿರ Sq.Km ಪ್ರದೇಶವಿದೆ. ಆದ್ದರಿಂದ ಸುಮಾರು 85 ಟಿಎಂಸಿ ಸಿಗುತ್ತದೆ. ಪಶ್ಚಿಮ ವಾಹಿನಿ ಸುಮಾರು 2200 ಟಿಎಂಸಿ ನೀರು ಅಲ್ಲಿ ಲಭ್ಯವಿದೆ. ಹೀಗೆ ಒಟ್ಟು ಸುಮಾರು 4000 ಟಿಎಂಸಿ ನೀರಿನ ಬಳಕೆಯಲ್ಲಿ ಇವತ್ತು ನಾವು 2000 ಟಿಎಂಸಿ. ನೀರನ್ನು ಕಾವೇರಿ, ಕೃಷ್ಣಾ ಮತ್ತು ಗೋದಾವರಿಯಲ್ಲಿ ಬಳಸಿಕೊಳ್ಳಬೇಕಾಗಿದೆ. ಈಗಾಗಲೇ ತಮಗೆ ಗೊತ್ತಿದ್ದಂತೆ, ಈ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ನೀರಾವರಿಗಾಗಿ ಈಗ ನೀರಿನ ಬಳಕೆ ಆಗಬೇಕಾಗಿದೆ. ಅದಕ್ಕೊಂದು ದೊಡ್ಡ ಇತಿಹಾಸವಿದೆ. 1960ರಲ್ಲಿ ಆ ಹೋರಾಟ ಪ್ರಾರಂಭವಾಯಿತು. ಮಾನ್ಯ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ, 60ರ ದಶಕದಲ್ಲಿ ಕರ್ನಾಟಕದಲ್ಲಿ ಪ್ರತ್ಯೇಕವಾದ ರಾಷ್ಟ್ರೀಯ ಜಲ ನೀತಿಯನ್ನು ಮಾಡಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಯಿತು. ಇದಾದ ಮೇಲೆ

ಮಹಾರಾಷ್ಟ್ರ ಕೂಡ ಒತ್ತಾಯ ಮಾಡಿತು. ಅವರು ಒತ್ತಾಯ ಮಾಡಿದ ಮೇಲೆ Tribunalನ್ನು ಕೇಂದ್ರ ಸರ್ಕಾರವು 1969ರಲ್ಲಿ ಬಚಾವತ್ ಆಯೋಗದ ನೇತೃತ್ವದಲ್ಲಿ ರಚನೆ ಮಾಡಿತು. ಆದರೆ ದುರಾದೃಷ್ಟವಶಾತ್ ಮಾನ್ಯ ಎಂ.ಪಿ.ಪ್ರಕಾಶ್‌ರವರಿಗೆ ಗೊತ್ತಿದೆ. ಈ Tribunal ರಚನೆಯಾದಾಗ ಆಂಧ್ರಪ್ರದೇಶದ ನಾಗಾರ್ಜುನ ಸಾಗರ complete ಆಗಿತ್ತು. Nagarjuna Sagar Dam was completed. ಅವತ್ತಿನದಿವಸ ಡಾ: ಕೆ.ಎಲ್.ರಾವ್‌ರವರು ಕೇಂದ್ರದಲ್ಲಿ ನೀರಾವರಿ ಮಂತ್ರಿಗಳಾಗಿದ್ದರು. ಇದು ಮುಗಿದ ಮೇಲೆ Tribunal ರಚನೆಯಾಯಿತು. ಹೀಗಾಗಿ ನಮಗೂ ಕೂಡ ಬಚಾವತ್ ಅಯೋಗದ ನೀರಿನ ಹಂಚಿಕೆಯಲ್ಲಿ ಕೂಡ ಕೇಂದ್ರದಿಂದ ಬಹಳ ಅನ್ಯಾಯವಾಗಿದೆ. 1,13,000 ಜಲಾನಯನ ಪ್ರದೇಶದಲ್ಲಿ 1200 ಟಿಎಂಸಿ ಯೀಲ್ಡ್ ಇದ್ದರೆ ಬಚಾವತ್ ಕಮಿಷನ್ ನಮಗೆ ಮಾಡಿದೆಷ್ಟು ಎಂದರೆ, 700 ಟಿಎಂಸಿ ಮಾತ್ರ. Re-Generation ಸೇರಿಸಿ 34 ಟಿಎಂಸಿ ಅದರಲ್ಲಿ STMC ತೆಲಗುಗಂಗಾಗೆ ಕೊಟ್ಟರೆ 729 ಟಿಎಂಸಿ ಮಾತ್ರ ನಮಗೆ ಅಲಾಟ್ ಆಯಿತು. ಕೃಷ್ಣಾ ನದಿಯ 47.5% ನಮ್ಮ ಏರಿಯಾ ಇದೆ, ಮಹಾರಾಷ್ಟ್ರ 28% ಏರಿಯಾ ಇದೆ, ಅದಕ್ಕೆ 500 ಟಿಎಂಸಿ ಕೊಟ್ಟರು. ಆಂಧ್ರಪ್ರದೇಶದ ಜಲಾನಯನ ಪ್ರದೇಶ ಕೇವಲ 24.5% ಅವರಿಗೆ 800 ಟಿಎಂಸಿಯನ್ನು ಅಲಾಟ್ ಮಾಡಿದರು. ಇದಕ್ಕೆ ಕಾರಣವೇನೆಂದರೆ, ನಾಗಾರ್ಜುನ ಸಾಗರವನ್ನು ಕಟ್ಟಿದ ಮೇಲೆ ಏನು Tribunal ಆಯಿತು. ಇದರಿಂದ ದೊಡ್ಡ ಅನ್ಯಾಯ ಕರ್ನಾಟಕಕ್ಕೆ ಆಗಿದೆ. ಮಾನ್ಯ ಯಡಿಯೂರಪ್ಪನವರೆ, ಇದನ್ನು ನಾವು "ಬಿ"ಸ್ಕೀಮ್‌ನಲ್ಲಿ ಸರಿಪಡಿಸಬೇಕಾಗಿದೆ. "ಬಿ" ಸ್ಕೀಮ್‌ನ Tribunal ಬ್ರಿಜೇಶ್ ಕುಮಾರ್‌ರವರ ನೇತೃತ್ವದಲ್ಲಿ ಏನಾಗಿದೆ ಎಂದರೆ, ಇದರ ಬಗ್ಗೆ ಸರ್ಕಾರದವರು ಬಹಳ ಗಂಭೀರವಾಗಿ ಚಿಂತನೆಯನ್ನು ಮಾಡಬೇಕಾಗಿದೆ. ನಮ್ಮ ವಾದ ಏನೆಂದರೆ, ಸರಿಯಾಗಿ ಇನ್ನು 400 ಟಿಎಂಸಿಗೆ ನೀರು ಹಂಚಿಕೆಯಾಗುತ್ತದೆ, ಅದರ ಬಗ್ಗೆ ಸರ್ಕಾರ ಬಹಳ ಗಮನವನ್ನು ಹರಿಸಬೇಕಾಗುತ್ತದೆ ಏಕೆಂದರೆ ಇದರಲ್ಲಿ ನಮಗೆ ನ್ಯಾಯ ಸಿಗಬೇಕಾಗುತ್ತದೆ. ಇದರ ಬಗ್ಗೆ ಮಾನ್ಯ ಎಂ.ಪಿ.ಪ್ರಕಾಶ್‌ರವರಿಗೆ ಗೊತ್ತು. ಈ ತುಂಗಾಭದ್ರ ನದಿಯಿಂದ Scheme-A ನಲ್ಲಿ 500 ಟಿಎಂಸಿ yield ತುಂಗಾಭದ್ರ ಇದೆ. ಈ 500 TMC ಯಲ್ಲಿ restriction ಹಾಕಿದರು. ತುಂಗಾಭದ್ರಾದಲ್ಲಿ 120 ಟಿಎಂಸಿ ನೀರನ್ನು ಮಾತ್ರ ನೀವು ಬಳಸಬೇಕೆಂದು restriction ನ್ನು ಹಾಕಿದರು. ಈ ಬಗ್ಗೆ ನನಗೆ ಆಶ್ಚರ್ಯವಾಗುತ್ತದೆ. ಬಚಾವತ್ Tribunal ನಲ್ಲಿ ಏತಕ್ಕಾಗಿ restriction ಒಂದು ನದಿಗೆ ಹಾಕಿದರು. ಇದಕ್ಕೆ ಕಾರಣವೆಂದರೆ, ಆ ನದಿಯ ನೀರು ಒಂದು ಕಾಲುವೆಯ ಮುಖಾಂತರ ಆಂಧ್ರಪ್ರದೇಶಕ್ಕೆ ಹೋಗುತ್ತದೆ. Because the dam was the joint venture of Nizam and Madras Presidency. ಈಗಿನ

ಆಂಧ್ರಪ್ರದೇಶ ರಾಯಲ್‌ಸೀಮಾ ಏರಿಯಾ was part of the Madras Presidency. ಹೀಗಾಗಿ ಆಂಧ್ರದವರ ಒಂದು ಒತ್ತಾಯಕ್ಕೆ ಮಣಿದು Tribunal ಮತ್ತೆ 320 ಟಿಎಂಸಿಗೆ restriction ನ್ನು ಹಾಕಿದರು. ನಾವು ಅದನ್ನು "ಬಿ" ಸ್ಕೀಮ್‌ನಲ್ಲಿ ತೆಗೆಸಿ ಹಾಕಬೇಕು. ಇಲ್ಲದೇ ಹೋದರೆ ನಿಮ್ಮ ಸಿಂಗಟಾಲೂರು ಯೋಜನೆ ಆಗುವುದಿಲ್ಲ. ಅಥವಾ ನಿಮ್ಮ ತುಂಗಾಭದ್ರದ ನೀರಿನಲ್ಲಿ ಏನು ಹೂಳು ಬರುತ್ತದೆ ಅದರಲ್ಲಿ 134 TMC storage ಅಲ್ಲಿ ಇದೆ. ಅದು 102 ಕ್ರಮೇಣ ಟಿಎಂಸಿಗೆ ಇಳಿದಿದೆ. ಸುಮಾರು 32 ಟಿಎಂಸಿ ತುಂಗಭದ್ರ ಅಣೆಕಟ್ಟಿನಲ್ಲಿ ಹೂಳು ಬಂದಿದೆ. ಆ ನೀರು ಇವತ್ತು ಆಂಧ್ರಕ್ಕೆ ಹೋಗುತ್ತಿತ್ತು. ನಾವು 30 ಟಿಎಂಸಿ ನೀರನ್ನು ಹೇಗೆ ಬಳಕೆ ಮಾಡಬೇಕೆಂಬುದರ ಬಗ್ಗೆ ಗಂಭೀರವಾಗಿ ಚಿಂತನೆಯನ್ನು ಈ ಸರ್ಕಾರ ಮಾಡಬೇಕಾಗಿದೆ. ಇದರ ಜೊತೆಗೆ 729 ಟಿಎಂಸಿ ಇದೆಯಲ್ಲಾ, ಈ ನೀರನ್ನು ಬಳಸಿಕೊಳ್ಳಬೇಕಾಗಿದೆ. ನೀರಾವರಿಗೆ ನಾವು ಹೆಚ್ಚು ಮಹತ್ವವನ್ನು ಕೊಡಬೇಕಾಗಿತ್ತು. ಆದರೆ ಯಾವುದೋ ಕೆಲವು ಜನಪ್ರಿಯ ಕಾರ್ಯಕ್ರಮಗಳು ಇವತ್ತು ಏನಾಗಿದೆ. ಇವತ್ತಿನವರೆಗೂ ಕೂಡ 600 ಟಿಎಂಸಿ ನೀರು ಮಾತ್ರ ಬಳಕೆ ಮಾಡುವುದಕ್ಕೆ ಸಾಧ್ಯವಾಗಿದೆ. ಇನ್ನು 130 ಟಿಎಂಸಿ ನೀರನ್ನು ನಾವು field ಹಚ್ಚಿಲ್ಲ, it is a committed utilization. ಅದನ್ನು ಮಾಡುವುದಕ್ಕೆ ಆಗಲಿಲ್ಲ. ಆ 130 ಟಿಎಂಸಿ ನೀರನ್ನು field canal ಮತ್ತು ಉಪಕಾಲುವೆಗಳನ್ನು ಮಾಡಬೇಕಾಗಿದ್ದರೆ ಇನ್ನು 10 ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ. As on today TSR. ಆದರೆ ಇವತ್ತು ಏನಾಗಿದೆ ಎಂದರೆ ಸಾಕಷ್ಟು ಹಣವನ್ನು ರಾಜ್ಯ ಸರ್ಕಾರವು ನೀಡಬೇಕಾಗಿದೆ. Plan Scheme ನಲ್ಲಿ ರಾಜ್ಯ ಸರ್ಕಾರ ಹಣವನ್ನು ನೀಡಬೇಕಾಗುತ್ತದೆ. ನೀರಾವರಿಗೆ ಹಿಂದಿನ ಸರ್ಕಾರದವರು ಮಾನ್ಯ ದೇವೇಗೌಡರು ಇದ್ದಂತಹ ಸಂದರ್ಭದಲ್ಲಿ ನೀರಾವರಿಗೆ ಹೆಚ್ಚು ಮಹತ್ವವನ್ನು ಕೊಟ್ಟರು. ಮಾನ್ಯ ದೇವೇಗೌಡರು ನೀರಾವರಿ ಮಂತ್ರಿಗಳಾಗಿದ್ದಾಗ, ಮುಖ್ಯಮಂತ್ರಿಗಳಾಗಿದ್ದಾಗ ನಾನು ಆ ಕ್ಯಾಬಿನೆಟ್‌ನಲ್ಲಿ ಮಂತ್ರಿಯಾಗಿದ್ದೆ. ಅವರು ಅದಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟರು. ಅಲ್ಲಿಂದ ಇದು ಪ್ರಾರಂಭವಾಯಿತು. ಅದು ಪ್ರಾರಂಭವಾದ ಮೇಲೆ ಮಾನ್ಯ ಎಸ್.ಎಂ.ಕೃಷ್ಣರವರ ಸರ್ಕಾರ ಕೃಷ್ಣಜಲಭಾಗ್ಯ ನಿಗಮವನ್ನು ಸ್ಥಾಪನೆ ಮಾಡಿದರು. ಅದಕ್ಕೆ ಹೆಚ್ಚು ಮಹತ್ವ ಬಂತು. ಮಾನ್ಯ ಕೃಷ್ಣರವರ ಸರ್ಕಾರ ಬಂದು ಕೃಷ್ಣ ಜಲಭಾಗ್ಯ ನಿಗಮವಾಯಿತು. ಇದು ಆದ ಮೇಲೆ ಮಾನ್ಯ ಧರ್ಮಸಿಂಗ್‌ರವರ ಸರ್ಕಾರವನ್ನು ನಾವು ಮೆಚ್ಚಬೇಕಾಗುತ್ತದೆ. 2004-05ರಲ್ಲಿ 12,322 ಕೋಟಿ ರೂಪಾಯಿಗಳನ್ನು ನಮ್ಮ total plan ಇದರಲ್ಲಿ 3023 ಕೋಟಿ ರೂಪಾಯಿಗಳನ್ನು ಅಂದರೆ ಒಟ್ಟು ಯೋಜನಾ ವೆಚ್ಚದಲ್ಲಿ 24.54% ಹಣವನ್ನು ನೀರಾವರಿಗೆ ಕೊಟ್ಟರು.

ಉಪಾಧ್ಯಕ್ಷರು : ಮಾನ್ಯ ರಾಯರೆಡ್ಡಿಯವರೆ, ತಮಗೆ ಮಾತನಾಡುವುದಕ್ಕೆ ಇನ್ನು ಎಷ್ಟು ಹೊತ್ತು ಸಮಯ ಬೇಕು?

ಶ್ರೀ ಬಸವರಾಜರಾಯರೆಡ್ಡಿ : ಇನ್ನು half on hour ಬೇಕು. ನಾನು 6.30 ಗಂಟೆಗೆ ಮುಗಿಸುತ್ತೇನೆ. ಇಲ್ಲಾ ಅಂದರೆ ಮಧ್ಯದಲ್ಲಿ ನಿಲ್ಲಿಸುತ್ತೇನೆ ನಾಳೆ ಈ ಬಗ್ಗೆ ಮಾತನಾಡುತ್ತೇನೆ.

ಉಪಾಧ್ಯಕ್ಷರು : ಇನ್ನು ಕಾಲು ಗಂಟೆಯಲ್ಲಿ ಮುಗಿಸಿಬಿಡಿ.

ಶ್ರೀ ಬಸವರಾಜರಾಯರೆಡ್ಡಿ : 2005-06ರಲ್ಲಿ ಮಾನ್ಯ ಧರ್ಮಸಿಂಗ್‌ರವರ ಸರ್ಕಾರ ಇದ್ದಂತಹ ಸಂದರ್ಭದಲ್ಲಿ 13,555 ಕೋಟಿ ರೂಪಾಯಿಗಳು ಯೋಜನಾ ವೆಚ್ಚ, ನೀರಾವರಿಗೆ 3,942 ಕೋಟಿ ರೂಪಾಯಿಗಳು. ಅಂದರೆ 29.8% is the highest. ಆಮೇಲೆ 2006-07 16,166 ಕೋಟಿ ರೂಪಾಯಿಗಳು ಅದಕ್ಕೆ ಕೊಟ್ಟಿರುವುದು ಎಷ್ಟೆಂದರೆ, 4208 ಕೋಟಿ ರೂಪಾಯಿಗಳು. ಅಂದರೆ 26.48%. ಹೆಚ್ಚು ಕಡಿಮೆ ಈ ಬಜೆಟ್‌ನ್ನು ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳು ಇದ್ದಂತಹ ಸಂದರ್ಭದಲ್ಲಿ ಆಯಿತು. ಆಗ ಇನ್ನು 15-20 ದಿವಸಗಳು ಇತ್ತು. ಈ ಒಂದು ಬಜೆಟ್‌ನ್ನು ಮಂಡನೆ ಮಾಡುವಂತಹ ಸಂದರ್ಭದಲ್ಲಿ ಸ್ವಲ್ಪ ಯಡಿಯೂರಪ್ಪ ನವರು ಯಾವುದೋ ಹೊಸ ಜನಪ್ರಿಯ ಕಾರ್ಯಕ್ರಮದ ಸಲುವಾಗಿ 3% ಕಡಿಮೆ ಮಾಡಿಬಿಟ್ಟರು. ಅವರು ಹೆಚ್ಚು ಕೈ ಆಡಿಸುವುದಕ್ಕಾಗಲಿಲ್ಲ. ಈಗ 2007-08ರಲ್ಲಿ 17,782 ಕೋಟಿ ರೂಪಾಯಿಗಳಲ್ಲಿ is a plan ಇದಕ್ಕೆ allotment ಎಷ್ಟೆಂದರೆ 3,145 ಕೋಟಿ ರೂಪಾಯಿಗಳು. ಅಂದರೆ 17.69%. 2005-06ರಲ್ಲಿ 29.8% ಇದ್ದು, 2006-07ಕ್ಕೆ 26.48% ಆಯಿತು. 2007-08ಕ್ಕೆ 17.69% ಆಯಿತು. ಇದರಿಂದ ನೀರಾವರಿಯ ಏನು ಕೆಲಸ ಇದೆ, ಇದನ್ನು ಮುಗಿಸುವುದಕ್ಕೆ ಸಾಧ್ಯವೇ ಹೇಗೆ? ತಾವು ಯೋಚನೆ ಮಾಡಿ ಸ್ವಾಮಿ, ನಾನು ಈ ಬಗ್ಗೆ ಟೀಕೆ ಮಾಡಬೇಕು, ತಮ್ಮನ್ನು ತೊಂದರೆಗೆ ಸಿಲುಕಿಸಬೇಕೆಂದು ನಾನು ಮಾತನಾಡುತ್ತಿಲ್ಲ. ಆದರೆ ನಿಮಗೆ commitment ಇದೆ. ಇದನ್ನು ನೋಡಿದರೆ ನಿಮಗೆ ಈ ದೇಶದಲ್ಲಿ ಈ ರಾಜ್ಯದಲ್ಲಿ ರಾಜಕೀಯ ಇಚ್ಛಾಶಕ್ತಿ ಇಲ್ಲ, ನೀರಾವರಿಯನ್ನು ಪೂರ್ತಿಗೊಳಿಸುವುದಕ್ಕೆ. ಕೇವಲ ಅಗ್ಗದ ಜನಪ್ರಿಯತೆಯ ಕೆಲಸವನ್ನು ಮಾಡಿ ಹಣವನ್ನು ಮಠ ಹಾಗೂ ದೇವಸ್ಥಾನಗಳಿಗೆ ಹಂಚಿದರೆ ಇದರಿಂದ ಏನು ಪ್ರಯೋಜನಕ್ಕೆ ಬಂತು? ನೀವು ಹಂಚಬೇಡವೆಂದು ಹೇಳುವುದಿಲ್ಲ, ಸರ್ಕಾರ ನಿಮ್ಮದು ಇದೆ, ನೀವು ಊರಿಗೆ ಬೇಕಾದರೆ ಕೊಡಬಹುದು, ಆದರೆ productivity ನೀರಾವರಿಗಾಗಿ, ಮಾನ್ಯ ಕುಮಾರಸ್ವಾಮಿಯವರೆ. ಯಾವ ದೇವೇಗೌಡರು ನೀರಾವರಿಗಾಗಿ ಮಾನ್ಯ ಹೆಗಡೆಯವರ ಜೊತೆ ಹೋರಾಟವನ್ನು ಮಾಡಿದರು, ಅದು ನಿಮ್ಮ ಕಾಲದಲ್ಲಿ ನೀರಾವರಿಗೆ ಕಡಿಮೆ ಆಗಬಾರದು. ನೀವು ದೇವೇಗೌಡರ ಸೇವೆಯನ್ನು ಈಡೇರಿಸಬೇಕಾಗಿತ್ತು. ಇವತ್ತು ಆಗಲಿಲ್ಲ ನೋಡಿ. ಬರೀ ಅಗ್ಗದ

ಜನಪ್ರಿಯತೆಗಾಗಿ ಈ ಹಣವನ್ನು ಬಹಳಷ್ಟು ಪ್ರಮಾಣದಲ್ಲಿ ಇವತ್ತು ಕಡಿಮೆ ಮಾಡಿದ್ದಾರೆ. ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳನ್ನು ಕೇಳುತ್ತೇನೆ. ನೀವು 5000 ಕೋಟಿ ರೂಪಾಯಿಗಳಿಗೆ plan ನಲ್ಲಿ ಈ ಸಾರಿ ಹಣವನ್ನು revise ಮಾಡಿಕೊಡಬೇಕು. ಬೇರೆ ಅಗ್ಗದ ಜನಪ್ರಿಯತೆ ಕಾರ್ಯಕ್ರಮಗಳನ್ನು ನಿಲ್ಲಿಸಿ. ಇಲ್ಲದಿದ್ದರೆ ಬೇರೆ ಹೆಚ್ಚಿನ ಹಣವನ್ನು ಕ್ರೋಢೀಕರಣ ಮಾಡಿ ನೀರಾವರಿಗೆ ಹೆಚ್ಚಿನ ಮಹತ್ವವನ್ನು ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಚೆಪಡುತ್ಥೇನೆ. ನಾನು ಇಲ್ಲಿ ಬಹಳ ಗಂಭೀರವಾದ ವಿಚಾರವನ್ನು ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಈ Scheme-A ನಲ್ಲಿ ಇನ್ನು ಕೂಡ ಹಿಪ್ಪರಗಿ ಇದೆ. 12 ಟಿಎಂಸಿ ನೀರು ಅಲ್ಲಿಗೆ ಬೇಕು, ಅಲ್ಲಿ ಇನ್ನು ಏನು ಕೆಲಸ ಪ್ರಾರಂಭವಾಗಿಲ್ಲ. ಮಾನ್ಯ ಯಡಿಯೂರಪ್ಪನವರೆ ನಿಮಗೆ ಗೊತ್ತಿದೆ. ಆ Rehabilitation Camp ಹಿಪ್ಪರಗಿ ಬ್ಯಾರೇಜಿನ 29 ಹಳ್ಳಿಗಳ ಜನರು ಯಾವ ಪರಿಸ್ಥಿತಿಯಲ್ಲಿ ವಾಸ ಮಾಡುತ್ತಿದ್ದಾರೆ. ಮಸ್ಕಿ ನಾಲಾ, ರಾಮತಹಳ್ಳಿ, ಭೀಮಾ ಹಳ್ಳಿ, ಖಂಡೂರಿನಾಲಾ, ದೂದಗಂಗಾ, ತುಂಗಾಭದ್ರಾ ಮೇಲ್ದಂಡೆ ಅವು ನಿಮ್ಮವೆ 12.4 ಟಿಎಂಸಿ, ಸಿಂಗಟಾಲ್ಲೂರು LIS 18 ಟಿಎಂಸಿಯಿಂದ ಮಾನ್ಯ ಪ್ರಕಾಶ್‌ರವರೆ ಮಾನ್ಯ ಪಾಟೀಲ್‌ರವರೆ 18 ಟಿಎಂಸಿಯಿಂದ ಅದನ್ನು 12 ಟಿಎಂಸಿಗೆ ಇಳಿಸಿದ್ದಾರೆ. ಅದನ್ನು ತಾವು 18 ಟಿಎಂಸಿಗೆ ತೆಗೆದುಕೊಂಡು ಹೋಗಬೇಕಾಗಿದೆ. ಹೇಗಾಗುತ್ತದೆ ಎಂದರೆ 30 ಟಿಎಂಸಿ ನೀರು ಹೂಳೂ ಬಂದಿದೆ ಅಲ್ಲಿ, ಅದನ್ನು ಬಳಸಿಕೊಳ್ಳಿ.

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಗೃಹ ಸಚಿವರು ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ತಾವು ದಯಮಾಡಿ ಕೇಳಬೇಕು. ಅಂಗಡಿಯವರ ವರದಿಯ ಪ್ರಕಾರ ಅಲ್ಲಿ ಸ್ವಲ್ಪ ನೀರು ಸಿಗುತ್ತದೆ. ಇನ್ನೊಂದು ಕಾಗಿನೆಲೆಯಲ್ಲಿ ಒಂದಿಷ್ಟು ನೀರು ಸಿಗುತ್ತದೆ. ಮಲಪ್ರಭಾದಲ್ಲಿ ಒಂದಿಷ್ಟು ನೀರು ಸಿಗುತ್ತದೆ. ಇವೆಲ್ಲವನ್ನೂ ಸೇರಿಸಿ 18 ಟಿಎಂಸಿ ನೀರು ಎಂದು Tribunalನವರು ಮಾಡಿದ್ದಾರೆ. ಆ 18 ಟಿಎಂಸಿ ಅಂದರೆ ಈಗರಿತಕ್ಕಂತಹ ತೊಂದರೆ ಇದೆ ಎಂದು ಹೇಳಿ, ರಾಯಚೂರು ಜಿಲ್ಲೆ, ಬಳ್ಳಾರಿ ಜಿಲ್ಲೆಯ ತಾಲ್ಲೂಕಿನ 3 ತಾಲ್ಲೂಕುಗಳು ಅವರೆಲ್ಲರೂ ಕೂಡ ಭತ್ತದ ಕಣಜ ಎನ್ನುವಂತಹ ಪ್ರದೇಶಗಳು 18 ಟಿಎಂಸಿ ನೀರು ಇಲ್ಲ, ನಮ್ಮ ಅಚ್ಚುಕಟ್ಟನ್ನು disturb ಮಾಡಬೇಡಿ ಎಂದು ಹೇಳಿದರು. ಇದಾದ ಮೇಲೆ ಮಾನ್ಯ ಕೆ.ಸಿ.ರೆಡ್ಡಿಯವರ ಸಮಿತಿ ಆಯಿತು. ಕೆ.ಸಿ.ರೆಡ್ಡಿಯವರ ಸಮಿತಿ 12 TMC ನೀರು ಇದೆ ಎಂದು ಬಂದಿದ್ದಾರೆ. ಇವತ್ತು ನಮ್ಮಲ್ಲಿ ಒಂದೂ ಕೂಡ ಸಮತೋಲನ ಕೆರೆಗಳಿಲ್ಲ. 100 TMC ಗಿಂತ ಹೆಚ್ಚು ನೀರನ್ನು ನಾವು ನದಿಗಳಿಗೆ ಬಿಟ್ಟೆವು. 18

TMC ನೀರು ಎಂದು ಹೇಳುವುದೂ ಒಂದು Notional ಪರಿಕಲ್ಪನೆ. 12 TMC ನೀರು ಸಿಗಬಹುದೇನೋ ಗೊತ್ತಿಲ್ಲ. ಆದ್ದರಿಂದಲೇ ಹಿಂದಿನ ಸರ್ಕಾರದವರು...

ಶ್ರೀ ಬಸವರಾಜರಾಯರೆಡ್ಡಿ : ತಮಗೆ ಗೊತ್ತಿದೆ, 1947 ರಲ್ಲಿ ತುಂಗಭದ್ರಾ ಡ್ಯಾಂ ಪ್ರಾರಂಭವಾಗಿ 1953 ರಲ್ಲಿ ಅದನ್ನು ಪೂರ್ಣಗೊಳಿಸಿದ ಸಂದರ್ಭದಲ್ಲಿ full capacity one storage 134 TMC. ಒಂದು ಟಿಎಂಸಿ ಹೆಚ್ಚು ಕಡಿಮೆ ಹೇಳಿರಬಹುದು. ಇವತ್ತು 102 TMC ಇದೆ. 30 TMC ಅಷ್ಟು ಹೂಳು ಬಂದಿದೆ. ಆ ನೀರು ಈಗ ಆಂದ್ರಕ್ಕೆ ಹೋಗುತ್ತಿದೆ. ನಿಮಗೆ ಕೆಳಗೂ ಜಲಾಶಯ ಇಲ್ಲ, ಮೇಲೆಯೂ ಜಲಾಶಯ ಇಲ್ಲ. ಸಿಂಗಟಾಲೂರಿನಲ್ಲಿ ನೀವು 18 TMC ಗೆ ಮಾಡಿದರೆ ಏನೂ ತಪ್ಪಿಲ್ಲವೆಂದು ನಾನು ಹೇಳುವುದು.

ಶ್ರೀ ಡಿ.ಆರ್.ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಕಳೆದ 10 ವರ್ಷಗಳ outflow ನೀವು ನೋಡಿದರೆ, ಏಳು ವರ್ಷಗಳಿಂದ ಅವರಿಗೆ ಎಷ್ಟು ನೀರು ಹೋಗಬೇಕು, ಅದಕ್ಕಿಂತ ಹೆಚ್ಚಾಗಿ ನೀರು ಹೋಗಿದೆ. ಮೂರು ವರ್ಷ ಮಾತ್ರ ಕಡಿಮೆಯಾಗಿದೆ. ಹೆಚ್ಚಿನ ನೀರನ್ನು ನಾವು ಆಂದ್ರದವರಿಗೆ ಏಕೆ ಕೊಡಬೇಕು? ನಮ್ಮಲ್ಲಿಯೇ ಅದನ್ನು ಏಕೆ ಬಳಸಿಕೊಳ್ಳಬಾರದು? ಏಳು ವರ್ಷಗಳ ಕಾಲ ಅನುಕೂಲವಾಗಿದೆ. ಮೂರು ವರ್ಷ ತೊಂದರೆ ಇದ್ದಾಗ ನಾವು ಅಣ್ಣತಮ್ಮಂದಿರು ಹೇಗೋ ಹಂಚಿಕೊಳ್ಳೋಣವಂತೆ. ಆ ದೃಷ್ಟಿಯಿಂದ ನೀವು ವಿಚಾರ ಮಾಡಿ.

ಶ್ರೀ ಎಂ.ಪಿ.ಪ್ರಕಾಶ್ : ಸಮತೋಲನ ಕೆರೆ ಮಾಡಿ ಎಂದು ಬಹಳ ವರ್ಷಗಳಿಂದ ಹೇಳಿಕೊಂಡು ಬಂದಿದ್ದೇವೆ. ಒಂದೊಂದಕ್ಕೆ 30 ರಿಂದ 40 ಕೋಟಿ ರೂ. ಕೊಟ್ಟಿದ್ದರೆ ಆಗಿ ಹೋಗುತ್ತಿತ್ತು. ಯಾರೂ ಅದರ ಪ್ರಯತ್ನ ಮಾಡಲಿಲ್ಲ. ಈಗ ಮಾಡುವುದು ಬೇರೆ ವಿಷಯ. ಈ ಅನ್ಯಾಯಕ್ಕೆ ಕಾರಣ ಏನು ಎನ್ನುವುದು ತಾವು ಯೋಚನೆ ಮಾಡಿ.

ಶ್ರೀ ಬಸವರಾಜರಾಯರೆಡ್ಡಿ : ಸಿಗಟಾಲೂರು 18 TMC ಬೆಳಗಾಂನ ಬಳ್ಳಾರಿ ನಾಲಾ 2 TMC, ಗುಲ್ಬರ್ಗ ಜಿಲ್ಲೆಯ ಕಾಗಿನಾ ಸ್ವಂತಿ, ಮತ್ತು ಭದ್ರಾ ಮೇಲ್ದಂಡೆ ಯೋಜನೆಗಳು. ಈ ಯೋಜನೆಗಳನ್ನು ಪೂರ್ಣಗೊಳಿಸುವುದರ ಜೊತೆಗೆ, ಮಾನ್ಯ ಯಡಿಯೂರಪ್ಪನವರೇ ತಮ್ಮ ಮೈನರ್ ಇರ್ರಿಗೇಷನ್ ಇಲಾಖೆಯಲ್ಲಿ ಇನ್ನೂ 93 TMC ನೀರನ್ನು ನೀವು ಬಳಕೆ ಮಾಡಿಕೊಂಡಿಲ್ಲ, 93 TMC water of the MI Tanks. ನೀವು ಹೆಚ್ಚಿನ ಹಣವನ್ನು ಇದಕ್ಕೆ ಕೊಡದೇ ಇದ್ದರೆ, 729 TMC ನೀರನ್ನು ನೀವು ಬಳಕೆ ಮಾಡುವುದಕ್ಕಾಗುತ್ತಿಲ್ಲ. 729 TMC Committed utilization ಮಾಡಬೇಕೆಂದು ಅದನ್ನು 31 ಮೇ 2000ರ ಒಳಗಾಗಿ ಮಾಡಬೇಕೆಂದು ಬಚಾವತ್ ಆಯೋಗ ಹೇಳಿತ್ತು. ಇವತ್ತಿಗೂ ಕೂಡ ನೀವು ಮಾಡಿಲ್ಲ. ಹೀಗಾಗಿ ಇದರ ಬಗ್ಗೆ ಹೆಚ್ಚು ಗಮನ

ಹರಿಸಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಮಹದಾಯಿ ಯೋಜನೆ ಬಗ್ಗೆ ಎಲ್ಲರೂ ಮಾತನಾಡುತ್ತಾರೆ. ಮಹದಾಯಿ ಯೋಜನೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಮಾಂಡ್ವಿ ರಿವರ್ ಇದೆ, ಮಾಂಡ್ವಿ ರಿವರ್‌ಗೆ ಕರ್ನಾಟಕದಿಂದ ಮತ್ತು ಕರ್ನಾಟಕದ ಸುತ್ತಮುತ್ತಲು ಮತ್ತು ಗೋವಾ ಪ್ರದೇಶಗಳಿಂದ ಸುಮಾರು 200 TMC ನೀರು ಸಮುದ್ರಕ್ಕೆ ಹೋಗುತ್ತಿದೆ. ಮಾಂಡ್ವಿ ರಿವರ್‌ಗೆ ಯಾವುದೇ ಡ್ಯಾಂಗಳಿಲ್ಲ. ಯಾವುದೇ ನೀರಾವರಿ ಆಗುತ್ತಿಲ್ಲ. ಗೋವಾ ರಾಜ್ಯದವರು ಅನಾವಶ್ಯಕವಾಗಿ ಕರ್ನಾಟಕಕ್ಕೆ ತೊಂದರೆ ಕೊಡಬೇಕೆಂದು ಹೇಳಿ, ಮತ್ಸರ ಬುದ್ಧಿಯಿಂದ ಈ ಮಹದಾಯಿ ಯೋಜನೆಗೆ ಅಡ್ಡಗಾಲು ಹಾಕುತ್ತಿದ್ದಾರೆ. ಇದು ನಿಲ್ಲಬೇಕು. ಅದಕ್ಕಾಗಿ ಹಿಂದೆ NDA ಸರ್ಕಾರ ಮಾನ್ಯ ವಾಜಪೇಯಿಯವರು ಪ್ರಧಾನ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ 7.56 TMC ನೀರನ್ನು ಉಪಯೋಗ ಮಾಡಿಕೊಳ್ಳಲಿಕ್ಕೆ ಕರ್ನಾಟಕಕ್ಕೆ ತಾತ್ವಿಕವಾದ ಒಪ್ಪಿಗೆ ಕೊಟ್ಟರು. ಒಪ್ಪಿಗೆ ಕೊಟ್ಟ ತಕ್ಷಣ ಕೇವಲ ಆರು ತಿಂಗಳುಗಳು ಒಂದು ವರ್ಷದಲ್ಲಿ ಅದನ್ನು ಸ್ಟೇ ಮಾಡಿದರು. ಹೀಗಾಗಿ ಇವತ್ತು ಆ ಯೋಜನೆಯನ್ನು ಕೈಗೆತ್ತಿಕೊಳ್ಳುವುದಕ್ಕಾಗುತ್ತಿಲ್ಲ. ಸುಮ್ಮನೆ ನಮ್ಮ ಮಾನ್ಯ ಈಶ್ವರಪ್ಪನವರು foundation ಹಾಕುತ್ತಾರೆ. ಇದು ಹೇಗೆ ಸಾಧ್ಯ? ಅಂತರರಾಜ್ಯದ ನದಿ ನೀವು ಹೇಗೆ ಕೆಲಸ ಮಾಡುತ್ತೀರಿ? ಬರೀ ಪ್ರಚಾರಕ್ಕಾಗಿ ಮಾಡಿದರೆ ಆಗುವುದಿಲ್ಲ. ಈ ನೀರನ್ನು ಉಪಯೋಗ ಮಾಡುವುದಕ್ಕೆ ಮತ್ತೆ stay ಕೊಟ್ಟಿದ್ದೇ NDA Government. ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯ ಮಂತ್ರಿಗಳು ಮತ್ತು ಸದನದ ಎಲ್ಲಾ ಮುಖಂಡರೂ ಸೇರಿ ನಾವು ಮತ್ತೆ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಿ ಏನು ಹಿಂದಿನ ಕೇಂದ್ರ ಸರ್ಕಾರ ಸ್ಟೇ ಕೊಟ್ಟಿದೆ. ಅದನ್ನು ತೆಗೆದು ಹಾಕಿ, ನೀರಾವರಿ ಕೆಲಸ ಪ್ರಾರಂಭ ಮಾಡುವುದಕ್ಕೆ ಅನುಮತಿ ಕೊಡದೇ ಇದ್ದರೆ ಇದು ಸುಮ್ಮನೆ ಪ್ರಚಾರ ಆಗುತ್ತದೆ. ಇದು ಏನೂ ಮಾಡುವುದಕ್ಕಾಗುವುದಿಲ್ಲ. ಮಹದಾಯಿ ಮಹದಾಯಿ ಎಂದು ಹೇಳಿದರೆ ಏನೂ ಪ್ರಯೋಜನವಿಲ್ಲ. ಅದಕ್ಕಾಗಿ ನಾವು ಈ ಒತ್ತಾಯವನ್ನು ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯ ಮಂತ್ರಿಗಳು ಗೋವಾ ರಾಜ್ಯದ ಮುಖ್ಯ ಮಂತ್ರಿಗಳ ಜೊತೆ ಸೌಹಾರ್ದತೆಯ ಮಾತುಕತೆಗೆ ಪ್ರಯತ್ನ ಮಾಡಬೇಕು. ಈ ಸರ್ಕಾರ ಬಂದು 18 ತಿಂಗಳುಗಳಾದವು. ಇವತ್ತಿನವರೆಗೂ ಕೂಡ ಸೌಹಾರ್ದತೆಯ ಮಾತುಕತೆ ಆಗಿಲ್ಲ. ಇದರ ಬಗ್ಗೆ ಏನು ಚಿಂತನೆ ಮಾಡುತ್ತೀರಿ ಎನ್ನುವುದನ್ನು ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕೆಂದು ಹೇಳಿ ಈ ಸಂದರ್ಭದಲ್ಲಿ ನಾನು ಕೇಳುತ್ತೇನೆ. ನಾನು ಸ್ಕೀಮ್ ಬಗ್ಗೆ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಉಪಾಧ್ಯಕ್ಷರೆ ತಮಗೆ ಗೊತ್ತಿದೆ ಕೃಷ್ಣೆ ನದಿಯಲ್ಲಿ ಸುಮಾರು 2400 TMC ನೀರಿನ ಲಭ್ಯತೆ ಇದೆ ಎನ್ನುವುದನ್ನು ವಿಚಾರ ಮಾಡಿ ಬಚಾವತ್ ರವರು 1969 ರಲ್ಲಿ 200 TMC ಗೆಲವಾರ್ಡ್

ಮಾಡಿದರು. 400 TMC ಗೆ 2000ನೇ ಇಸವಿಯಲ್ಲಿ Tribunal ರಚನೆ ಮಾಡಿ, ಉಳಿದ ನೀರನ್ನು ಹಂಚಿಕೆ ಮಾಡಿ ಎನ್ನುವಂತಹ ಮಾತನ್ನು ಹೇಳಿದರು. ಆದರೆ 2000ನೇ ಇಸವಿ ಹೊತ್ತಿಗೆ Tribunal ರಚನೆ ಆಗಬೇಕಾಗಿತ್ತು. ರಾಜಕೀಯ ಒತ್ತಡದ ಕಾರಣಕ್ಕಾಗಿ ಟ್ರಿಬ್ಯುನಲ್ ರಚನೆ ಆಗಲಿಲ್ಲ. ಮಾನ್ಯ ಯಡಿಯೂರಪ್ಪನವರಿಗೆ ಸ್ಪಷ್ಟವಾಗಿ ಗೊತ್ತಿದೆ. ಮಾನ್ಯ ಚಂದ್ರಬಾಬು ನಾಯ್ಡುರವರು 2000ನೇ ಇಸವಿಯಲ್ಲಿ ಆಂಧ್ರದ ಮುಖ್ಯಮಂತ್ರಿಯಾಗಿ NDA patner ಆಗಿದ್ದರು. ಅವರು ಮಾನ್ಯ ವಾಜಪೇಯಿ ಸರ್ಕಾರದ ಮೇಲೆ Tribunal ರಚನೆ ಮಾಡಬೇಡಿ ಎಂದು ಒತ್ತಡ ತಂದರು. ಮಾನ್ಯ ಪ್ರಕಾಶ್ ರವರಿಗೆ ಚೆನ್ನಾಗಿ ಗೊತ್ತಿದೆ, ಮಾನ್ಯ ಜೆ.ಹೆಚ್ ಪಟೇಲರ ಸರ್ಕಾರ ಮತ್ತು ಮಾನ್ಯ ಎಸ್.ಎಂ.ಕೃಷ್ಣರವರ ಸರ್ಕಾರ Tribunalನ್ನು ರಚನೆ ಮಾಡಿ ಎಂದು ಒತ್ತಡ ತಂದರು. ರಾಜಕೀಯ ಕಾರಣಕ್ಕಾಗಿ, ರಾಜಕೀಯ ಒತ್ತಡಕ್ಕೆ ಮಣಿದು, ಹಿಂದಿನ NDA ಸರ್ಕಾರ Tribunal ರಚನೆ ಮಾಡಲಿಲ್ಲ. ನನಗೆ ಅನುಭವ ಇದೆ. ನಾನು ಹಿಂದೆ special representative ಆಗಿ ಕೆಲಸ ಮಾಡಿದಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮುಖ್ಯ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಹಲವಾರು ಸಾರಿ ಆಗಿನ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಒತ್ತಾಯ ಮಾಡಿದ್ದೇವೆ. 2001ನೇ ಇಸವಿಯಲ್ಲಿ ಅಲ್ಲಿ ಮಾನ್ಯ ಚಂದ್ರ ಬಾಬುನಾಯ್ಡುರವರ ಒತ್ತಡಕ್ಕೆ ಮಣಿದು ಇದು ಆಗಲಿಲ್ಲ. ನಾಲ್ಕುವರೆ ವರ್ಷಗಳ ಕಾಲ ಕೇಂದ್ರದಲ್ಲಿರುವಂತಹ NDA ಸರ್ಕಾರ second Tribunalನ್ನು ಕೃಷ್ಣ ನದಿಗೆ ರಚನೆ ಮಾಡದೇ ಇರುವುದರಿಂದ ನಮಗೆ ನೀರಿನ ಹಂಚಿಕೆ ಆಗಲಿಲ್ಲ. ಇದರ ಅನ್ಯಾಯ ಕರ್ನಾಟಕಕ್ಕೆ ಆಯಿತು. 2004ರಲ್ಲಿ ಮಾನ್ಯ ಮನಮೋಹನ್ ಸಿಂಗ್ ರವರು ಕುಮಾರ್ ರವರ ನೇತೃತ್ವದಲ್ಲಿ Tribunal ರಚನೆ ಆಯಿತು. Tribunal ಬಹಳ fast ಆಗಿ ನಡೆಯುತ್ತಿದೆ. ತಮಗೂ ಗೊತ್ತಿದೆ. ಮಹಾರಾಷ್ಟ್ರದ ಹಿಯರಿಂಗ್ ಆಯಿತು, ಕರ್ನಾಟಕದ ಹಿಯರಿಂಗ್ ಆಗಿದೆ, ಆಂದ್ರಪ್ರದೇಶದ ಹಿಯರಿಂಗ್ ಆಗಿದೆ. ಬಹಳ fast ಆಗಿ ಹೋಗುತ್ತಿದೆ. ಉಳಿದಿರುವಂತಹ 400 ರಿಂದ 450 TMC ನೀರಿನಲ್ಲಿ ಕರ್ನಾಟಕಕ್ಕೆ ಸುಮಾರು 300 TMC ಬರಬೇಕಾಗಿದೆ. ಏಕೆಂದರೆ, ನಾನು ಮೊದಲೇ ಹೇಳಿದಂತೆ ಬಚಾವತ್ Tribunal ನಲ್ಲಿ ನಮಗೆ ಸುಮಾರು 200 TMC ಅಷ್ಟು ನೀರಿನ ಅನ್ಯಾಯವಾಗಿದೆ. ನಮಗೆ ನ್ಯಾಯವಾಗಿ ಸಿಗಬೇಕಾದ 200 TMC ನೀರು ನಮಗೆ ಅನ್ಯಾಯವಾಗಿದೆ. ಅದನ್ನು ಸರಿಪಡಿಸಬೇಕಾದರೆ ನೀವು ನಿಮ್ಮ ವಾದವನ್ನು ಮಂಡಿಸಿ 300 TMC ನೀರನ್ನಾದರೂ ಕನಿಷ್ಟ ಪಕ್ಷ ತರಬೇಕು. ಅದಕ್ಕೇ ಒಂದು master plan ಮಾಡಿ. Where is a master plan? ಅದಕ್ಕೆ ನೀವು ಏನು ಮಾಡಿದ್ದೀರಿ? ನಾಳೆ

ಅವಾರ್ಡ್ ಆಗಬಹುದು, 180 TMC ಕೊಡಬಹುದು, 200 TMC ನೀರು ಕೊಡಬಹುದು, ನಿಮ್ಮ ಒತ್ತಾಯಕ್ಕೆ ಮಣಿದು 300 TMC ನೀರು ಕೊಡಬಹುದು. ಕನಿಷ್ಠ ಪಕ್ಷ 200 TMC ಬಂದೇ ಬರುತ್ತದೆ. ಆ 200 TMC ನೀರಿಗೆ 20,000 ಕೋಟಿ ರೂಪಾಯಿಗಳು ಬೇಕಾಗುತ್ತವೆ. ಅದಕ್ಕೆ master plan ಏನು ಮಾಡಿದ್ದೀರಿ? ಎಲ್ಲೆಲ್ಲಿ ಕಾಲುವೆಗಳನ್ನು ಮಾಡಬೇಕೆಂದು ಸರ್ವೇ ಕೆಲಸ ಪ್ರಾರಂಭ ಮಾಡಿದ್ದೀರಿ? ಯಾವುದಕ್ಕೂ ಇಲ್ಲ. ನೀವು ಹಣ ಕಡಿಮೆ ಮಾಡಿದ್ದೀರಿ. 29% ನಿಂದ 17% ಗೆ ಇಳಿಸಿದ್ದೀರಿ. ದಯಮಾಡಿ ಈ ಹಣವನ್ನು ಹೆಚ್ಚು ಮಾಡಿ. ಇಲ್ಲದಿದ್ದರೆ ರಾಜಕೀಯ ಇಚ್ಛಾಶಕ್ತಿ ಈ ಸರ್ಕಾರಕ್ಕೆ ಇಲ್ಲ. ಅದಕ್ಕಾಗಿ ಈ ವಿಚಾರದಲ್ಲಿ ಸರ್ಕಾರ ಗಂಭಿರವಾಗಿ ವಿಚಾರ ಮಾಡುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಿಂದೆ ಮಾನ್ಯ ಜೆ.ಹೆಚ್. ಪಟೇಲರು ಇದ್ದಂತಹ ಸಂದರ್ಭದಲ್ಲಿ ಅವರ ಸರ್ಕಾರವನ್ನು ನಾವು ಮೆಚ್ಚಬೇಕಾಗುತ್ತದೆ. 524.65 ಮೀಟರ್ ಹೈಟ್‌ಗೆ ಡ್ಯಾಂ ಅನ್ನು ಕಟ್ಟಬೇಕೆಂದು ತೀರ್ಮಾನ ಮಾಡಿ ಕಟ್ಟಿದರು. ಆಂಧ್ರಪ್ರದೇಶದವರು Supreme Courtಗೆ ಹೋದರು. Supreme Court ನಿಮಗೆ ನೀರಿನ ಬಳಕೆ ಎಷ್ಟಾಗುತ್ತದೆ ಎಂದು ವಿಚಾರ ಮಾಡಿ 519.65 TMC ರೆಡಿ ಇದೆ. B scheme ನಲ್ಲಿ ನಿಮಗೆ 200 TMCನೀರಿನ ಅವಾರ್ಡ್ ಆದರೆ, ನಿಮ್ಮ ನೀರಿನ ಸಂಗ್ರಹವನ್ನು ಎಲ್ಲಿ ಮಾಡುತ್ತೀರಿ ನೀವು? ಪ್ಯಾರಲಲ್ಲಾಗಿ ನಿಮಗೆ ಕೃಷ್ಣ ನದಿಯಲ್ಲಿ ಡ್ಯಾಂ ಕಟ್ಟುವುದಕ್ಕೆ ಅವಕಾಶವಿಲ್ಲ. ಏಕೆಂದರೆ, ಆಲಮಟ್ಟಿ ಡ್ಯಾಂ ನಿಂದ ಹಿನ್ನೀರು ಮಹಾರಾಷ್ಟ್ರಕ್ಕೆ ಮುಟ್ಟುತ್ತದೆ. ಮುಂದೆ ಇರುವಂತಹ ನಾರಾಯಣಪುರ ಡ್ಯಾಂ ಅನ್ನು ಕಟ್ಟಿದರೆ ಅದು ಆಲಮಟ್ಟಿಗೆ ಮುಟ್ಟುತ್ತದೆ. ನಾರಾಯಣಪುರದಿಂದ ಮುಂದೆ ಕಟ್ಟುವುದಕ್ಕೆ ಸಾಧ್ಯವಿಲ್ಲ. ನಾವು ಆಂಧ್ರಪ್ರದೇಶಕ್ಕೆ ಹೋಗಿ ಬಿಡುತ್ತೇವೆ.ಹೀಗಾಗಿ 524.65 ಟಿ.ಎಂ.ಸಿ. ನಮಗೆ ಅನಿವಾರ್ಯವಾಗಿ ಬೇಕೇ ಬೇಕು. It is inevitable. ಇದನ್ನು ನೀವು ಉಳಿಸಿಕೊಳ್ಳಬೇಕಾಗುತ್ತದೆ. ಆ ಬಗ್ಗೆ ಸರ್ಕಾರ ಟ್ರಿಬ್ಯುನಲ್ ಮುಂದೆ ಕನ್‌ವಿನ್ಸ್ ಮಾಡಬೇಕಾಗುತ್ತದೆ. ಈ ಬಗ್ಗೆ ಸ್ಪಷ್ಟವಾಗಿ ಈ ಸಕಾರ ಕನ್‌ವಿನ್ಸ್ ಮಾಡದೇ ಹೋದರೆ ಅವರು ಅವಾರ್ಡ್ ಮಾಡಿದರೂ ಕೂಡ ಮುಂದೆ ಆ ನೀರನ್ನು ನಿಲ್ಲಿಸುವುದಕ್ಕೆ ಸಂಗ್ರಹಣೆ ಮಾಡುವುದಕ್ಕೆ ಯಾವುದೇ ಸ್ಥಳವಿಲ್ಲ. ಅದರ ಬಗ್ಗೆ ಸರ್ಕಾರ ಗಂಭಿರವಾಗಿ ಚಿಂತನೆಯನ್ನು ಮಾಡಬೇಕಾಗುತ್ತದೆ. ಮತ್ತೆ ಇದರಿಂದ ಆಲಮಟ್ಟಿ, ನಾರಾಯಣಪುರ ಡ್ಯಾಂನಿಂದ 20 ಲಕ್ಷ ಎಕರೆ ನೀರಾವರಿಯಾಗುತ್ತದೆ. ಇದರ ಬಗ್ಗೆ ರಾಜಕೀಯ ಇಚ್ಛಾಶಕ್ತಿಯನ್ನು ಈ ಸರ್ಕಾರ ತೋರಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ, ಇನ್ನು ಬಾಗಲಕೋಟೆ ಪುನರ್ವಸತಿ ಬಗ್ಗೆ ನಾವು ಬಹಳ ಮಾತಾಡಬೇಕಿದೆ. ಏಕೆಂದರೆ ಬಾಗಲಕೋಟೆಯಲ್ಲಿ ಸುಮಾರು ಒಂದೂವರೆ ಲಕ್ಷ

ಜನಸಂಖ್ಯೆ ಇದೆ. ಹಿಂದೆ ಸುಮಾರು ಒಂದು ಲಕ್ಷ ಜನಸಂಖ್ಯೆಗೆ ಸುಮಾರು 667 ಕೋಟಿ ರೂಪಾಯಿಗಳ ರಿಹ್ಯಾಬಿಲಿಟೇಶನ್ ಪ್ಲಾನ್ ಮಾಡಿದ್ದರು. ಹಿಂದೆ ಮಾನ್ಯ ಧರ್ಮಸಿಂಗ್‌ರವರ ನಾಯಕತ್ವದ ಸರ್ಕಾರ ಬರುವ ಮೊದಲು ಮಾನ್ಯ ಯಡಿಯೂರಪ್ಪನವರು ವಿರೋಧ ಪಕ್ಷದ ನಾಯಕರಾಗಿದ್ದರು. ಆಗ ಅಲ್ಲಿ ಹಿನ್ನೀರಿನಿಂದ ತೊಂದರೆಯಾಯಿತು. ಆ ಸಂದರ್ಭದಲ್ಲಿ ಮಾನ್ಯ ಯಡಿಯೂರಪ್ಪನವರು. ನಮ್ಮ ಸರ್ಕಾರ ಬಂದರೆ ಒಂದು ತಾಸಿನಲ್ಲಿ 667 ಕೋಟಿ ರೂಪಾಯಿಗಳನ್ನು ಕೊಟ್ಟುಬಿಡುತ್ತೇವೆಂದು ಹೇಳಿದ್ದರು. ಅದನ್ನು ಈಗ ಯಡಿಯೂರಪ್ಪನವರಿಗೆ ಜ್ಞಾಪಿಸುವುದಕ್ಕೆ ಇಚ್ಛೆಪಡುತ್ತೇನೆ. ಒಂದು ತಾಸಿನಲ್ಲಿ ಕೊಟ್ಟುಬಿಡುತ್ತೇನೆಂದು ಹೇಳಿದ್ದರು. ಆದರೆ ಈ ಸರ್ಕಾರ 2006-07ನೇ ಸಾಲಿನಲ್ಲಿ ಮಾನ್ಯ ಯಡಿಯೂರಪ್ಪನವರು ಹಣಕಾಸಿನ ಖಾತೆಯನ್ನು ಹೊಂದಿ ಉಪ ಮುಖ್ಯಮಂತ್ರಿಗಳಾದ ಮೇಲೆ ಬಾಗಲಕೋಟೆಗೆ ಕೊಟ್ಟಿದ್ದು ಕೇವಲ 26 ಕೋಟಿ. Last year's expenditure was only Rs.26 crores. Allotment is Rs.26 crores and expenditure is Rs. 26 crores.ಹೀಗಾಗಿ ಮಾನ್ಯ ಯಡಿಯೂರಪ್ಪನವರೆ. ನಿಮ್ಮ ಮಾತು ಎಲ್ಲಿ ಹೋಯಿತು? ಒಂದು ತಾಸಿನಲ್ಲಿ 667 ಕೋಟಿ ರೂಪಾಯಿಗಳನ್ನು ಕೊಡುತ್ತೇನೆಂದು ಹೇಳಿದ್ದ ನಿಮ್ಮ ಮಾತು ಎಲ್ಲಿಗೆ ಹೋಯಿತು? ಏಕೆ ಈ ರೀತಿ ನೀವು ಅಧಿಕಾರದಲ್ಲಿ ಇಲ್ಲದಿದ್ದಾಗ ಒಂದು ಮಾತು, ಅಧಿಕಾರಕ್ಕೆ ಬಂದ ಮೇಲೆ ಒಂದು ರೀತಿ ಮಾತನಾಡುತ್ತೀರಿ? ಇದು ನನಗೆ ಅರ್ಥವಾಗುತ್ತಿಲ್ಲ. ನಾವು ನಿಜವಾಗಿಯೂ ಕೂಡ ಹಿಂದಿನ ಸರ್ಕಾರವನ್ನು ಮೆಚ್ಚಬೇಕಾಗುತ್ತದೆ. ಎಸ್.ಎಂ.ಕೃಷ್ಣರವರ ಸರ್ಕಾರವಿದ್ದಾಗ ಬಾಗಲಕೋಟೆಗೆ ಎಷ್ಟು ಕೊಟ್ಟಿದ್ದಾರೆಂಬುದನ್ನು ಹೇಳುತ್ತೇನೆ. 1999-2000ನೇ ಸಾಲಿನಲ್ಲಿ 66 ಕೋಟಿ, 2000-2001 ರಲ್ಲಿ 50 ಕೋಟಿ, 2003-04ರಲ್ಲಿ 37 ಕೋಟಿ, 2005-06ರಲ್ಲಿ 31 ಕೋಟಿ. ಈಗ ನೀವು ಕೊಟ್ಟಿರುವುದು 26 ಕೋಟಿ.

ಶ್ರಿ ಬಿ.ಎಸ್.ಹೊರಟ್ಟಿ : ಆಗ ನೀವು ಇನ್ನೂ ಕಾಂಗ್ರೆಸ್ ನಲ್ಲಿ ಇರಲಿಲ್ಲ. ಆಗ ನೀವು ಜನತಾ ದಳದಲ್ಲಿದ್ದಿರಿ.

ಶ್ರೀ ಬಸವರಾಜ ರಾಯರೆಡ್ಡಿ : ಕಾಂಗ್ರಸ್, ಜನತಾ ದಳ ಎಂದು ನಾನು ಹೇಳಲಿಲ್ಲ. ನಾನು ದೇವೇಗೌಡರನ್ನು ಹೊಗಳಲಿಲ್ಲವೇ, ಜೆ.ಹೆಚ್. ಪಟೇಲ್ ರವರನ್ನು ಹೊಗಳಲಿಲ್ಲವೇ ಹೇಳಿ. ನಾನು ದೇವೇಗೌಡರನ್ನು ಹೊಗಳಿದ್ದೇನೆ. ವಿರೇದ್ರಪಾಟೀಲರನ್ನು ಹೊಗಳಿದ್ದೇನೆ. ನೀವು ಅವರಂತೆ ಮಾಡಲಿಲ್ಲವೆಂದು ಹೇಳಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಇವರಿಬ್ಬರೂ ಒಂದೇ ನಾಣ್ಯದ ಎರಡು ಮುಖ ಇದ್ದಂತೆ.

ಉಪಾಧ್ಯಕ್ಷರೆ : ಬಸವರಾಜ ರಾಯರೆಡ್ಡಿಯವರೆ, ನೀವು 5.00 ಗಂಟೆಗೆ ಮಾತನಾಡಲು ಆರಂಭಿಸಿದ್ದೀರಿ. ಈಗ 6.30 ಗಂಟೆಯಾಗುತ್ತಿದೆ. ಇನ್ನೂ

ಮಾತನಾಡುವವರು 25 ಮಂದಿ ಇದ್ದಾರೆ. ಆದುದರಿಂದ ದಯವಿಟ್ಟು ಇನ್ನು 10 ನಿಮಿಷದಲ್ಲಿ ತಮ್ಮ ಭಾಷಣವನ್ನು ಮುಗಿಸಿ. ನೀವು ಬಹಳ ಚೆನ್ನಾಗಿಯೇ ಮಾತನಾಡುತ್ತಿದ್ದೀರಿ. ಆದರೆ ಬೇರೆಯವರಿಗೂ ಅವಕಾಶ ಮಾಡಿಕೊಡಬೇಕು ಎನ್ನುವ ಉದ್ದೇಶದಿಂದ ನಿಮ್ಮ ಭಾಷಣವನ್ನು ಬೇಗ ಮುಕ್ತಾಯ ಮಾಡಿ ಎಂದು ಹೇಳುತ್ತಿದ್ದೇನೆ. ನಿಮ್ಮ ಭಾಷಣ ಬಹಳ ಚೆನ್ನಾಗಿದೆ. ನಾನಂತೂ ನಿಮ್ಮ ಭಾಷಣವನ್ನು ಒಪ್ಪಿಕೊಂಡಿದ್ದೇನೆ.

ಶ್ರೀ ಬಸವರಾಜ ರಾಯರೆಡ್ಡಿ:- ಮಾನ್ಯ ಉಪಾಧ್ಯಕ್ಷರೆ, ನಾನು ಈಗಾಗಲೇ ಈ ಸರ್ಕಾರಕ್ಕೆ ಸ್ಪಷ್ಟವಾಗಿ ಒತ್ತಾಯವನ್ನು ಮಾಡಿದ್ದೇನೆ. ನಿಮ್ಮ ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸಿ. ಈ ಅಗ್ಗದ ಜನಪ್ರಿಯತೆಯ ಕೆಲಸಗಳನ್ನು ಬಿಟ್ಟು ನೀರಾವರಿಗಾಗಿ ತಾವು ಹೆಚ್ಚು ಗಮನವನ್ನು ಕೊಡಬೇಕಾಗಿದೆ. ಇನ್ನು ಕಾವೇರಿ ಜಲಾನಯನ ಪ್ರದೇಶದ ಬಗ್ಗೆ ಹೇಳಬಯಸುತ್ತೇನೆ. ದುರಾದೃಷ್ಟದಿಂದ ಈಗಾಗಲೇ ಕಾವೇರಿ ತೀರ್ಪು ಬಂದಿದೆ, ಫೈನಲ್ ಅವಾರ್ಡ್ ಬಂದ ಮೇಲೆ ನಮಗೆ ಸುಮಾರು 465 ಟಿ.ಎಂ.ಸಿ.ಗೆ ನೀರಿನ ಅವಶ್ಯಕತೆ ಇದೆ. ನೀರಾವರಿ, ಬೆಂಗಳೂರು ಮಹಾನಗರಕ್ಕೆ ಕುಡಿಯುವ ನೀರಿಗಾಗಿ, ಗ್ರಾಮಾಂತರ ಪ್ರದೇಶಕ್ಕೆ ಮತ್ತು ಉದ್ದಿಮೆಗಳನ್ನು ಸೇರಿಸಿಕೊಂಡಂತೆ 465 ಟಿ.ಎಂ.ಸಿ. ನೀರು ನಮಗೆ ಅವಶ್ಯಕತೆ ಇದೆ. ಆದರೆ ಟ್ರಿಬ್ಯುನಲ್ ನಮಗೆ ಕೊಟ್ಟಿರುವುದು ಕೇವಲ 217 ಟಿ.ಎಂ.ಸಿ. ಮಾತ್ರ. ಇದು ಬಹಳ ಪರಮ ಅನ್ಯಾಯ. ಅದಕ್ಕಾಗಿ ಮುಂದಿನ ದಿನಮಾನಗಳಲ್ಲಿ ಕುಡಿಯುವ ನೀರಿಗಾಗಿ ಸಿವಿಲ್‌ವಾರ್ ಆಗುವಂಥ ಪರಿಸ್ಥಿತಿ ಉದ್ಭವವಾಗುತ್ತದೆ. ಏಕೆಂದರೆ ಬೆಂಗಳೂರು ಸಿಟಿ ಒಂದಕ್ಕೆ 30 ಟಿ.ಎಂ.ಸಿ. ನೀರು ಬೇಕು. ಆದರೆ ಟ್ರಿಬ್ಯುನಲ್ ಅವಾರ್ಡ್ ಮಾಡಿರುವುದು ಕೇವಲ 1.8 ಟಿ.ಎಂ.ಸಿ. ಮಾತ್ರ, ಅಂದರೆ 2 ಟಿ.ಎಂ.ಸಿ. ಗಿಂತಲೂ ಕಡಿಮೆ ಬಂತು. ಹೀಗಾಗಿ ಈಗಾಗಲೇ ಕರ್ನಾಟಕ ಸರ್ಕಾರ ಟ್ರಿಬ್ಯುನಲ್ ಅವಾರ್ಡ್ ವಿರುದ್ಧ ಸುಪ್ರೀಕೋರ್ಟ್‌ನಲ್ಲಿ ಏನು ದಾವಾ ಹಾಕಿದೆ, ಆ ಮೂಲಕ ಈ ಟ್ರಿಬ್ಯುನಲ್ ಅವಾರ್ಡ್‌ನ್ನು ರದ್ದುಪಡಿಸಿ ಹೊಸ ಟ್ರಿಬ್ಯುನಲ್ ಮಾಡಿಸುವುದಕ್ಕೆ ಪ್ರಯತ್ನವನ್ನು ಮಾಡಬೇಕು. ಅದರ ಬಗ್ಗೆ ಏನು ಚಿಂತನೆಯನ್ನು ಈ ಸರ್ಕಾರ ಮಾಡಿದೆ ಎಂಬುದನ್ನು ತಿಳಿಸಬೇಕು. ತಮಿಳುನಾಡಿಗೆ 419 ಟಿ.ಎಂ.ಸಿ., ಕೇರಳಕ್ಕೆ 30 ಟಿ.ಎಂ.ಸಿ., ಪಾಂಡಿಚೇರಿಗೆ 7 ಟಿ.ಎಂ.ಸಿ. ಮತ್ತು ಪರಿಸರಕ್ಕೆ 10 ಟಿ.ಎಂ.ಸಿ. ಎಂದು ಏನು ಟ್ರಿಬ್ಯುನಲ್ ಅವಾರ್ಡ್ ಮಾಡಿದ್ದಾರೆ ಇದನ್ನು ಯಾವ ರಾಜ್ಯದವರು ಒಪ್ಪಿಲ್ಲ. ನೋಡಿ ತಮಿಳುನಾಡಿಗೆ 419 ಟಿ.ಎಂ.ಸಿ. ಯನ್ನು ಕೊಟ್ಟರೂ ಕೂಡ ಅವರಿಗೆ ಖುಷಿ ಇಲ್ಲ. ಅಷ್ಟು ದುರಾಸೆ ಈ ತಮಿಳುನಾಡಿಗೆ ಇದೆ. ಅದಕ್ಕಾಗಿ ಅವರೂ ಕೂಡ ಸುಪ್ರೀಂಕೋರ್ಟ್‌ಗೆ ಹೋಗಿದ್ದಾರೆ. ಕೇರಳದವರೂ ಕೂಡ ಹೋಗಿದ್ದಾರೆ. ಹೀಗಾಗಿ ಕರ್ನಾಟಕಕ್ಕೆ ಒಳ್ಳೆಯ ಅವಕಾಶ ಇದೆ. All the states are before the Supreme Court. ಇದರ ಸದ್ಭಳಕೆಯನ್ನು ಮಾಡಿಕೊಂಡು ಈ ಟ್ರಿಬ್ಯುನಲ್

ಅವಾರ್ಡ್‌ನ್ನು ರದ್ದುಪಡಿಸಿ ಮತ್ತೊಂದು ಟ್ರಿಬ್ಯುನಲ್ ಮಾಡುತ್ತೀರೋ ಅಥವಾ ಸೌಹಾರ್ದತೆಯಿಂದ ಈ ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳು ಕುಳಿತುಕೊಂಡು ಈ ಬಗ್ಗೆ ಚಿಂತನೆಯನ್ನು ಮಾಡಿ ಯಾವ ತರಹ ಸೌಹಾರ್ದತೆಯಿಂದ ಹಂಚಿಕೆ ಮಾಡಿಕೊಳ್ಳಬೇಕು ಎನ್ನುವುದರ ಬಗ್ಗೆ ಗಂಭಿರವಾದಂಥ ಚಿಂತನೆಯನ್ನು ಮಾಡುತ್ತೀರೋ ಎಂದು ಹೇಳಬೇಕು. ಆದರೆ ಈ ಸರ್ಕಾರ ಆ ರೀತಿ ಮಾಡುತ್ತಿಲ್ಲ. ನೀರಾವರಿ ಬಗ್ಗೆ ಚಿಂತನೆಯನೇ ಮಾಡುತ್ತಿಲ್ಲ. "ಕೇವಲ ಸೈಕಲ್ ಕೊಡುತ್ತೇವೆ, ದೇವಸ್ಥಾನಕ್ಕೆ ಹಣ ಕೊಡುತ್ತೇವೆ, ಸ್ಮಶಾನಕ್ಕೆ ಹಣ ಕೊಡುತ್ತೇವೆ" ಎಂದು ಬರೇ ಇದೇ ಹೇಳುವುದೇ ಆಯಿತು. ಇದು ಅಗ್ಗದ ಪ್ರಚಾರಕ್ಕಾಗಿ, ಪ್ರೊಡಕ್ಟಿವಿಟಿ ಬಗ್ಗೆ ವಿಚಾರವನ್ನೇ ಮಾಡುತ್ತಿಲ್ಲ. ಮಾನ್ಯ ಯಡಿಯೂರಪ್ಪನವರೆ, ನೀವು ಕೊಡಿ, ನಾವೇನು ಕೊಡಬೇಡಿ ಎಂದು ನಿಮಗೆ ಹೇಳುವುದಿಲ್ಲ. ಆದರೆ ನಿಮ್ಮ ಆದ್ಯತೆ, ಸರ್ಕಾರದ ಆದ್ಯತೆ ಯಾವುದರ ಮೇಲೆ ಇರಬೇಕಾಗಿತ್ತೋ ಅದರ ಮೇಲೆ ಇಲ್ಲ. ಅದರ ಬಗ್ಗೆ ಬಹಳ ಗಂಭೀರವಾಗಿ ತಾವು ಚಿಂತನೆಯನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಾನು ಈಗಾಗಲೇ ನೀರಾವರಿ ವಿಚಾರವಾಗಿ ಕಾವೇರಿ ಮತ್ತು ಕೃಷ್ಣಾ ನದಿಯ ನೀರಿನ ಬಗ್ಗೆ ಹೇಳಿದ್ದೇನೆ. ಇವೊತ್ತು ಪಶ್ಚಿಮ ವಾಹಿನಿ ನದಿಗಳಿಂದ 2 ಸಾವಿರ ಟಿ.ಎಂ.ಸಿ. ನೀರು ಅಂದರೆ, exactly 50% of the water ಸಮುದ್ರಕ್ಕೆ ಹೋಗುತ್ತಿದೆ. ಇವೊತ್ತು ಆ ನೀರು ಹೋಗುವುದನ್ನು ತಿರುವು ಮಾಡಬೇಕು. ಇದನ್ನು ನಿಮ್ಮ ಒಂದೇ ಸರ್ಕಾರ ಚಿಂತನೆಯನ್ನು ಮಾಡುವುದಿಲ್ಲವೆಂದು ನಾನು ಅಪಾದನೆಯನ್ನು ಮಾಡುವುದಿಲ್ಲ. ಇದು ಬಹಳ ಕಷ್ಟದ ಕೆಲಸ. ಇದರ ಬಗ್ಗೆ ಗಂಭೀರವಾದಂಥ ಚಿಂತನೆಯನ್ನು ಮಾಡುವಂಥ ಕೆಲಸ ಯಡಿಯೂರಪ್ಪನವರೆ ನಿಮ್ಮ ಕಾಲದಲ್ಲಿ ಆಗಬೇಕು. ನೀರಾವರಿಗಾಗಿ ಈ 2 ಸಾವಿರ ಟಿ.ಎಂ.ಸಿ. ನೀರು ಪಶ್ಚಿಮವಾಹಿನಿಗಳಿಂದ ಸಮುದ್ರಕ್ಕೆ ಏನು ಹೋಗುತ್ತಿದೆ ಅದನ್ನು ತಿರುವು ಮಾಡಲು against the gravity ನೀವು ಮಾಡಬೇಕಾಗುತ್ತದೆ. ಅದರ ಬಗ್ಗೆ ನೀವು ಏನು ಚಿಂತನೆಯನ್ನು ಮಾಡಿದ್ದೀರಿ ಎಂದು ದಯಮಾಡಿ ಸರ್ಕಾರದವರು ಹೇಳಬೇಕಾಗುತ್ತದೆ.

ಶ್ರೀ ಡಿ.ಆರ್.ಪಾಟೀಲ್:- ರಾಯರೆಡ್ಡಿಯವರೆ ಒಂದು ನಿಮಿಷ. ಮಾನ್ಯ ಉಪಾಧ್ಯಕ್ಷರೆ, ನೇತ್ರಾವತಿ ತಿರುವು ಯೋಜನೆ ಗ್ರಾವಿಟಿ ಮೇಲೆಯೇ ಆಗುತ್ತದೆ. ಬಹುತೇಕ ನಮ್ಮ ಗದಗ ಜಿಲ್ಲೆಯಿಂದ ಹಿಡಿದು ಕೋಲಾರ ಜಿಲ್ಲೆಯವರೆಗೂ ಅದರಿಂದ ಅನುಕೂಲವಾಗುತ್ತದೆ. ಪರಮಶಿವಯ್ಯ ಎನ್ನುವ ಒಬ್ಬರು ರಿಟೈರ್ಡ್ ಚೀಫ್ ಇಂಜಿನಿಯರ್ ಈ ಪ್ರಾಜೆಕ್ಟ್‌ನ್ನು ತಯಾರು ಮಾಡಿದ್ದಾರೆ. ತಾವು ದಯವಿಟ್ಟು ಅವರನ್ನು ಕರೆಸಿ ಅವರ ಜೊತೆ ಚರ್ಚೆ ಮಾಡಿ ಆ ದಿಸೆಯಲ್ಲಿ ನಿಮ್ಮ ಕಾರ್ಯಕ್ರಮ ರೂಪಿತಗೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ಅಭಯಚಂದ್ರ : ಆ ಸಂದರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಜನಗಳಿಗೆ ಆಗುವಂಥ ತೊಂದರೆ ಬಗ್ಗೆ ಕೂಡ ಪರಿಶೀಲಿಸಬೇಕಾಗುತ್ತದೆ. ನೇತ್ರಾವತಿ ತಿರುವು ಯೋಜನೆ ಬಗ್ಗೆ ಪರಮಶಿವಯ್ಯನವರು ರಿಪೋರ್ಟ್ ಕೊಡುತ್ತಾರೆ. ಆದರೆ ಅದರಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಆಗುವಂಥ ಹಾನಿಯನ್ನೂ ಕೂಡ ಆ ಸಂದರ್ಭದಲ್ಲಿ ಪರಿಶೀಲಿಸಬೇಕಾಗುತ್ತದೆ.

ಶ್ರೀ ಎನ್.ಯೋಗೀಶ್‌ಭಟ್ : ಮಾನ್ಯ ಉಪಾಧ್ಯಕ್ಷರೆ, ಈಗ ಪಶ್ಚಿಮವಾಹಿನಿಗಳಿಂದ ಸಾಕಷ್ಟು ನೀರನ್ನು ಬೇರೆ ಜಿಲ್ಲೆಗಳಿಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಪಶ್ಚಿಮಪಾಹಿನಿ ನೀರನ್ನು ತಿರುವುಗೊಳಿಸುವ ಪ್ರಾಜೆಕ್ಟ್ ಮೊದಲು ಅನುಷ್ಠಾನಕ್ಕೆ ಬರಲಿ. ಅದನ್ನು ಮಾಡಿದ ನಂತರ ನಮಗೆ ಗೊತ್ತಾಗುತ್ತದೆ.

ಶ್ರೀ ಯು.ಟಿ.ಖಾದರ್ : ಮಾನ್ಯ ಅಧ್ಯಕ್ಷರೆ, ನೇತ್ರಾವತಿ ನದಿ ತಿರುವು ಯೋಜನೆಯನ್ನು ಕೈಬಿಡಬೇಕು. ಏಕೆಂದರೆ ಇದರಿಂದ ದಕ್ಷಿಣ ಕನ್ನಡ ಜಿಲ್ಲೆಗೆ ತುಂಬಾ ಅನ್ಯಾಯವಾಗುತ್ತದೆ.

ಶ್ರೀ ಬಸವರಾಜ ರಾಯರೆಡ್ಡಿ : ಲೋಕೋಪಯೋಗಿ ಮಂತ್ರಿಗಳಾದ ರೇವಣ್ಣನವರು ಹೊರಟೇ ಬಿಟ್ಟರು ನೋಡಿ. ಈಗ ನಾವು 2007 ರಲ್ಲಿ ಇದ್ದೇವೆ, ಇವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ ಒಟ್ಟು ವಿದ್ಯುತ್ತಿನ ಉತ್ಪಾದನೆ ಎಲ್ಲಾ ಮೂಲಗಳಿಂದ, ಅಂದರೆ ಥರ್ಮಲ್, ಹೈಡ್ರೋ, ಇವೆಲ್ಲಾ ಸೇರಿ ಒಟ್ಟು 4995 ಮೆಗಾವ್ಯಾಟ್‌ಗಳು ಉತ್ಪಾದನೆಯಾಗಿದೆ. ಸುಮಾರು 1 ಸಾವಿರ ಮೆಗಾವ್ಯಾಟ್ ಕೇಂದ್ರದಿಂದ ಬರುತ್ತದೆ. ಸುಮಾರು 1,000 MW ಕೇಂದ್ರದಿಂದ ಬರುತ್ತದೆ. ನೈವೇಲಿ, ರಾಮಗೊಂಡಂ, ಕೈಗಾ ಹೀಗೆ ಕೇಂದ್ರದ ಪಾಲು ಸೇರಿ ನಮಗೆ ಲಭ್ಯವಿರುವಂತಹ ವಿದ್ಯುತ್ ಸುಮಾರು 6,000 MW. As per the records of the Energy Department ಇವತ್ತು ನಮಗೆ ಬೇಕಾಗಿರುವಂತಹ ವಿದ್ಯುತ್ 7,853 MW. ಎಂದರೆ ನಾವು ಕರ್ನಾಟಕದಲ್ಲಿ 1,953 MW ವಿದ್ಯುತ್‌ನ ಕೊರತೆಯನ್ನು ಅನುಭವಿಸುತ್ತಿದ್ದೇವೆ. ಇದರಿಂದ ಎಲ್ಲಾ ಕಡೆ load shedding ಆಗುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ 24 ಗಂಟೆ current ಕೊಡುವುದಕ್ಕಾಗುತ್ತಿಲ್ಲ, ರೈತರು ನೀರಾವರಿ ಪ್ರದೇಶದಲ್ಲಿ ನೀರನ್ನು ರಾತ್ರಿ ಹೊತ್ತು ಹಾಯಿಸಿಕೊಳ್ಳಬೇಕಾದಂತಹ ಪರಿಸ್ಥಿತಿ ಇದೆ. ಇದಕ್ಕೆ ಗಂಭೀರವಾದಂತಹ ವಿದ್ಯುತ್ತಿನ ಉತ್ಪಾದನೆ ಬಗ್ಗೆ ಈ ಸರ್ಕಾರ ಚಿಂತನೆ ಮಾಡಬೇಕು. ಹಿಂದಿನ ಸರ್ಕಾರ ಕೂಡ ಸಾಕಷ್ಟು ವಿದ್ಯುತ್ ಉತ್ಪಾದನೆಯನ್ನು ಮಾಡಿಕೊಟ್ಟಿದೆ. ಮಾನ್ಯ J.H. Patel ಸರ್ಕಾರ ಇದ್ದಾಗ 800 MW ವಿದ್ಯುತ್‌ನ್ನು ಮಾಡಿಕೊಟ್ಟರು. ಮಾನ್ಯ S.M. Krishnaರವರ ಸರ್ಕಾರ ಇದ್ದಾಗ ಸುಮಾರು 1,500 MW ವಿದ್ಯುತ್ ಉತ್ಪಾದನೆಯನ್ನು ಮಾಡಿಕೊಟ್ಟರು. ಆದರೆ ಈ ಸರ್ಕಾರ ವಿದ್ಯುತ್‌ನ ಉತ್ಪಾದನೆ ಬಗ್ಗೆ ಹೆಚ್ಚು ಗಮನವನ್ನು

ಕೊಡಬೇಕು. ಅದರ ಬಗ್ಗೆ ಗಂಭಿರವಾದಂತಹ ಚಿಂತನೆ ಈ ಸರ್ಕಾರದಲ್ಲಿ ಪ್ರಾರಂಭವಾಗಬೇಕು. ನಾನು ಈಗಾಗಲೇ ಹೇಳಿದಂತೆ ಈಗ 2,000 MW ವಿದ್ಯುತ್ ಕಡಿಮೆಯಾಗುತ್ತದೆ, ಇನ್ನೊಂದು ಐದು ವರ್ಷದಲ್ಲಿ ನಮಗೆ ಇನ್ನೂ 3,000 MW ಬೇಕು. ಎಂದರೆ ಕರ್ನಾಟಕಕ್ಕೆ ಸುಮಾರು 5,000 MW ವಿದ್ಯುತ್ ಬೇಕಾಗುತ್ತದೆ. ಅಷ್ಟು ಕೊರತೆ ಬೀಳುತ್ತದೆ. ಹೀಗಾಗಿ ಅದರ ಉತ್ಪಾದನೆ ಕಡೆ ಗಮನ ಕೊಡಬೇಕು. ಹಿಂದೆ ಮಾನ್ಯ ಜೆ.ಹೆಚ್. ಪಟೇಲ್‌ರವರು ಮುಖ್ಯ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಬಳ್ಳಾರಿಯಲ್ಲಿ Thermal power Station ಪ್ರಾರಂಭ ಮಾಡಬೇಕೆಂದು ಮಾಡಿದರು. ಮುಂದೆ S.M.Krishnaರವರು ತಕ್ಷಣ ಅಧಿಕಾರಕ್ಕೆ ಬಂದರು. ಅವರು ಬಂದ ತಕ್ಷಣ ಸುಮಾರು 2,100 ಕೋಟಿ ರೂಪಾಯಿಗಳ ವೆಚ್ಚದಲ್ಲಿ 500 MW ವಿದ್ಯುತ್ ಉತ್ಪಾದನೆ ಸಲುವಾಗಿ ಪ್ರಯತ್ನ ಮಾಡಿದರು. ಈಗ ಅದು ಮುಗಿಯುವ ಹಂತದಲ್ಲಿದೆ. ಅದಾದನಂತರ ಮಾನ್ಯ ಧರ್ಮಸಿಂಗ್‌ರವರ ಸರ್ಕಾರ ಬಂದಮೇಲೆ 2nd Stage ನಲ್ಲಿ 500 MW ಮಾಡಬೇಕೆಂದು ಹೇಳಿ ಪ್ರಾರಂಭ ಮಾಡಿದರು. ಆ ಕೆಲಸ ಕೂಡ ಪ್ರಾರಂಭವಾಗುತ್ತಿದೆ. ನಾನು ಮಾನ್ಯ ಯಡಿಯೂರಪ್ಪನವರಿಗೆ ಹೇಳುವುದಕ್ಕೆ ಇಚ್ಛೆಪಡುವುದೇನೆಂದರೆ, ತೋರಣಗಲ್ಲೂ ಪ್ರದೇಶ ಏನಿದೆ, ಅಲ್ಲಿ ನಿಮಗೆ 2,000 MW ವಿದ್ಯುತ್ ಅನ್ನು ಉತ್ಪಾದನೆ ಮಾಡುವುದಕ್ಕೆ ನಿಮಗೆ ಸಾಧ್ಯವಿದೆ. ಅಲ್ಲಿ 2,000 MWನ Super Thermal Power Station ಮಾಡುವುದಕ್ಕೆ ನಿಮಗೆ ಸಾಧ್ಯವಿದೆ. It is as good as like Ramagondam Super Thermal Power Station ಅದನ್ನು ಮಾಡುವುದಕ್ಕೆ ಸಾದ್ಯತೆಗಳಿವೆ. ಅದರ ಬಗ್ಗೆ ನಿಮ್ಮ ಈ ಸರ್ಕಾರ ಚಿಂತನೆ ಮಾಡಬೇಕು. ಏಕೆಂದರೆ ಮಾನ್ಯ ಜಿ.ಹೆಚ್. ಪಟೇಲ್ ಮತ್ತು ಧರ್ಮಸಿಂಗ್ ಇದ್ದಾಗ, ಈ ಯೋಜನೆಗಳು ಆಯಿತು, ನಿಮ್ಮ ಸರ್ಕಾರ ಇದ್ದಾಗ ಏನೂ ಮಾಡಲಿಲ್ಲ. ನಿಮಗೆ ಇನ್ನೂ 1,000 MW ಮಾಡುವುದಕ್ಕೆ ಸಾಧ್ಯತೆ ಇದೆ. ಇದಕ್ಕೆ ಕಾರಣ ಅಲ್ಲಿ ಕಲ್ಲಿದ್ದಲು ಮತ್ತು ನೀರು ಇದೆ. ಅಲ್ಲಿ ನೀರು ವಿಫಲವಾಗಿ ಸಿಗುತ್ತದೆ. ಅಲ್ಲಿ ಕಲ್ಲಿದ್ದಲು ಸಾಗಾಣಿಕೆಗೆ ರೈಲು ಮಾರ್ಗಗಳಿವೆ ಮತ್ತು ರಸ್ತೆ ಸಂಪರ್ಕಗಳಿವೆ. ಹೀಗಾಗಿ ನೀವು ವಿದ್ಯುತ್ ಉತ್ಪಾದನೆ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಿ. ಈ ಬಗ್ಗೆ ನಿಮ್ಮ ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಕೇಳುತ್ತೇನೆ. Raichur Thermal Power Station ನಲ್ಲಿ ಈಗಾಗಲೇ 210 MW x 7 ಎಂದರೆ ಸುಮಾರು 1,470 MW ವಿದ್ಯುತ್ ಉತ್ಪಾದನೆಯಾಗುತ್ತದೆ. ಹಿಂದೆ ಮಾನ್ಯ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ 7 ಮತ್ತು 8 ಘಟಕಗಳನ್ನು ಪ್ರಾರಂಭ ಮಾಡಿದರು. ಮಾನ್ಯ ದೇವೇಗೌಡರು ಮತ್ತು ಮಾನ್ಯ ಜೆ.ಹೆಚ್.ಪಟೇಲರು ಇದ್ದಂತಹ ಸಂದರ್ಭದಲ್ಲಿ ನಾನು Raichur district in charge minister

ಆಗಿದ್ದೆ. ಆಗ 6ನೇ ವಿದ್ಯುತ್ ಘಟಕವನ್ನು ಉತ್ಪಾದನೆ ಮಾಡುವುದಕ್ಕೆ ಪ್ರಯತ್ನ ಮಾಡಿದರು. ಹೀಗಾಗಿ ಅಲ್ಲಿ 1470 MW ವಿದ್ಯುತ್ ಉತ್ಪಾದನೆಯಾಗುತ್ತಿದೆ. ಅಲ್ಲಿ ಇನ್ನೂ 1,000 MW ವಿದ್ಯುತ್ ಉತ್ಪಾದನೆ ಅವಕಾಶವಿದೆ. ಅದರ ಬಗ್ಗೆ ಈ ಸರ್ಕಾರ ಗಂಭೀರವಾಗಿ ಚಿಂತನೆ ಮಾಡಬೇಕು. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದನ್ನು ಇಚ್ಛೆಪಡುತ್ತೇನೆ, ರಾಯಚೂರು ಮತ್ತು ಬಳ್ಳಾರಿಯಲ್ಲಿ Thermal Power Station ಏನಿವೆ, ಇವೆಲ್ಲವೂ ಕೂಡ ಕಲ್ಲಿದ್ದಲು ಮುಖಾಂತರ ವಿದ್ಯುತ್ ಉತ್ಪಾದನೆಯನ್ನು ಮಾಡುತ್ತಿವೆ. ಈಗಾಗಲೇ ನಮಗೆ ಪ್ರತಿ ದಿವಸಕ್ಕೆ 25,000 metric ton ಕಲ್ಲಿದ್ದಲು ಬೇಕಾಗುತ್ತದೆ. ಇದನ್ನು ಪ್ರತಿದಿನ burn ಮಾಡುತ್ತೇವೆ, ಅದರಿಂದ pollution ಆಗುತ್ತದೆ. ಅದಕ್ಕಾಗಿ gas turbine ಮಾಡುವುದಕ್ಕೆ ಪ್ರಯತ್ನ ಮಾಡಿ. ಮಾನ್ಯ ಯಡಿಯೂರಪ್ಪನವರೆ ತಮಗೆ ಗೊತ್ತಿದೆ, ಮಹಾರಾಷ್ಟ್ರದ ದಾದೋಲ್‌ನಲ್ಲಿ gas turbine ಅನ್ನು ಮಾಡಿದ್ದಾರೆ. ಅದರಿಂದ ಇವತ್ತು 2,000 MW ಗಿಂತ ಹೆಚ್ಚು ವಿದ್ಯುತ್ ಉತ್ಪಾದನೆಯನ್ನು ಮಾಡುತ್ತಿದ್ದಾರೆ. ಅದರ ಬಗ್ಗೆ ಈ ಸರ್ಕಾರ ಗಂಭೀರವಾಗಿ ಚಿಂತನೆ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇವತ್ತು ಸೋಮವಾರ. ಆಯವ್ಯಯದ ಬೇಡಿಕೆಗಳ ಮೇಲೆ ಚರ್ಚೆಯಾಗುತ್ತಿದೆ. 225 ಜನ ಶಾಸಕರಲ್ಲಿ ಇಲ್ಲಿ 28 ಜನ ಶಾಸಕರು ಮಾತ್ರ ಇದ್ದೇವೆ. ಅದರಲ್ಲಿ ಇಲ್ಲಿ 6 ಜನ ಮಂತ್ರಿಗಳಿದ್ದಾರೆ. ಈ ಸದನದ ಪರಿಸ್ಥಿತಿ ಎಲ್ಲಿಗೆ ಬಂತು? ನಾವು ಯಾವ ಹಂತಕ್ಕೆ ಹೋಗುತ್ತಿದ್ದೇವೆಂದು ತಮಗೆ ಹೇಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು Sampleಗೆ ಬಂದರು, 50 sign ಹಾಕಿದರು, ಹೊರಟರು. ಇದೇನು ಸಭೆ? ಇದಕ್ಕೆ ಏನಾದರೂ ಗಾಂಭೀರ್ಯ ಇದೆಯಾ? ಇಲ್ಲಿ ಸುಮಾರು 28 ರಿಂದ 30 ಬೇಡಿಕೆಗಳನ್ನು agendaದಲ್ಲಿ ಸಂಪೂರ್ಣವಾಗಿ ಇಟ್ಟಿದ್ದೀರಿ. ಅದರ ಬಗ್ಗೆ ಸಮಗ್ರವಾಗಿ ಚರ್ಚೆ ನಡೆಯುತ್ತಿದೆ. ಆ ಬೇಡಿಕೆಗಳಿಗೆ ಸಂಬಂಧಪಟ್ಟಂತಹ ಮಂತ್ರಿಗಳು ಇಲ್ಲ. ಆ ಕಡೆ ಹೋಗಲಿ, ಈ ಕಡೆಯಾದರೂ 50 ಜನ ಕುಳಿತುಕೊಂಡು, ನಾವು ಮಾತನಾಡಿದರೆ ಕೇಳಬೇಕು. ಇಲ್ಲಿ ನೋಡಿ ಸಂಪೂರ್ಣವಾಗಿ ಒಂದು ರೀತಿ ಪ್ರೇತ ಕಳೆ, ಈ ರೀತಿಯ ಭೀಕರವಾದಂತಹ ಪರಿಸ್ಥಿತಿ ಏನಿದೆ ಈ ರೀತಿಯ ಪರಿಸ್ಥಿತಿ ಯಾವತ್ತು ಇರಲಿಲ್ಲ. ಸುವರ್ಣ ಯುಗವನ್ನು ನೋಡಿಯಾಯಿತು. ಮಾನ್ಯ ಪ್ರಕಾಶ್‌ರವರೆ ಏನು ಈ ಪರಿಸ್ಥಿತಿ? ಈ ಸದನಕ್ಕೆ ಎಷ್ಟು ಪ್ರಾಮುಖ್ಯತೆ ಇರಬೇಕು. ಮಾನ್ಯ ರಾಯರೆಡ್ಡಿಯವರೆ ತಾವು ಸುಮ್ಮನೆ ಇರಿ, ತಾವು ಬಹಳ ಸಮಗ್ರವಾಗಿ ಮಾತನಾಡಿದ್ದೀರಿ. ಸಂತೋಷ. ನೀವು ಮಾತನಾಡುವುದನ್ನು ಕೇಳೂವುದಕ್ಕೆ ಇಲ್ಲಿ ಯಾರಾದರೂ ಬೇಕಲ್ಲ. ಈ

ಸದನಕ್ಕೆ ಏನಾದರೂ ಗಾಂಭೀರ್ಯ ಇರಬೇಕು. ಮಾನ್ಯ ರಾಜಣ್ಣನವರೆ ನಾನು ಬೆಳಿಗ್ಗೆ ಕೂಡ ನಾವು ನೀವು ಇಲ್ಲಿ ಮಾತನಾಡಿದೆವು.

ಶ್ರೀ ಎನ್. ರಾಜಣ್ಣ : ನಿಮ್ಮ ಅಕ್ಕಪಕ್ಕ ಇಲ್ಲವಲ್ಲ ಎಂದು ನನ್ನ ವ್ಯಥೆ.

ಶ್ರೀ ವಾಟಾಳ್ ನಾಗರಾಜ್ : ಅದೇನೆ ಇರಲಿ, ಎರಡೂ ಕಡೆ, ನಾನು ಆ ಕಡೆ ಈ ಕಡೆ ಎಂದು ಹೇಳುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅಕ್ಕಪಕ್ಕ ಏಕೆ ಬೇಕು? ಚುಚ್ಚಯವುದಕ್ಕೆ ಒಬ್ಬರೇ ಸಾಕು. ಮೂರು ಜನ ಏಕೆ ಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ತಮಗೂ ಗೊತ್ತಿದೆ. ನಾವು ಈ ಸದನಕ್ಕೆ ಎಷ್ಟು ಗೌರವ ಕೊಡಬೇಕು? ಅದರಲ್ಲೂ ಇಲ್ಲಿ ಅಯವ್ಯಯದ ಪ್ರತಿ ಬೇಡಿಕೆಗಳ ಬಗ್ಗೆ ಚರ್ಚೆ ಮಾಡಿ ಯಾವ್ಯಾವ ರೀತಿ ಬೆಳಕು ಚೆಲುತ್ತಾರೆ? ನಾವೇನು ಮಾಡಬೇಕು? ಏನೂ ಕೂಡ ಯಾರಿಗೂ ಬೇಕಾಗಿಲ್ಲ. ಈ ಪರಿಸ್ಥಿತಿ ನಿರ್ಮಾಣವಾದರೆ ಈ ಸದನಕ್ಕೆ ಅದರಲ್ಲೂ ಸಂವಿಧಾನಕ್ಕೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅಪಚಾರವಾದಂತಹ ಪದ್ಧತಿ. ಇದು ಒಳ್ಳೆಯ ಸೂಚನೆ ಏನಲ್ಲ. ನಮ್ಮ ಸ್ನೇಹಿತರುಗಳೆಲ್ಲಾ ಎಲ್ಲಿ ಹೋಗಿದ್ದಾರೆ. ಅವರಿಗೆ ಯಾವ ರಾಜಕಾರಣ? ಏನಾದರೂ ರಾಜಕಾರಣ ಇರಬೇಕು. ಈ ಸಮ್ಮಿಶ್ರ ಸರ್ಕಾರದಲ್ಲಿ ತೀವ್ರವಾದಂತಹ ಒಡಕಾಗಿ ಎಲ್ಲಾದರೂ ಒಂದು ಕಡೆ ಸೇರಿ ಏನಾದರೂ ಚರ್ಚೆ ನಡೆಯುತ್ತಿದೆಯಾ? ಏನೇ ಆಗಲಿ ಇತ್ತೀಚಿನ ದಿನಗಳಲ್ಲಿ ಈ ರೀತಿ ನಡೆಯುತ್ತಿದೆ. ಈಗ ಪತ್ರಿಕೆಗಳಲ್ಲಿ ಬರುತ್ತಿರುವುದನ್ನು ನೋಡಿದರೆ ಆ ರೀತಿ ಏನಾದರೂ ಪರಿಸ್ಥಿತಿ ನಿರ್ಮಾಣವಾಗಿದೆಯಾ?

ಶ್ರೀ ಜೆ.ಸಿ. ಮಾಧುಸ್ವಾಮಿ : ಎಲ್ಲಾ Medical checkup ನಲ್ಲಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ವೈದ್ಯಕೀಯ ತಪಾಸಣೆ ನಡೆಯುತ್ತಿದೆ ಎಂದು ಮಾನ್ಯ ಮಾಧುಸ್ವಾಮಿಯವರು ಹೇಳಿದರು. ಇಷ್ಟೊಂದು 200 ಜನ ಶಾಸಕರಿಗೆ ಅನಾರೋಗ್ಯ ಇದೆಯೇ? ಯಾವ್ಯಾವ ರೋಗ? ಏನೇನು ರೋಗ ಬಂದಿದೆ? ಏನಿದು?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ನೀವೆಲ್ಲಿ ನಾವು ಇರಬೇಕೆಂದು insist ಮಾಡುವುದಕ್ಕಿಂತಲೂ ಆಡಳಿತ ಪಕ್ಷದ ದೃಷ್ಟಿಯಿಂದ ಒಳ್ಳೆಯದು. ಏಕೆಂದರೆ ಅನೇಕ ಜನ ಹೊಸ ಮಂತ್ರಿಗಳು ಆಗಿ ಹೊಸದಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಯಾರು demand ಮೇಲೆ ಏನು ಮಾತನಾಡುತ್ತಾರೆ ಎಂದು ತಿಳಿದುಕೊಂಡು ಅದಕ್ಕೆ ಉತ್ತರ ಕೊಡುವಂತಹ ಕೆಲಸವಾಗಬೇಕು. ಉತ್ತರ ಕೊಡುವುದಕ್ಕಾಗದೇ ಇದ್ದರೂ ಕನಿಷ್ಟ ಅವರವರ ಇಲಾಖೆಯಲ್ಲಿ ಸಂಬಂಧಪಟ್ಟಂತಹ Secretaryಗಳನ್ನು ಕರೆದು, ವಿಧಾನಸಭೆಯಲ್ಲಿ ಇಂತಹ ಪ್ರಶ್ನೆ ಬಂದಿತ್ತು, ಇದು ಏನಾಯಿತು? ಎಲ್ಲಿಯವರೆಗೆ ಬಂತು ಎಂದು ಕೇಳೂವುದಕ್ಕಾದರೂ ಅವರಿಗೆ ಅವಕಾಶ ಇದೆ. ಆದರೆ ಇಲ್ಲಿ

ಅವರು ಕಲಿಯುವುದಕ್ಕೂ ಕೂಡ ತಯಾರಿಲ್ಲ, ಕುಳಿತುಕೊಳ್ಳುವುದಕ್ಕೂ ತಯಾರಿಲ್ಲವೆಂದರೆ ಬಹಳ ಕಷ್ಟವಾಗುತ್ತದೆ. ಉತ್ತರವನ್ನು ಯಾರಾದರು ಕೊಡಬಹುದು. ಹಿಂದೆ ಅನೇಕ ಸಾರಿ ಮಾನ್ಯ ಯಡಿಯೂರಪ್ಪನವರೆ, ಇಲ್ಲಿ ಕುಳಿತಾಗ ಯಾರೋ ಒಬ್ಬಿಬ್ಬರು ಇಲ್ಲದೇ ಹೋದರೆ ಬಹಳ ಗಲಾಟೆ ಮಾಡುತ್ತಿದ್ದರು. ವಿಷಯಕ್ಕೆ ಸಂಬಂಧಪಟ್ಟವರು ಇಲ್ಲದಿದ್ದಾಗ ಭಾಷಣವನ್ನೇ ಮಾಡಿಲ್ಲ. ಈಗಲೂ ಕೂಡ 35 ಜನ ಮಂತ್ರಿಗಳು ಕೂಡ present ಇರಬೇಕೆಂದು ಇಲ್ಲ. 50% ಅಥವಾ 30% ಇರಲಿ, ಅದೇ ರೀತಿಯಾಗಿ secretaryಗಳು ಇದ್ದರೆ ಏನಾದರೂ ಮಾತನಾಡುವುದಕ್ಕೆ ಇನ್ನೂ ಕೂಡ ಚೆನ್ನಾಗಿರುತ್ತದೆ. ನಾವು ಯಾವುದೇ ವಿಷಯದ ಬಗ್ಗೆ ನೂರು ಮಾತನಾಡಿದರೆ ಒಂದೆರಡು ಹೊಸ ಹೊಸ ಉಪಯುಕ್ತವಾದಂತಹ ಸಲಹೆಗಳು ಇರಬಹುದಲ್ಲವೇ? ಅದರ ಬಗ್ಗೆ ಅವರಿಗೂ ಕೂಡ ತಿಳಿದುಕೊಳ್ಳುವುದಕ್ಕಾಗುತ್ತದೆ. ಇದು ಸರಿಯಲ್ಲ, ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದಂತೆ ತಾವು ಕನಿಷ್ಠ ಅವರು ಬರುವ ಹಾಗೆ ಮಾಡಬೇಕು. ಇಲ್ಲವೆಂದರೆ ಮಾನ್ಯ ಉಪ ಮುಖ್ಯಮಂತ್ರಿಗಳು ಕೂಡ ಸ್ವಲ್ಪ ಕುಳಿತುಕೊಳ್ಳಿ ಎಂದು ಹೇಳಿ, Whip ಮುಖಾಂತರ ಅವರಿಗೆ ತಿಳಿಸಿ ಹೇಳಬೇಕು. ಮಾನ್ಯ ಜೆ.ಹೆಚ್. ಪಟೇಲ್‌ನಂತ ವಯಸ್ಸಾದವರೇ ಇಲ್ಲಿ ಕುಳಿತಿರುತ್ತಿದ್ದರು. ದಿವಂಗತ ಗುಂಡೂರಾವ್ ಕುಳಿತಿರುತಿದ್ದರು. ಮಾನ್ಯ ದೇವರಾಜ್ ಅರಸು ಅವರಂತೂ ಕುಳಿತೇ ಇರುತ್ತಿದ್ದರು. ನಾನು ನಿಮಗೆ ದೊಡ್ಡಸ್ತಿಕ್ಕೆಗೆ ಎಂದು ಹೇಳುತ್ತಿಲ್ಲ, 36 ವರ್ಷದಲ್ಲಿ ನಾನು Assembly ಯಲ್ಲಿ ಒಂದು ದಿವಸ ಮಾತ್ರ absent ಇದ್ದೇನೆ. ಇವತ್ತೂ ಕೂಡ ನಾನು ಗುಲ್ಬರ್ಗಾದಿಂದ 5.00 ಗಂಟೆ flight ನಲ್ಲಿ ಬಂದು ನೇರವಾಗಿ ಇಲ್ಲಿಗೆ ಬಂದಿದ್ದೇನೆ. ಏನೋ urgent ಕೆಲಸ ಇದ್ದರೆ ಹೋಗಲಿ. At least ಅವರ demand ಚರ್ಚೆಗೆ ಬಂದಾಗ ಸಚಿವರು ಹಾಜರಿರಬೇಕಾಗುತ್ತದೆ. ಸದನದಲ್ಲಿ ಯಾವುದೇ ಗಲಾಟೆಯಿಲ್ಲ, ಗದ್ದಲವಿಲ್ಲ, ಧರಣಿಯಿಲ್ಲ, ಮಾತನಾಡಬೇಕು ಎನ್ನುವುದನ್ನು ನಾವು ತೀರ್ಮಾನ ಮಾಡಿಕೊಂಡು, ಇವುಗಳು ಯಾವುದನ್ನೂ ಮಾಡುವುದು ಬೇಡವೆಂದು ಹೇಳಿ ಮಾತನಾಡುವುದಕ್ಕೆ ನಿಂತಿದ್ದೇವೆ. ಅದನ್ನು ಕೇಳುವುದಕ್ಕೂ ಸೌಜನ್ಯವಿಲ್ಲವೆಂದರೆ ನಾವೇನು ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ನನಗೊಂದು ವಿಷಯ ಜ್ಞಾಪಕಕ್ಕೆ ಬರುತ್ತದೆ. ತಮಗೂ ಗೊತ್ತಿರಬಹುದು. ಮಾನ್ಯ ವೀರೇಂದ್ರ ಪಾಟೀಲರಿಗೆ ಪಾರ್ಶ್ವವಾಯು ಆಗಿತ್ತು. ಅವರು ಈ ಒಂದು ಪರಿಸ್ಥಿತಿಯಲ್ಲೂ ದೊಣ್ಣೆ ಹಿಡಿದುಕೊಂಡು, ಮೆಟ್ಟಿಲು ಹತ್ತಿಕೊಂಡು ಬಂದು ಇಲ್ಲಿ ಕುಳಿತುಕೊಳ್ಳುತ್ತಿದ್ದರು. ಆಗ ಅವರ ಬಾಯಿ ಇನ್ನೂ ಸರಿಯಾಗಿರಲಿಲ್ಲ. ಅಂಥಾದ್ದರಲ್ಲೂ ತೊದಲುನುಡಿಯಲ್ಲೇ ಇಲ್ಲಿ ಕಾವೇರಿಯ ಬಗ್ಗೆ ಭಾಷಣ

ಮಾಡಿದರು. ಅಂದರೆ, ಈ ಸದನಕ್ಕೆ ಎಷ್ಟು ಗೌರವ, ಗಾಂಭೀರ್ಯ ಇತ್ತು ಎನ್ನುವುದು ಅರ್ಥವಾಗುತ್ತದೆ. ಇದುವರೆಗೆ ನಾನು ಒಂದು ದಿನವೂ ಸದನಕ್ಕೆ ಗೈರುಹಾಜರಾಗಿಲ್ಲ ಎನ್ನುವುದನ್ನು ತಮಗೆ ಹೇಳುತ್ತೇನೆ. ಎಂಥ ಸಂದರ್ಭ ಬಂದರೂ ನಾನು ಇಲ್ಲಿ ಬಂದು ಕುಳಿತಿದ್ದೇನೆ. ಬೆಳಿಗ್ಗೆ ಬಂದು, ಅಧ್ಯಕ್ಷರನ್ನು ಭೇಟಿ ಮಾಡಿ, ನಾವು ಏನು ಮಾತನಾಡಬೇಕು ಎನ್ನುವುದನ್ನು ಹೇಳಿ ಇಲ್ಲಿ ಬಂದು ಕುಳಿತಿರುತ್ತೇವೆ. ಬೆಳಿಗ್ಗೆ ನಾವು ನೋಡುತ್ತಿದ್ದಾಗ ಗಮನಿಸಿದಂತೆ, ಕೆಲವು ಮಂತ್ರಿಗಳ ಕೈಯ್ಯಲ್ಲಿ ಉತ್ತರ ಕೊಡುವುದಕ್ಕೆ ಆಗುತ್ತಿರಲಿಲ್ಲ. ತಾವು ಅವರಿಗೆ ರಕ್ಷಣೆ ಕೊಡುತ್ತಿದ್ದೀರಿ. ಚಿಂತೆಯಿಲ್ಲ, ಅವರು ಕಳಿತುಕೊಳ್ಳಲಿ. ಆದರೆ, ಈ ಸದನಕ್ಕೆ ಗೌರವ ಬೇಕಲ್ಲವೇ? ಈ ಸದನ ಎಂದರೇನು? ಏತಕ್ಕೋಸ್ಕರ ಈ ಸದನವನ್ನು ನಡೆಸಬೇಕು? ಈ ರೀತಿಯಾದರೆ ಅಧಿಕಾರಿಗಳಿಗೂ ತೀರಾ ಸರಾಗ, ಸಲೀಸು ಆಗುತ್ತದೆ. ಅವರಿಚ್ಛೆ ಬಂದ ಹಾಗೆ ನಡೆದುಕೊಳ್ಳುತ್ತಾರೆ. ಪ್ರತಿ ಬೇಡಿಕೆಗಳ ಮೇಲೆ ಚರ್ಚೆ ನಡೆಯುವಾಗ, ಪ್ರತಿ ಇಲಾಖೆಯಲ್ಲಿ ಆಗಿರತಕ್ಕಂಥ ಅನ್ಯಾಯಗಳ ಬಗ್ಗೆ ನಾವು ಯಾವ ಯಾವ ರೀತಿ ಹೇಳಬೇಕಾಗುತ್ತದೋ ಆ ಎಲ್ಲ ರೀತಿಯಲ್ಲಿ ಹೇಳಬೇಕಾಗುತ್ತದೆ. ಅಧಿಕಾರಿಗಳನ್ನೂ ಬಿಡವುದಕ್ಕೆ ಆಗುವುದಿಲ್ಲ, ಮಂತ್ರಿಗಳನ್ನೂ ಬಿಡುವುದಕ್ಕೆ ಆಗುವುದಿಲ್ಲ ಮತ್ತು ಅನ್ಯಾಯವಾಗಿರತಕ್ಕಂಥ ಎಲ್ಲವನ್ನೂ ನಾವು ಹೇಳಬೇಕಾಗುತ್ತದೆ. ಅಂಥ ಪರಿಸ್ಥಿತಿಯಲ್ಲಿ ಇಲ್ಲಿ ಯಾರೂ ಇಲ್ಲ ಎಂದರೆ, ಎಲ್ಲರೂ ಎಲ್ಲಿ ಹೋಗಿದ್ದಾರೆ? ಪರಿಸ್ಥಿತಿ ಏನಾಗಿದೆ ಎಂದು ನೋಡಿ. ಸ್ವಲ್ಪ ನೀವು ಆ ಕಡೆಗೆ ಒಂದು ಕಣ್ಣಾಡಿಸಿದರೆ ಗೊತ್ತಾಗುತ್ತದೆ. ಈ ಸದನ ನಿಮಗೆ ಹೇಗೆ ಕಾಣುತ್ತದೆ? ಎಷ್ಟು ಭೀಕರವಾಗಿ ಕಾಣುತ್ತಿದೆ. ಈ ಸದನಕ್ಕೆ ಒಂದು ಗೌರವ ಬೇಡವೇ? ಇದು ಸರಿಯಾದ ಕ್ರಮವಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಹಿರಿಯ ಸದಸ್ಯರಾದಂಥ ವಾಟಾಳ್ ನಾಗರಾಜ್‌ರವರು ಮತ್ತು ಖರ್ಗೆಯವರು ಹೇಳಿದುದರಲ್ಲಿ ಸತ್ಯವಿದೆ.

ಉಪಾಧ್ಯಕ್ಷರು : ಅವರು ಹೇಳಿರುವಂಥಾದ್ದಕ್ಕೆ ನೀವು ಹೋಗಬೇಡಿ. ನೀವು ಮಾತನಾಡಿ.

ಶ್ರೀ ಬಸವರಾಜ ರಾಯರೆಡ್ಡಿ : ಸಂಬಂಧಪಟ್ಟ ಮಂತ್ರಿಗಳಿಲ್ಲ ಎಂದು ಹೇಳುತ್ತಿದ್ದೇನೆ.

ಉಪಾಧ್ಯಕ್ಷರು : ಅದನ್ನು ಅವರು ಹೇಳಿದ್ದಾರೆ. ಎಷ್ಟು ಜನ ಬರುತ್ತಾರೆ ಎಂದು ನಾಳೆ ನೋಡೋಣ. ಎಷ್ಟು ಹೊತ್ತು ನಡೆಸುತ್ತೇವೆ, ಎಷ್ಟು ಜನ ಇರುತ್ತಾರೆ ಎಂದು ನೋಡೋಣ.

ಶ್ರೀ ಬಸವರಾಜ ರಾಯರೆಡ್ಡಿ : ನೀರಾವರಿ ಬಗ್ಗೆ ಇಷ್ಟೆಲ್ಲಾ ಮಾತನಾಡಿದೆ. ಎನರ್ಜಿ ಬಗ್ಗೆ ಮಾತನಾಡಿದೆ. ಆದರೆ ಅಲ್ಲಿ ಯಾರೂ ಇಲ್ಲ ಎಂದು ಹೇಳಿದೆ. ಅವರು ಹೇಳಿದ್ದು ಸತ್ಯವಿದೆ. ಅವರಿಗೆ ಜವಾಬ್ದಾರಿ ಬೇಡವೇ? Energy

Department ಮತ್ತು Irrigation Department Minister ಜವಾಬ್ದಾರಿ ಬೇಡವೇ? ನಾನು ಈಗಾಗಲೇ ಹೇಳಿದಂತೆ, ಬಳ್ಳಾರಿ ಮತ್ತು ರಾಯಚೂರು ಶಾಖೋತ್ಪನ್ನ ಕೇಂದ್ರಗಳಿಗೆ major source ಎಂದರೆ ಕಲ್ಲಿದ್ದಲು. ಮುಂದಿನ ದಿನಮಾನಗಳಲ್ಲಿ ಪ್ರತಿದಿನಕ್ಕೆ ಸುಮಾರು 40 ಸಾವಿರ ಮೆಟ್ರಿಕ್ ಟನ್‌ಗಿಂತ ಹೆಚ್ಚು ಕಲ್ಲಿದ್ದಲು ಬೇಕಾಗುತ್ತದೆ. ಅದಕ್ಕಾಗಿ ಹೊಸ ರೈಲ್ವೆ ಲೈನ್ ಬೇಕು. ಸನ್ಮಾನ್ಯ ಎಂ.ಪಿ. ಪ್ರಕಾಶ್‌ರವರಿಗೆ ಚೆನ್ನಾಗಿ ಗೊತ್ತು. Bellary Thermal Power Station ಮತ್ತು Raichur Thermal Power Station ಗಳಿಗೆ more than 40,000 metric ton coal per day ಬೇಕಾಗುತ್ತದೆ. ಅದಕ್ಕಾಗಿ, ರಾಯಚೂರಿನಿಂದ ಮುನಿರಾಬಾದ್‌ಗೆ ಹೊಸ ರೈಲ್ವೆ ಲೈನ್ ಬೇಕು. ಅದು ಮುನಿರಾಬಾದ್ ಮೆಹಬೂಬ್‌ನಗರ ರೈಲ್ವೆ ಲೈನ್. ಆ ರೈಲ್ವೆ ಲೈನನ್ನು ಈಗಾಗಲೇ ಸ್ವಲ್ಪ ಪ್ರಮಾಣದಲ್ಲಿ ಪ್ರಾರಂಭಿಸಿದ್ದಾರೆ. ಹಿಂದೆ ದೇವೇಗೌಡರು ಪ್ರಧಾನ ಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ, ಐ.ಕೆ.ಗುಜ್ರಾಲ್‌ರವರು ಪ್ರಧಾನ ಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಅದು ಒಪ್ಪಿಗೆಯಾಯಿತು. ಬಹಳ ಪ್ರಮುಖವಾದಂಥ ರೈಲ್ವೆ ಅದು. ಕೊಪ್ಪಳ, ಗಂಗಾವತಿ, ಸಿಂಧನೂರು, ಮಾನ್ವಿ, ರಾಯಚೂರು ಮುಖಾಂತರ ಹೈದರಾಬಾದಿಗೆ ಹೋಗುತ್ತದೆ. ಇದಕ್ಕೆ ಪ್ರತಿವರ್ಷ 10–15 ಕೋಟಿ ರೂಪಾಯಿಗಳನ್ನು ಮಾತ್ರ ಕೊಡುತ್ತಾರೆ. ದಯಮಾಡಿ ಈ ರೈಲ್ವೆ ಲೈನಿಗೆ ನೀವು 50% ಹಣವನ್ನು ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಕೊಡಬೇಕಾಗುತ್ತದೆ. ಹುಬ್ಬಳ್ಳಿಯಿಂದ ಗುಲ್ಬರ್ಗಾಕ್ಕೆ ಹೋಗಲಿಕ್ಕೆ, ಹುಬ್ಬಳ್ಳಿಯಿಂದ ರಾಯಚೂರಿಗೆ ಹೋಗಲಿಕ್ಕೆ ಹುಬ್ಬಳ್ಳಿಯಿಂದ ಬೀದರ್‌ಗೆ ಹೋಗಲಿಕ್ಕೆ ನೇರವಾದಂಥ ರೈಲು ಮಾರ್ಗ ಇದು ಆಗುತ್ತದೆ. ಕರ್ನಾಟಕದಲ್ಲಿ ಇದೊಂದು ರೈಲ್ವೆ ಲೈನಿಗೆ ಕರ್ನಾಟಕ ಸರ್ಕಾರ ಸಹಭಾಗಿತ್ವದಲ್ಲಿ ಹಣ ಹಾಕುತ್ತಿಲ್ಲ. ನೀವು ಬೀದರ್ ಗುಲ್ಬರ್ಗಾ ಕೊಟ್ಟಿದ್ದೀರಿ, ಹೊಸಪೇಟೆ ಗುಂತಕಲ್‌ಗೆ ಕೊಟ್ಟಿದ್ದೀರಿ, ಬಿಜಾಪುರ ಗದಗ್‌ಗೆ ಕೊಟ್ಟಿದ್ದೀರಿ, ಹುಬ್ಬಳ್ಳಿ ಅಂಕೋಲಾಗೆ ಕೊಟ್ಟಿದ್ದೀರಿ, ಕೊಟ್ಟೂರು ಹರಿಹರಕ್ಕೆ ಕೊಟ್ಟಿದ್ದೀರಿ, ಮಂಗಳೂರು ಹಾಸನಕ್ಕೆ ಕೊಟ್ಟಿದ್ದೀರಿ, ರಾಮನಗರ ಬೆಂಗಳೂರಿಗೆ ಕೊಟ್ಟಿದ್ದೀರಿ. ನಾನು ಹೇಳುತ್ತಿರುವುದು ಬಹಳ ಪ್ರಮುಖವಾದಂಥ ರೈಲ್ವೆ ಲೈನ್. ಇದರಿಂದ ಹೈದರಾಬಾದ್ ಕರ್ನಾಟಕ ಮತ್ತು ಬಾಂಬೆ ಕರ್ನಾಟಕದ ನೇರ ಸಂಪರ್ಕವಾಗುತ್ತದೆ. ಈ ರೈಲ್ವೆ ಲೈನ್ ಕೊಪ್ಪಳದಿಂದ ಪ್ರಾರಂಭವಾಗಿ ಗಂಗಾವತಿ, ಸಿಂಧನೂರು ಮಾರ್ಗವಾಗಿ, ಸುಮಾರು ಆರು ಲಕ್ಷ ಎಕರೆ ನೀರಾವರಿ ಪ್ರದೇಶದಲ್ಲಿ ಹೋಗುತ್ತದೆ. ಕೊಪ್ಪಳ ಭಾಗದಲ್ಲಿರುವಂಥ ಕಬ್ಬಿಣದ ಅದಿರು Raichur Thermal Power Stationಗೆ ಹೋಗುವುದರಿಂದ ಅಲ್ಲಿನ ಕಲ್ಲಿದ್ದಲ್ಲಿಗೆ ಅನುಕೂಲವಾಗುತ್ತದೆ. It is the most economically viable railway line. ಇದಕ್ಕೆ 700 ಕೋಟಿ ರೂಪಾಯಿಗಳು ಬೇಕು. ಈ 700 ಕೋಟಿ ರೂಪಾಯಿಗಳಲ್ಲಿ 50% ಹಣವನ್ನು ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ನೀವು

ಕೊಡಬೇಕು, ಬೇರೆ ಮಾರ್ಗಗಳಿಗೆ ಕೊಟ್ಟಿದ್ದೀರಿ. ಕೆಲವಕ್ಕೆ 65% ಕೊಟ್ಟಿದ್ದೀರಿ. ಹಾಸನ ಮಂಗಳೂರು ಮಾರ್ಗಕ್ಕೆ 65% ಕೊಟ್ಟಿದ್ದಾರೆ. ರಾಮನಗರ ಬೆಂಗಳೂರು ಮಾರ್ಗಕ್ಕೆ 65% ಕೊಟ್ಟಿದ್ದಾರೆ. ಬೀದರ್ ಗುಲ್ಬರ್ಗಾ ಮಾರ್ಗಕ್ಕೆ 50% ಕೊಟ್ಟಿದ್ದೀರಿ. ಅದರಂತೆ, ಈ ರೈಲ್ವೆ ಲೈನಿಗೂ ಕೂಡ 50% ಕೊಟ್ಟರೆ, ಇದರಿಂದ ಕೇವಲ ಒಂದು ಊರಿಗೆ ಮಾತ್ರವಲ್ಲ, ಎರಡು ಪ್ರದೇಶಗಳಿಗೆ ಅನುಕೂಲವಾಗುವುದರೆ ಜೊತೆಗೆ ವಾಣಿಜ್ಯ, ಕೃಷಿ ಮತ್ತು ಕೈಗಾರಿಕೆಗಳ ಅಭಿವೃದ್ಧಿಯಾಗುತ್ತದೆ. ಇದಕ್ಕೆ ನೀವು ಒಪ್ಪಿಗೆ ಕೊಟ್ಟಿದ್ದೀರಿ. ಯಡಿಯೂರಪ್ಪನವರೇ ನಾನು ನಿಮ್ಮನ್ನು ಅಭಿನಂದಿಸುತ್ತೇನೆ. 35% ಹಣವನ್ನು ಸಹಭಾಗಿತ್ವದಲ್ಲಿ ತರಲಿಕ್ಕೆ ತಾವು ಒಪ್ಪಿಗೆ ಕೊಟ್ಟಿದ್ದೀರಿ. ಆದರೆ, ಕೆಲವು ತಾಂತ್ರಿಕ ನೆಪವೊಡ್ಡಿ ಇದನ್ನು ಕ್ಯಾಬಿನೆಟ್‌ನಲ್ಲಿ ವಾಪಸ್ಸು ತೆಗೆದುಕೊಂಡು ಹೋಗಿದ್ದಾರೆ. ಅದನ್ನು ನೀವು ತರಿಸಿ, ಅದಕ್ಕೆ ಒಪ್ಪಿಗೆ ಕೊಟ್ಟರೆ ಇಡೀ ರಾಜ್ಯಕ್ಕೆ ಒಳ್ಳೆಯದಾಗುತ್ತದೆ. ನಾವು ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇವೆ. ಆದ್ದರಿಂದ, ದಯಮಾಡಿ ಇದರ ಬಗ್ಗೆ ಮಾನ್ಯ ಯಡಿಯೂರಪ್ಪನವರು ಮತ್ತು ಎಂ.ಪಿ. ಪ್ರಕಾಶ್‌ರವರು ಚಿಂತನೆಯನ್ನು ಮಾಡಬೇಕೆಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಕೊನೆಯದಾಗಿ, ನಾನು ಜಲ ವಿದ್ಯುತ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಜಲ ವಿದ್ಯುತ್ ಉತ್ಪಾದನೆಗೆ recurring expenditure ಇರುವುದಿಲ್ಲ. ಈಗ ನಾವೇನು ಶಾಖೋತ್ಪನ್ನದಲ್ಲಿ ಮಾಡುತ್ತಿದ್ದೇವೆ. ಥರ್ಮಲ್‌ನಿಂದ, ಕಲ್ಲಿದ್ದಲುನಿಂದ ಅಗಲಿ, ಗ್ಯಾಸ್ ಟರ್ಬೈನ್ ಇದಕ್ಕೆ ಶಾಖೋತ್ಪನ್ನ ಕೇಂದ್ರಗಳಲ್ಲಿ ವಿದ್ಯುತ್ ಉತ್ಪಾದನೆ ಮಾಡುತ್ತಿರುವಂಥಾದಕ್ಕೆ ಸಾಕಷ್ಟು recurring expenditure ಇರುತ್ತದೆ. ಆದರೆ, ಜಲವಿದ್ಯುತ್ತಿಗೆ ಇಲ್ಲ ಜಲವಿದ್ಯುತ್ ನಮ್ಮಲ್ಲಿ ವರಾಹಿ, ಗುಂಡ, ಈ ಎರಡೂ ನೀರಾವರಿ ಪ್ರದೇಶದಿಂದ ಸುಮಾರು ವರಾಹಿಯಲ್ಲಿ 460 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲಿಕ್ಕೆ ಸಾಧ್ಯವಿದೆ. ನಿಮ್ಮ ಜಿಲ್ಲೆಯದೇ ಅದು, ನಿಮಗೆ ಗೊತ್ತಿದೆ. ಈಗಾಗಲೇ ಎರಡು ಘಟಕಗಳು ಪ್ರಾರಂಭವಾಗಿವೆ. ಇನ್ನೂ ಎರಡು ಘಟಕಗಳು ಪ್ರಾರಂಭವಾಗಬೇಕಾಗಿದೆ. ಆಗ ಇನ್ನೂ ಸುಮಾರು 200 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತದೆ. ಆದರೆ ಅದರ ಬಗ್ಗೆ ಯಾವುದೇ ಕ್ರಮವಾಗಿಲ್ಲ. ಅದರ ಬಗ್ಗೆ ತಾವು ಗಂಭೀರವಾಗಿ ಚಿಂತನೆ ಮಾಡಬೇಕು. ಅದೇ ರೀತಿ ಗುಂಡ್ಯ ನೀರಾವರಿ ಪ್ರದೇಶದಿಂದ ಸುಮಾರು 400 ಮೆಗಾವ್ಯಾಟ್ ವಿದ್ಯುತ್ತಿನ ಉತ್ಪಾದನೆಯಾಗಬೇಕು. ಈ ಕೆಲಸ ಬೇಗನೇ ಪ್ರಾರಂಭವಾಗಬೇಕು. ಇದು ಇನ್ನೂ ಕೂಡ ಕೇಂದ್ರ ಸರ್ಕಾರದ ಸೆಂಟ್ರಲ್ ವಿದ್ಯುತ್ ಗ್ರಿಡ್‌ನಲ್ಲಿ ಪೆಂಡಿಂಗ್ ಇದೆ. ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ ಇದನ್ನು ಕ್ಲಿಯರ್ ಮಾಡಿಸಿದರೆ, 400 ಮೆಗಾವ್ಯಾಟ್ ವಿದ್ಯುತ್ತಿನ ಉತ್ಪಾದನೆ ಆಗಲಿಕ್ಕೆ ಸಾಧ್ಯವಿದೆ. ಅದರೆ ಜೊತೆಗೆ, ಪ್ರಮುಖವಾದ ಇನ್ನೊಂದು ವಿಷಯವೆಂದರೆ, ಕಾವೇರಿ

ನದಿಯಿಂದ ಸುಮಾರು 600 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲಿಕ್ಕೆ ಸಾಧ್ಯವಿದೆ. ಅದಕ್ಕಾಗಿ ಹಿಂದಿನ ಕರ್ನಾಟಕ ಸರ್ಕಾರ ಶಿವನಸಮುದ್ರದಲ್ಲಿ 220 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲಿಕ್ಕೆ ಕೇಂದ್ರ ಸರ್ಕಾರಕ್ಕೆ ಅರ್ಜಿ ಹಾಕಿದೆ. ಅದಕ್ಕೆ ತಮಿಳುನಾಡು ಆಕ್ಷೇಪಣೆ ಮಾಡಿದೆ. ಇದಕ್ಕೆ ಕಾರಣ, ನಮ್ಮ Detailed Project Reportನಲ್ಲಿ ರಿವರ್ಸಬಲ್ ಟರ್ಬೈನ್ ಎಂದು ಹಾಕಿರುವುದು. ರಿವರ್ಸಬಲ್ ಟರ್ಬೈನ್ ಎಂದು ಹಾಕಿರುವುದರಿಂದ, ನೀರನ್ನು ಪುನಃ ಬಳಸುತ್ತಾರೆ ಎಂದು ತಮಿಳುನಾಡಿನವರು ಅದಕ್ಕೆ objection ಹಾಕಿದ್ದಾರೆ. ಅದನ್ನು ಸರಿಯಾಗಿ ಹೇಳಬೇಕಾಗುತ್ತದೆ. ರಿವರ್ಸಬಲ್ ಟರ್ಬೈನ್‌ನಿಂದ ನೀರಿನ ಲಾಸ್ ಇಲ್ಲ. ಹೀಗಾಗಿ, ಅದನ್ನು ತಾವು ಕೇಂದ್ರ ಸರ್ಕಾರಕ್ಕೆ ಮನದಟ್ಟು ಮಾಡಿಕೊಡಬೇಕಾಗುತ್ತದೆ. ಅದರ ಜೊತೆಗೆ, ಹೊಗೆನಿಕಲ್ ಮತ್ತು ಮೇಕೆದಾಟುವಿನಲ್ಲಿ ಸುಮಾರು 400 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲಿಕ್ಕೆ ಸಾಧ್ಯವಿದೆ. ಆದರೆ, ಅದಕ್ಕೆ ತಮಿಳುನಾಡು objection ಮಾಡಿದೆ. ಇದಕ್ಕೆ ಕಾರಣ, ಹೊಗೆನಿಕಲ್ ಎರಡೂ ದಂಡೆಯ ಮೇಲೆ ಅಂದರೆ ತಮಿಳುನಾಡು ಮತ್ತು ಕರ್ನಾಟಕದಲ್ಲಿದೆ. ತಮಿಳುನಾಡಿನವರೂ 200 ಮೆಗಾವ್ಯಾಟಿಗೆ ಬಲಭಾಗದಲ್ಲಿ ಹಾಕಿದ್ದಾರೆ. ರಸ್ಸಿ ಮನಾಲ್ ಎಂಬ ಪ್ರದೇಶದಲ್ಲಿ ಅವರೂ ಕೂಡ 400 ಮೆಗಾವ್ಯಾಟಿಗೆ ಹಾಕಿದ್ದಾರೆ. ಆ ರಸ್ಸಿ ಮನಾಲ್ ಯೋಜನೆಯನ್ನು ಅವರು ಪ್ರಾರಂಭಿಸಿದರೆ ನಮ್ಮ ಮೇಕೆದಾಟು ಮುಳುಗಿಹೋಗುತ್ತದೆ. ಹೀಗಾಗಿ, ಅದಕ್ಕೆ ನಾವು objection ಹಾಕಿದ್ದೇವೆ. ಇದರಿಂದಾಗಿ, ಕಾವೇರಿ ನದಿ ಪ್ರದೇಶದಲ್ಲಿ 800 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಆಗಲಿಕ್ಕೆ ಸಾಧ್ಯವಿರುವುದು ಎರಡೂ ರಾಜ್ಯಗಳ ಜಗಳದಿಂದಾಗಿ ವಿದ್ಯುತ್ ಉತ್ಪಾದನೆಯಾಗದೇ ಸುಮಾರು 20 ವರ್ಷಗಳಾದವು. ಆದ್ದರಿಂದ, ಇದಕ್ಕೆ ಒಂದು ಸೌಹಾರ್ದ ರೀತಿಯಲ್ಲಿ ಮಾತುಕತೆಯಾಗಬೇಕು. National Hydro Power Corporation, NHPC ಮುಖಾಂತರ ವಿದ್ಯುತ್ ಉತ್ಪಾದನೆ ಮಾಡಬೇಕೆಂದು ಹಿಂದೆ ಜೆ.ಹೆಚ್. ಪಟೇಲರ ಸರ್ಕಾರವಿದ್ದಾಗ, ಎಸ್.ಎಂ. ಕೃಷ್ಣರವರ ಸರ್ಕಾರದಲ್ಲಿ ಪ್ರಯತ್ನಗಳು ನಡೆದವು. ಆದರೆ ಅದು ಹಾಗೇ ನಿಂತಿದೆ. ಅದರೆ ಬಗ್ಗೆ ಈ ಸರ್ಕಾರ ಪ್ರಯತ್ನ ಮಾಡಬೇಕಾಗುತ್ತದೆ. ಎರಡೂ ರಾಜ್ಯಗಳು ಸೌಹಾರ್ದತೆಯಿಂದ ಮಾತನಾಡಿಕೊಂಡರೆ ಅವರಿಗೆ 400 ಮೆಗಾವ್ಯಾಟ್, ನಮಗೆ 400 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತದೆ. ಅದರ ಬಗ್ಗೆ ಈ ಸರ್ಕಾರ ಗಂಭೀರವಾಗಿ ಚಿಂತನೆಯನ್ನು ಮಾಡಬೇಕು. ಅದರ ಜೊತೆಗೆ, ಇನ್ನೊಂದು ಮಾತನ್ನು ನಾನು ಹೇಳಬೇಕಾಗುತ್ತದೆ. ಜುರಾಲಾ ಪ್ರಾಜೆಕ್ಟ್ ಬಗ್ಗೆ ಪ್ರಕಾಶ್‌ರವರಿಗೆ ಚೆನ್ನಾಗಿ ಗೊತ್ತಿದೆ. ಇದು ಆಂಧ್ರಪ್ರದೇಶದ ಗಡಿಭಾಗದ ರಾಯಚೂರಿನಲ್ಲಿದೆ. 1978ರಲ್ಲಿ ಜುರಾಲಾ ಡ್ಯಾಂಅನ್ನು ಪೂರ್ತಿಗೊಳಿಸುವಂಥ ಸಂದರ್ಭದಲ್ಲಿ, ದೇವರಾಜು ಅರಸುರವರ ಕಾಲದಲ್ಲಿ ಕರ್ನಾಟಕ ಮತ್ತು

ಆಂಧ್ರಪ್ರದೇಶಗಳ ನಡುವೆ ಒಪ್ಪಂದವಾಗುತ್ತದೆ. ಜುರಾಲಾ ಡ್ಯಾಂನಿಂದ ನಮ್ಮ ಭೂ ಪ್ರದೇಶ ಮುಳುಗಡೆಯಾಗುವುದರಿಂದ, ಈ ಯೋಜನೆಯಿಂದ ಉತ್ಪಾದನೆಯಾಗುವ 220 ಮೆಗಾವ್ಯಾಟ್ ವಿದ್ಯುತ್ತಿನಲ್ಲಿ 110 ಮೆಗಾವ್ಯಾಟ್ ವಿದ್ಯುತ್ತನ್ನು ಕರ್ನಾಟಕಕ್ಕೆ ಕೊಡಬೇಕೆಂದು ಒಪ್ಪಂದವಾಗಿದೆ. ಈಗ ಅಲ್ಲಿ ವಿದ್ಯುತ್ ಉತ್ಪಾದನೆಯಾಗುತ್ತಿದೆ. ಅದರ ಬಗ್ಗೆ ನಮ್ಮ ಸರ್ಕಾರ ಏನೂ ಮಾಡುತ್ತಿಲ್ಲ. ತನ್ನ ಹಕ್ಕನ್ನು ಪ್ರತಿಪಾದನೆ ಮಾಡಲಿಕ್ಕೆ ಕರ್ನಾಟಕ ಸರ್ಕಾರ ಒತ್ತಾಯ ಮಾಡಬೇಕಾಗುತ್ತದೆ. ಈಗ ಇಲ್ಲಿ Energy Minister ಇರಬೇಕಾಗಿತ್ತು. ಜುರಾಲ project ಮತ್ತು ಕಾವೇರಿ ನದಿಯಲ್ಲಿ 400 MW ಹೋಗುತ್ತಿದೆ. ಇಲ್ಲಿ 110 MW ಹೋಗುತ್ತದೆ. ಇಂಥ ಗಂಭೀರ ವಿಚಾರಗಳನ್ನು ಮುಂಬರುವ ದಿನಗಳಲ್ಲಿ ಏನು ಮಾಡುತ್ತೀರಿ ಎನ್ನುವುದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕು. ಕೊನೆಯದಾಗಿ ವಿದ್ಯುತ್ ಸರಬರಾಜು ಬಗ್ಗೆ ಹೇಳೂವುದಾದರೆ, ವಿದ್ಯುತ್ ಉತ್ಪಾದನೆ ಎಷ್ಟು ಮುಖ್ಯವೋ ಅಷ್ಟೇ ವಿದ್ಯುತ್ ಸರಬರಾಜು ಮುಖ್ಯವಾಗಿರುತ್ತದೆ. ಉತ್ಪಾದನೆ ಮಾಡಿದ ತಕ್ಷಣವೇ ಕರ್ನಾಟಕಕ್ಕೆ ವಿದ್ಯುತ್ ತಲುಪುವುದಿಲ್ಲ. ಗುಣಮಟ್ಟದಲ್ಲಿ effective ಆಗಿ ಅದರ ಸರಬರಾಜಾಗಬೇಕು. ಅದಕ್ಕೆ ಇವತ್ತು ಏನಾಗಿದೆ ಎಂದರೆ, ಕರ್ನಾಟಕದಲ್ಲಿ ಅತ್ಯಂತ ಹೆಚ್ಚಿನ ಮಟ್ಟದಲ್ಲಿ Transmission and Distribution loss ಆಗುತ್ತಿದೆ. ಈ T&D loss ಅತ್ಯಂತ ಹೆಚ್ಚಿದೆ. ನನಗೆ ಸಿಕ್ಕಿರುವ ವರದಿ ಪ್ರಕಾರ 33% is the T&D loss. ಅದಕ್ಕಾಗಿಯೇ ಇವತ್ತು ಕೇಂದ್ರ ಸರ್ಕಾರ ಕರ್ನಾಟಕಕ್ಕೆ Accelerated power scheme ನಲ್ಲಿ ರಾಜೀವಗಾಂಧಿ ವಿದ್ಯುತ್ ನಿಗಮದಿಂದ ಕರ್ನಾಟಕ ಸರ್ಕಾರಕ್ಕೆ 1164 ಕೋಟಿ ರೂಪಾಯಿಗಳನ್ನು ಇವತ್ತು ಕೇಂದ್ರ ಸರ್ಕಾರ ಕೊಟ್ಟಿದೆ. ಇದನ್ನು ಇವತ್ತು ಈ ರಾಜ್ಯ ಸರ್ಕಾರ ಆ ಹಣವನ್ನು ಸದ್ಬಳಕೆ ಮಾಡಿಕೊಂಡು ಒಳ್ಳೆಯ ಗುಣಮಟ್ಟದ TC ಗಳನ್ನು conductor ಅನ್ನು, ರ್‍ಯಾಬಿಟ್‌ವೈರ್, ಒಳ್ಳೆಯ pole ಗಳನ್ನು ಹಾಕಿ ವಿದ್ಯುತ್ ಸರಬರಾಜು ಆಗುವ ಹಾಗೆ ನೋಡಿಕೊಳ್ಳಬೇಕು ಮತ್ತು ತ್ವರಿತವಾಗಿ 66 KV station 110 KV station 33 KV station ಪ್ರಾರಂಭ ಮಾಡಿದರೆ, ಏನು ಇವತ್ತು ಕೇಂದ್ರ ಸರ್ಕಾರ 1164 ಕೋಟಿ ಹಣವನ್ನು ಕರ್ನಾಟಕಕ್ಕೆ ಕೊಟ್ಟಿದೆ, ಅದರ ಸದುಪಯೋಗವಾಗುತ್ತದೆ ಮತ್ತು T&D ಕೂಡ ಕಡಿಮೆಯಾಗುತ್ತದೆ. ಹಾಗೆಯೇ transmission loss ಜೊತೆಗೆ theft ಕೂಡ ಸೇರಿದೆ. Current ಕಳ್ಳತನವಾಗುವುದನ್ನು ತಡೆಯಲಿಕ್ಕೆ ಸರ್ಕಾರ ಯಾವುದೇ ಕ್ರಮಗಳನ್ನು ಈ ಸರ್ಕಾರ ತೆಗೆದುಕೊಳ್ಳುತ್ತಿಲ್ಲ. ಅದಕ್ಕಾಗಿ ನಾನು ಹಿಂದಿನ ಸಲ ಹೇಳಿದ್ದೆ. ನೀವು ವಿದ್ಯುತ್ ಅನ್ನು ಎಲ್ಲಿ grid ನಿಂದ ಕಳುಹಿಸುತ್ತೀರಿ ಅಲ್ಲಿ meter ಹಾಕಿ, ಎಷ್ಟು ವಿದ್ಯುತ್ ಅನ್ನು ಸರಬರಾಜು ಮಾಡುತ್ತೀರಿ, ಎಷ್ಟು ಬಳಕೆಯಾಗುತ್ತಿದೆ ಎನ್ನುವುದರ accountability ಗಾಗಿ ನೀವು ಮೀಟರ್ ಹಾಕಿ

ಎಂದು ಹೇಳಿದ್ದೆವು. ಅದರ ಜೊತೆಗೆ energy audit ಮಾಡಿ ಎಂದು ಹೇಳಿದ್ದೆವು. ಆದರೆ ಈ ಸರ್ಕಾರ energy audit ಮಾಡುತ್ತಿಲ್ಲ. ಮಾಡುತ್ತನೇ ಇಲ್ಲ. ಇದರಿಂದ ಇವತ್ತು ಕಳ್ಳಕಾಕರು, ದೊಡ್ಡ ದೊಡ್ಡ ಕಾರ್ಖಾನೆ ಮಾಲೀಕರು, ಎಲ್ಲ ಕಳ್ಳತನ ಮಾಡುತ್ತಿದ್ದಾರೆ. ಇದರಿಂದ ಎಷ್ಟು energy ಹೋಗುತ್ತಿದೆ ಎನ್ನುವುದು ಗೊತ್ತೇ ಆಗುತ್ತಿಲ್ಲ. Energy Audit ಆಗಲೇಬೇಕು, ಈ ಸರ್ಕಾರ ಕೂಡಲೇ energy Audit ಅನ್ನು ಮಾಡಿಸಬೇಕೆಂದು ಹೇಳುತ್ತೇನೆ. ಇನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ಏನಿದೆ, this is a big white elephant. ಇದು ಬಿಳಿಯಾನೆ. ಮುಖ್ಯಮಂತ್ರಿಗಳು ಅದರ chairman ಆಗಿದ್ದಾರೆಂದಕ್ಷಣ ಯಾರೂ ಕೇಳುವ ಹಾಗೆಯೇ ಇಲ್ಲ. ಈಗ ಬಹುಶಃ ರೇವಣ್ಣನವರು ಅದಕ್ಕೆ chairman ಆಗಿದ್ದಾರೆಂದು ತೋರುತ್ತದೆ. ಅವರನ್ನಂತೂ ಯಾರೂ ಮಾತನಾಡಿಸುವ ಹಾಗೆಯೇ ಇಲ್ಲ. ಅವರನ್ನು ಕೇಳುವ ಹಾಗಿಲ್ಲ, ರೇವಣ್ಣನವರನ್ನು ಮಾತನಾಡಿಸುವ ಹಾಗಿಲ್ಲ. ಹೀಗಾಗಿ, KPTCL ನಲ್ಲಿ ಸರಿಯಾಗಿ ಕೆಲಸಗಳು ನಿರ್ವಹಣೆಯಾಗುತ್ತಿಲ್ಲ. ಸರಿಯಾಗಿ ನಿಗಾವಹಿಸಿ ವಿದ್ಯುತ್‌ನ ಸರಬರಾಜು ಏನು ಮಾಡುತ್ತಿದ್ದಾರೆ, ಅದರ ಸರಿಯಾದ ನಿರ್ವಹಣೆ T&D loss ಅನ್ನು ಕಡಿಮೆ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಈ ಸರ್ಕಾರ ಹೇಳಬೇಕಾಗುತ್ತದೆ. ಈ ಮತನ್ನು ಏಕೆ ಹೇಳೂತ್ತಿದ್ದೇನೆಂದರೆ, ನಮ್ಮ ಪಕ್ಕದ ರಾಜ್ಯದಲ್ಲಿ T and D loss ಎಷ್ಟಿದೆ? ಆಂಧ್ರಪ್ರದೇಶದಲ್ಲಿ 23% T and D loss ಮಹಾರಾಷ್ಟ್ರ 25% T and D loss Tamilnadu 19% T and D loss ಗುಜರಾತ್ 18% T and D loss ಆದರೆ ಕರ್ನಾಟಕ 33% T and D loss ಇದೆ. ಅದಕ್ಕೆ ಗಂಭೀರವಾಗಿ ಈ ಸರ್ಕಾರ ಚಿಂತನೆಯನ್ನು ಮಾಡಬೇಕಾಗಿದೆ. ಈ ಸಂದರ್ಭದಲ್ಲಿ ನಾನು ಈ ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಏನು ಇವತ್ತು ನೀರಾವರಿ, ಲೋಕೋಪಯೋಗಿ ಮತ್ತು ಮೂಲಭೂತ ಸೌಕರ್ಯ, Energy Department ಇವು ಬಹಳ ಮುಖ್ಯವಾದದ್ದು. ಈ ಸರ್ಕಾರ ಈ ಇಲಾಖೆಗಳಿಗೆ ಹೆಚ್ಚು ಗಮನ ಹರಿಸುತ್ತಿಲ್ಲ. ಕೇವಲ ಅಗ್ಗದ ಪ್ರಚಾರದ ಕಾರ್ಯಕ್ರಮಗಳನ್ನು ಮಾಡುತ್ತಿದೆ. ನಮ್ಮ ಎಲ್ಲಾ ಹಣ ಇಂಥ ಕಾರ್ಯಕ್ರಮಗಳಿಗೆ ಹೋಗುತ್ತಿದೆ. ನೀರಾವರಿಗೆ ಹಣ ಕೊಡುತ್ತಿಲ್ಲ. ನಾನು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದೇನೆ. 29% ನಿಂದ 17% ತಾವು ಇಳಿಸಿದ್ದೀರಿ. ಇದರಿಂದ ಕರ್ನಾಟಕಕ್ಕೆ ಮುಂಬರುವ ದಿನಗಳಲ್ಲಿ ಬಹಳ ಘೋರ ಅನ್ಯಾಯವಾಗುತ್ತದೆ. ಅದಕ್ಕೆ ಈ ಸರ್ಕಾರ ಗಂಭೀರವಾದ ಚಿಂತನೆಯನ್ನು ಮಾಡಬೇಕು. ಅದನ್ನು ಬಿಟ್ಟು ನೀವು ಮುಂದಿನ ಚುನಾವಣೆಗೆ ಮಾತ್ರ ವಿಚಾರ ಮಾಡುತ್ತಿದ್ದೀರಿ. ಮುಂದಿನ ಚುನಾವಣೆಯಲ್ಲಿ ನೀವು ಗೆಲ್ಲಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರಿಗೆ ಇಷ್ಟೊಂದು ಬುದ್ಧಿ ಹೇಳಿದವರೇ ವಾಟಾಳ್ ನಾಗರಾಜ್‌ರವರು. ಈಗ ಅವರೇ ಇವರ ಭಾಷಣವನ್ನು ಕೇಳುತ್ತಿಲ್ಲ. ನಾನು ಏನು ಮಾಡಲಿ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಅವರ ಭಾಷಣದ ಬಗ್ಗೆ ನಾವು ಮೂರೂ ಜನ ವಿಶ್ಲೇಷಣೆ ಮಾಡುತ್ತಿದ್ದೇವೆ. ವಿಶ್ಲೇಷಣೆಯಲ್ಲಿ ಈಗ ತಾನೆ generatorಗೆ ಬಂದರು, ಮುಂದೆ ವಿದ್ಯುಚ್ಛಕ್ತಿಗೆ ಬಂದರು, ಅವರು ಬರ್ರ್ ಎಂದು ಬೀದರ್‌ಗೆ ಹೋಗುತ್ತಾರೆ, ತಕ್ಷಣ ಮೈಸೂರಿಗೆ ಬರುತ್ತಿದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ : ರೈಲು ವಿದ್ಯುತ್‌ಗೆ ಬೇಕಾಗಿತ್ತಲ್ಲ. ಶಾಖೋತ್ಪನ್ನ ಕೇಂದ್ರಕ್ಕೆ ಬೇಕಾಗಿತ್ತು. ಅದಕ್ಕೆ ನಾನು correct ಆಗಿ ಹೇಳಿದೆ.

ಗೊಂದಲ

ಶ್ರೀ ಜೆ.ಸಿ. ಮಾಧುಸ್ವಾಮಿ : ....ನಾವು ಮಾಡುತ್ತಿರಲಿಲ್ಲ. ವಿದ್ಯುತ್ ಮುಗಿಸಿದಿರಿ, ರೈಲಿಗೆ ಬಂದಿರಿ. ಮತ್ತೆ ವಾಪಸ್ಸು ಮೆಗಾವ್ಯಾಟ್‌ಗೆ ಹೋದಿರಿ.

ಗೊಂದಲ

ಉಪಾಧ್ಯಕ್ಷರು : ಈಗ ರೈಲಿನಿಂದ ಇಳಿದಿದ್ದಾರೆ. ಈಗ ಆಯಿತು. ಇನ್ನು ಒಂದು ನಿಮಿಷದಲ್ಲಿ ಮುಗಿಸಿಬಿಡಿ.

ಗೊಂದಲ

ಶ್ರೀ ಬಸವರಾಜ ರಾಯರೆಡ್ಡಿ : ರೈಲು ಏಕೆ ಹೇಳಿದೆನೆಂದರೆ, Thermal power station Bellary and Raichurಗೆ ಸುಮಾರು 40 ಸಾವಿರ ಮೆಟ್ರಿಕ್ ಟನ್ ಕಲ್ಲಿದ್ದಲು ಬೇಕು. ಈ Railway line ಆದರೆ ಮಾತ್ರ transport ಮಾಡಲಿಕ್ಕೆ ಸಾಧ್ಯವಾಗುತ್ತದೆ. ಅದಕ್ಕೆ ನಾನು ಹೇಳಿರುವುದು. ಇಲ್ಲದಿದ್ದರೆ ಬೇರೆ ರೈಲು ನಾನು ಹೇಳುತ್ತಿರಲಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಚೆನ್ನಾಗಿ ಮಾತನಾಡುತ್ತಿದ್ದಿರಿ. ಯಾರು ಏನೇ ಹೇಳಲಿ ನಾವು ಕೇಳುತ್ತಿದ್ದೆವು. ನೀವು ಒಂದು ಸಲ energy ಮೇಲೆ ಹೋದಿರಿ. ವಾಪಸ್ಸು ಬಂದಿರಿ.........

ಶ್ರೀ ಬಸವರಾಜ ರಾಯರೆಡ್ಡಿ : Energyಗೆ rail ಬೇಕಾಗಿತ್ತು. ಹೀಗಾಗಿ ಈ ಸರ್ಕಾರ ಜನಪರವಾದ ಅಗ್ಗದ ಪ್ರಚಾರ ಕಾರ್ಯಕ್ರಮ ಏತಕ್ಕೆ ಮಾಡುತ್ತಿದ್ದಾರೆ, ಅದು ಮುಂದಿನ ಚುನಾವಣೆಗಾಗಿ.

ಉಪಾಧ್ಯಕ್ಷರು : ಅಲ್ಲ, ರಾಯರೆಡ್ಡಿಯವರೆ, ನೀವು ಹೇಳದಿದ್ದರೆ ಈಗ ನಾನು declare ಮಾಡುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ : ಆದರೆ, ಮುಂದಿನ ಚುನಾವಣೆಯ ಬದಲು ಮುಂದಿನ ಜನಾಂಗದ ಸಲುವಾಗಿ ಈ ಕೆಲಸವನ್ನು ವಿದ್ಯುತ್ ಮತ್ತು ನೀರಾವರಿಗಾಗಿ ಮಾಡಿದರೆ ಮಾತ್ರ ಈ ಸರ್ಕಾರ ಸರಿಯಾದ ಮಾರ್ಗದಲ್ಲಿ ಹೋಗುತ್ತದೆಂದು ನಾನು ಭಾವಿಸುತ್ತೇನೆ. ನೀವು ಮುಂದಿನ ಚುನಾವಣೆಗೆ ಬಗ್ಗೆ

ಚಿಂತನೆ ಮಾಡದೇ ಮುಂದಿನ ಜನಾಂಗದ ಭವಿಷ್ಯಕ್ಕಾಗಿ ಚಿಂತನೆ ಮಾಡಬೇಕು. ಸರ್ಕಾರ ಅದರ ಬಗ್ಗೆ ಚಿಂತನೆ ಮಾಡುತ್ತಿಲ್ಲ. ಅದಕ್ಕಾಗಿ ನಾನು ಈ ಒಂದು ಬಜೆಟ್ ಅನ್ನು ವಿರೋಧ ಮಾಡುತ್ತೇನೆ.

6. ಗಮನ ಸೆಳೆಯುವ ಸೂಚನೆಗಳು

ಅ) **ವಿಷಯ:** ಬಾದಾಮಿ ತಾಲ್ಲೂಕಿನ ಹರೇಬೂದಿಹಾಳ ಗ್ರಾಮದ ಹತ್ತಿರವಿರುವ ಸೇತುವೆ ಮಳೆಯಿಂದ ಕೊಚ್ಚಿಹೋಗಿರುವ ಕುರಿತು,

ಶ್ರೀ ಮೇಟಿ ಹುಲ್ಲಪ ಯಮನಪ್ಪ, (ಗುಳೇದಗುಡ್ಡ) : ಮಾನ್ಯ ಉಪಾಧ್ಯಕ್ಷರೆ, ಬಾದಾಮಿ ತಾಲ್ಲೂಕಿನ ಹಿರೇಬೂದಿಹಾಳ ಗ್ರಾಮದ ಹತ್ತಿರವಿರುವ ಸೇತುವೆ ಮಳೆಯಿಂದ ಕೊಚ್ಚಿಹೋಗಿರುವ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಬಾದಾಮಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಕಮತಗಿ – ಅಗಸನಕೊಪ್ಪ ಮುಖ್ಯ ರಸ್ತೆಯಿಂದ ಹಿರೇಬೂಡಿಹಾಳ ಕೂಡು ರಸ್ತೆಯು ಒಟ್ಟು 1.30 ಕಿ.ಮೀ. ಇದ್ದು ಕಿ.ಮೀ. 0.00 ದಿಂದ 0.50 ಕಿ.ಮೀ. ವರೆಗೆ ಡಾಂಬರೀಕರಣವಾಗಿದ್ದು, ಬಾಕಿ ಉದ್ದವು ಜಲ್ಲಿ ಮೇಲ್ಮೈ ಹೊಂದಿರುತ್ತದೆ. ಹಿರೇಬೂದಿಹಾಳ ಗ್ರಾಮದ ಹತ್ತಿರ ಇದ್ದ ಕೆಳಮಟ್ಟದ ಸೇತುವೆಯು ಸದರಿ ರಸ್ತೆಯ ಕಿ.ಮೀ. 1.00 ರಲ್ಲಿ ಬರುತ್ತಿದ್ದು ಇದನ್ನು 1998ನೇ ಸಾಲಿಗಿಂತ ಮೊದಲು ನಿರ್ಮಿಸಲಾಗಿತ್ತು. ಸದರಿ ಸೇತುವೆಯ ಉದ್ದವು 35.00 ಮೀ. ಉದ್ದವಿರುತ್ತದೆ. ಹಿರೇಬೂದಿಹಾಳ ಗ್ರಾಮದ ಜನಸಂಖ್ಯೆಯು 1340 ಇರುತ್ತದೆ. ಸದರಿ ರಸ್ತೆಯ ಮೇಲೆ ಭಾರಿ ವಾಹನಗಳು ಸೇರಿ ಸುಮಾರು 25 ಸಂಖ್ಯೆ ವಾಹನಗಳು ಪ್ರತಿದಿನ ಸಂಚರಿಸುತ್ತವೆ. ಈ ರಸ್ತೆಯು ಬಾದಾಮಿ, ಗುಳೇದಗುಡ್ಡ, ಗುಳೇದಗುಡ್ಡ ರೈಲ್ವೆ ಸ್ಟೇಶನ್, ಹುಲಸಗೇರಿ, ಅಗಸನಕೊಪ್ಪಾ, ಕೆಲೂಡಿ, ತೋಗುಣಸಿ, ಜಮ್ಮನಟ್ಟಿ, ಖಾಜಿಬೀಳಗಿ ಮತ್ತು ಕೋಟಿಕಲ್ ಗ್ರಾಮಗಳನ್ನು ಸಂಪರ್ಕಿಸುತ್ತದೆ.

2001–02ನೇ ಸಾಲಿನಲ್ಲಿ ಸಂಪೂರ್ಣ ಗ್ರಾಮೀಣ ರೋಜಗಾರ್ ಯೋಜನೆಯಡಿ ರೂ. 1.00 ಲಕ್ಷದ ವೆಚ್ಚದಲ್ಲಿ ಈ ಸೇತುವೆಯನ್ನು ದುರಸ್ತಿಗೊಳಿಸಲಾಗಿದೆ.

2004–05ನೇ ಸಾಲಿನಲ್ಲಿ ಬಂದ ಭಾರಿ ಮಳೆಯಿಂದ ಈ ಸೇತುವೆಯು ಕೊಚ್ಚಿಕೊಂಡು ಹೋಗಿ ಸಂಪರ್ಕ ಕಡಿದು ಹೋಗಿರುತ್ತದೆ. ಈ ಸೇತುವೆಯ ಬದಲಾಗಿ ಆರ್.ಸಿ.ಸಿ. ಡೆಕ್‌ಸ್ಲ್ಯಾಬ್ ಸೇತುವೆ ನಿರ್ಮಾಣಕ್ಕಾಗಿ ಅಂದಾಜು ರೂ. 92.00 ಲಕ್ಷಗಳ ಅವಶ್ಯಕತೆಯಿದ್ದು ಅಂದಾಜನ್ನು ತಯಾರಿಸಲಾಗಿದೆ ಹಾಗೂ ತಾಂತ್ರಿಕ ಪರಿಶೀಲನೆಯಲ್ಲಿದೆ.